# ಕುರ್‌ಆನ್
# ಅಂತಿಮ ದೇವವಾಣಿ

ಡಾ| ಇಲ್ತಿಫಾತ್ ಅಹ್ಮದ್ ಇಸ್ಲಾಹೀ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

## ಪ್ರಕಾಶಕರ ಮಾತು

ಈ ಲೋಕಕ್ಕೆ ಅನೇಕ ದೇವ ಗ್ರಂಥಗಳು ಬಂದಿವೆ ಮತ್ತು ಅಸಂಖ್ಯಾತ ಪ್ರವಾದಿಗಳೂ ಆಗಮಿಸಿದ್ದಾರೆ. ಅವರೆಲ್ಲರ ಸಂದೇಶ ಒಂದೇ ಆಗಿತ್ತು. ಪ್ರಪಂಚದ ಸೃಷ್ಟಿಕರ್ತ, ಒಡೆಯ ಮತ್ತು ಅಧಿಪತಿಯಾದ ಅಲ್ಲಾಹನನ್ನು ಆರಾಧಿಸಬೇಕು ಮತ್ತು ಅವನ ಆಜ್ಞೆ ಪ್ರಕಾರ ಪ್ರವಾದಿಯನ್ನು ಅನುಸರಿಸಿ ಜೀವಿಸಬೇಕೆಂಬುದು ಮಾನವನಿಗೆ ವಿಧಿಸಲಾದ ಕರ್ತವ್ಯವಾಗಿತ್ತು. ಆದ್ದರಿಂದ ಎಲ್ಲ ಕಾಲಗಳಲ್ಲೂ ದೈವಿಕ ಧರ್ಮ ಅಥವಾ ಸನ್ಮಾರ್ಗ ಒಂದೇ ಆಗಿತ್ತು. ಈ ಮಾರ್ಗವನ್ನು ನಿರಾಕರಿಸಿದವರು, ಧಿಕ್ಕರಿಸಿದವರು ಅನೇಕ ಮತ-ಧರ್ಮಗಳಾಗಿ ಮಾರ್ಪಟ್ಟರು.

ಪ್ರವಾದಿಗಳ ಪೈಕಿ ಕೊನೆಯವರಾದ ಮುಹಮ್ಮದ್(ಸ) ದೇವನ ಅಂತಿಮ ಗ್ರಂಥ ಪವಿತ್ರ ಕುರ್‌ಆನನ್ನು ಲೋಕಕ್ಕೆ ಸಮರ್ಪಿಸಿದರು. ಇನ್ನು ಲೋಕಾಂತ್ಯದ ವರೆಗೂ ಯಾವುದೇ ದೇವಗ್ರಂಥ ಅವತೀರ್ಣಗೊಳ್ಳಲಾರದು. ಈ ಗ್ರಂಥವು 1500 ವರ್ಷಗಳು ಕಳೆದರೂ ಇಂದಿಗೂ ತನ್ನ ಮೂಲ ಸ್ವರೂಪದಲ್ಲೇ ಸುರಕ್ಷಿತವಾಗಿದೆ. ಕುರ್‌ಆನ್ ತನಗಿಂತ ಮುಂಚೆ ಬಂದ ಯಾವ ಗ್ರಂಥವನ್ನೂ ನಿರಾಕರಿಸುವುದಿಲ್ಲ. ಬದಲಾಗಿ ಅವುಗಳನ್ನು ಸಮರ್ಥಿಸುತ್ತದೆ, ದೃಢೀಕರಿಸುತ್ತದೆ. ಆದರೆ ಆ ಗ್ರಂಥಗಳೆಲ್ಲ ಮಾನವರ ಹಸ್ತಕ್ಷೇಪಗಳಿಂದಾಗಿ ವಿಕೃತಗೊಂಡಿರುವುದರಿಂದ ಅಥವಾ ಕೆಲವು ಅಳಿದು ಹೋಗಿರುವುದರಿಂದ ಪವಿತ್ರ ಕುರ್‌ಆನ್ ಮಾತ್ರ ಜೀವನದ ಮಾರ್ಗದರ್ಶಕವಾಗಿ ಉಳಿದಿದೆ. ಒಬ್ಬನು ಕುರ್‌ಆನನ್ನು ಅನುಸರಿಸಿ ಜೀವಿಸಿದರೆ ಅವನು ಹಿಂದಿನ ಎಲ್ಲ ಗ್ರಂಥಗಳ ಮೂಲ ಶಿಕ್ಷಣವನ್ನು ಅನುಸರಿಸಿದಂತಾಗುತ್ತದೆ.

ಪವಿತ್ರ ಕುರ್‌ಆನ್ ಅಂತಿಮ ದೈವ ಗ್ರಂಥವೆಂಬುದಕ್ಕೆ ಆ ಗ್ರಂಥವೇ ಅನೇಕ ಪುರಾವೆಗಳನ್ನು ಒದಗಿಸಿದೆ. ಅದರಲ್ಲಿ ಮಾನವನ ಮೂಲಭೂತ ಬೇಡಿಕೆಗಳಾದ ಏಕದೇವ ಸಿದ್ಧಾಂತ, ಪರಲೋಕದ ಚಿತ್ರಣ, ಸ್ವರ್ಗ-ನರಕ ಹಾಗೂ ಪ್ರವಾದಿತ್ವದ ಕುರಿತು ಸವಿಸ್ತಾರವಾದ ಮಾರ್ಗದರ್ಶನಗಳಿವೆ. ಜೊತೆಗೆ ಕುರ್‌ಆನಿನ ಆಶಯಗಳು ವೈಜ್ಞಾನಿಕವಾಗಿಯೂ ದೃಢೀಕರಿಸಲ್ಪಟ್ಟಿವೆ. 'ಕುರ್‌ಆನ್ ಅಂತಿಮ ದೇವವಾಣಿ' ಎಂಬ ಈ ಕೃತಿಯಲ್ಲಿ ಅದಕ್ಕೆ ಅನೇಕ ವೈಜ್ಞಾನಿಕ ಪುರಾವೆಗಳನ್ನೂ ಮಹಾನ್ ದಾರ್ಶನಿಕರ ಹೇಳಿಕೆಗಳನ್ನೂ ನೀಡಲಾಗಿದೆ. ಈ ಕೃತಿಯ ಅಧ್ಯಯನದಿಂದ ಸಂಪೂರ್ಣ ಕುರ್‌ಆನಿನ ಅಧ್ಯಯನದ ಕಡೆಗೆ ಒಲವು ಮೂಡದಿರಲಾರದು. ತನ್ಮೂಲಕ ಜೀವನವನ್ನು ಸಾರ್ಥಕಗೊಳಿಸಲು ಅದು ಸಹಾಯಕವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


ಪ್ರಥಮ ಮಾನವ ಜೋಡಿ ........ 5

ಅಂತಿಮ ದೇವ ಸಂದೇಶವಾಹಕರ ಆಗಮನಕ್ಕೆ ಮುಂಚೆ ........ 7

ಪೂರ್ಣ ಅಜ್ಞಾನ ........ 10

ಬಹುದೇವ ವಿಶ್ವಾಸದಿಂದುಂಟಾದ ಅಜ್ಞಾನ(ಶಿರ್ಕ್) ........ 13

ಮಾನವ ನಿರ್ಮಿತ ಜೀವನ ಸಿದ್ಧಾಂತ ........ 14

ಅಂತಿಮ ದೈವಿಕ ಗ್ರಂಥದ ವೈಜ್ಞಾನಿಕ ಪುರಾವೆಗಳು ........ 20

ಅಪಕೇಂದ್ರೀಯ ಬಲ ........ 26

ಸೌರ ಮಂಡಲ ........ 27

ಹನ್ನೊಂದು ಗ್ರಹಗಳು ........ 28

ಆದ್ ಜನಾಂಗ ........ 29

ಮನುಷ್ಯ ಜ್ಞಾನ ಮತ್ತು ದೈವಿಕ ಜ್ಞಾನ ........ 32

ಅಂತಿಮ ದೈವಿಕ ಗ್ರಂಥವು ಪ್ರಪಂಚಕ್ಕೆ ಏನನ್ನು ನೀಡಿದೆ? ........ 33

ದೇವರು ........ 36

ನರಕ ........ 41

ಸ್ವರ್ಗ ........ 43

ಆಧಿಪತ್ಯ ........ 44

ಆರಾಧನೆಗಳು ........ 48

# ಪ್ರಥಮ ಮಾನವ ಜೋಡಿ

ಇಂದು ಪ್ರಪಂಚದಾದ್ಯಂತ, ಈ ಜಗತ್ತನ್ನು ಸೃಷ್ಟಿಸಿರುವ ದೇವನು ಒಬ್ಬನೇ ಎಂಬ ನಂಬಿಕೆ ಇದೆ. ಕೆಲವರು ಅವನನ್ನು ಈಶ್ವರ ಎಂದು ಕರೆದರೆ ಮತ್ತೆ ಕೆಲವರು ಅಲ್ಲಾಹ್ ಎಂದೂ ಇನ್ನು ಕೆಲವರು ಗಾಡ್ ಎಂದೂ ಬೇರೆ ಕೆಲವರು ಖುದಾ ಎಂದೂ ಕರೆಯುತ್ತಾರೆ. ಸೃಷ್ಟಿಕರ್ತ ಈ ವಿಶಾಲ ಪ್ರಪಂಚದಲ್ಲಿ ಒಂದು ಸಣ್ಣ ಸ್ಥಳವನ್ನು ವಾಸ ಯೋಗ್ಯವನ್ನಾಗಿ ಮಾಡಿ ಅದರಲ್ಲಿರಲು ಒಂದು ಮಾನವ ಜೋಡಿಯನ್ನು ಕಳುಹಿಸಿದನು. ಕೆಲವರು ಇವರನ್ನು ಏಡಮ್ ಮತ್ತು ಈವ್ ಎಂದು ಕರೆದರೆ, ಇನ್ನು ಕೆಲವರು ಆದಮ್ ಮತ್ತು ಹವ್ವಾ ಎಂಬ ಹೆಸರಿನಿಂದ ಕರೆಯುತ್ತಾರೆ. ಹಲವರು ಬೇರೆ ಬೇರೆ ಹೆಸರುಗಳಿಂದ ಇವರನ್ನು ನೆನಪಿಸುತ್ತಾರೆ. ಸೃಷ್ಟಿಕರ್ತನು ಈ ಜೋಡಿಯನ್ನು ಸುಂದರ ಶರೀರ, ಉತ್ತಮ ಸಾಮರ್ಥ್ಯ ಮತ್ತು ಒಳಿತು-ಕೆಡುಕಿನ ಜ್ಞಾನವನ್ನು ನೀಡಿ ಸ್ವತಂತ್ರಗೊಳಿಸಿದನು. ಅವರ ಆವಶ್ಯಕತೆಗಳಿಗೆ ಬೇಕಾದಷ್ಟು ಸಾಮಗ್ರಿಗಳನ್ನು ಈ ಭೂಮಿಯಲ್ಲಿ ಉಂಟುಮಾಡಿರುವನು. ದೇವನು ನೀಡಿರುವ ಕೊಡುಗೆಗಳ ಕುರಿತು ಅರಿಯಲು ಮತ್ತು ಅವುಗಳನ್ನು ಉಪಯೋಗಿಸಲು ಸಾಧ್ಯವಾಗಲಿ ಎಂಬ ಉದ್ದೇಶದಿಂದ ಮನುಷ್ಯನಿಗೆ ಒಂದು ಮೆದುಳು ಮತ್ತು ಅದಕ್ಕೆ ಸಹಕರಿಸಲು ಪಂಚೇಂದ್ರಿಯಗಳನ್ನು ನೀಡಿರುವನು. ಇದರಿಂದಾಗಿಯೇ ಮನುಷ್ಯ ಹೊಸ ಹೊಸ ಸಂಶೋಧನೆಗಳನ್ನು ನಡೆಸಿ ಅನೇಕ ವಸ್ತುಗಳ ಉಪಯೋಗವನ್ನು ತಿಳಿಯುತ್ತಿದ್ದಾನೆ.

ಮನುಷ್ಯ ಸಂಘ ಜೀವಿ. ಸಮಾಜವು ಅವನ ಆವಶ್ಯಕತೆಯಾಗಿದೆ. ಒಂದು ವೇಳೆ ಮನುಷ್ಯರು ಸಂಘಟಿತವಾಗಿ ಜೀವನ ನಡೆಸದೇ ಹೋದರೆ, ಅವರು ಪರಸ್ಪರ ಒಟ್ಟು ಸೇರುತ್ತಿರಲಿಲ್ಲ ಮತ್ತು ದೇವನು ನೀಡಿದ ಸಮಸ್ತ ಕೊಡುಗೆಗಳು ಹಾಗೆಯೇ ಉಪಯೋಗ ವಾಗದೆ ಉಳಿದು ಬಿಡುತ್ತಿತ್ತು. ಮನುಷ್ಯ ಶಾಂತಿಪೂರ್ವಕ ಜೀವನ ಸಾಗಿಸಲು ದೇವನು ಅವನಿಗೆ ಒಂದು ಧರ್ಮವನ್ನು ಮತ್ತು ಒಂದು ಸಂವಿಧಾನವನ್ನು ನೀಡಿರುವನು.

ಮನುಷ್ಯನು ದೇವನ ಆದೇಶದಂತೆ ಅವನ ಧರ್ಮದಲ್ಲಿ ಅವನ ಸಂವಿಧಾನದಂತೆ ಜೀವಿಸಲು ಆರಂಭಿಸಿದಾಗ ಸಫಲನಾದನು. ಅವನು ಓರ್ವ ಉತ್ತಮ ವ್ಯಕ್ತಿಯಾಗಿ ಉತ್ತಮ ಸಮಾಜ ನಿರ್ಮಾಣವಾಯಿತು. ಪರಸ್ಪರ ಪ್ರೀತಿಯು ಹುಟ್ಟಿತು. ಸಮಾಜದಲ್ಲಿ ಉಚ್ಚ-ನೀಚತೆ, ಅಸ್ಪೃಶ್ಯತೆ ಇರಲಿಲ್ಲ. ಎಲ್ಲರೂ ಪ್ರೀತಿಯಿಂದ ಹೊಂದಿಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಕೆಲವು ದುಷ್ಟ ಜನರಿಗೆ ಇದು ಸರಿಕಾಣಲಿಲ್ಲ. ಅವರು ದೇಶದ

ಅಧಿಕಾರ ತಮ್ಮ ಕೈಗೆ ಬರಬೇಕೆಂದು ಯೋಚಿಸಿದರು. ಜನರು ಅವರ ಮುಂದೆ ಶಿರಬಾಗಿ ಗೌರವಪೂರ್ವಕವಾಗಿ ವಂದಿಸುತ್ತಿರಲಿ ಎಂಬುದು ಅವರ ನಿರೀಕ್ಷೆಯಾಗಿತ್ತು. ಪ್ರಪಂಚದ ಎಲ್ಲ ಅಧಿಕಾರಗಳು ಅವರ ಕೈಗೆ ಬರಬೇಕು ಮತ್ತು ಜನರು ತಮ್ಮ ಆವಶ್ಯಕತೆಗಳಿಗೆ ಇವರ ಮುಂದೆ ಕೈಚಾಚುವಂತಾಗಬೇಕು ಎಂಬುದೇ ಅವರ ಉದ್ದೇಶವಾಗಿತ್ತು. ಆದರೆ ದೈವಿಕ ಧರ್ಮ ಮತ್ತು ಸಂವಿಧಾನಗಳಿರುವಾಗ ಇದು ಸಾಧ್ಯವಿರಲಿಲ್ಲ. ಆದುದರಿಂದಲೇ ಈ ದುಷ್ಟರು ದೇವನ ಧರ್ಮ ಮತ್ತು ಅವನು ಕಳುಹಿಸಿದ ಸಂವಿಧಾನದಲ್ಲೇ ತಿದ್ದುಪಡಿ ಮಾಡಿದರು. ಕೆಲವನ್ನು ಹೊಸದಾಗಿ ಸೇರಿಸಿ ಹಲವನ್ನು ತೆಗೆದುಬಿಟ್ಟರು. ಈ ರೀತಿ ಧರ್ಮ ಮತ್ತು ಸಂವಿಧಾನದಲ್ಲಿ ಹಸ್ತಕ್ಷೇಪ ನಡೆಸಿದ ಕಾರಣ ಸಂಘಟಿತವಾಗಿ ಜೀವಿಸಬೇಕೆನ್ನುವ ಮಾನವ ಕಲ್ಪನೆಗೇ ಕೊಡಲಿಯೇಟು ಬಿತ್ತು. ಯಾವುದೇ ಸಮಾಜವು ದೇವನ ಧರ್ಮವನ್ನು ತ್ಯಜಿಸಿ ಒಂದು ದಿನವೂ ಶಾಂತಿಪೂರ್ವಕ ಜೀವನ ಸಾಗಿಸಲು ಸಾಧ್ಯವಿಲ್ಲ. ಇದರಿಂದಾಗಿಯೇ ವ್ಯಕ್ತಿಗಳು ಹಾದಿ ತಪ್ಪಿದರು. ಸಮಾಜವು ಕೆಟ್ಟಿತು ಮತ್ತು ಎಲ್ಲೆಡೆಯೂ ಉಚ್ಚ-ನೀಚತೆ, ಅಸ್ಪೃಶ್ಯತೆ ತಲೆ ಎತ್ತಿತು. ಸಮಾಜವು ವರ್ಗಗಳಾಗಿ ವಿಭಜನೆಗೊಂಡಿತು. ಒಂದು ವರ್ಗವು ಇನ್ನೊಂದು ವರ್ಗವನ್ನು ದ್ವೇಷಿಸಲು ಆರಂಭಿಸಿತು. ಎಲ್ಲೆಡೆ ದೊಂಬಿ, ಕೊಲೆ ಸುಲಿಗೆಗಳು ಆರಂಭವಾದುವು. ದೇವನು ಇನ್ನೋರ್ವ ಸಂದೇಶವಾಹಕರ ಜೊತೆ ತನ್ನ ಧರ್ಮವನ್ನೂ ಸಂವಿಧಾನ(ಗ್ರಂಥ)ವನ್ನೂ ಪುನಃ ಭೂಮಿಗೆ ಕಳುಹಿಸಿಕೊಟ್ಟನು. ಇದು ಮಾನವ ನಿರ್ಮಿತ ಧರ್ಮ ಮತ್ತು ಸಂವಿಧಾನವನ್ನು ಕೊನೆಗಾಣಿಸಿತು. ಅವುಗಳ ಸ್ಥಳದಲ್ಲಿ ದೈವಿಕ ಧರ್ಮ ಮತ್ತು ಕಾನೂನುಗಳು ಅಸ್ತಿತ್ವಕ್ಕೆ ಬಂದವು. ಇದೇ ರೀತಿ ಮಾನವ ನಿರ್ಮಿತ ಧರ್ಮ-ಕಾನೂನುಗಳು ಮತ್ತು ದೈವಿಕ ಧರ್ಮ ಕಾನೂನುಗಳ ಮಧ್ಯೆ ಸಂಘರ್ಷಗಳು ನಡೆಯುತ್ತಲೇ ಇದ್ದುವು. ಒಮ್ಮೆ ಇವರು ಮೇಲುಗೈ ಸಾಧಿಸಿದಂತೆ ಕಂಡುಬಂದರೆ ಮತ್ತೊಮ್ಮೆ ಅವರು ಮೇಲುಗೈ ಸಾಧಿಸಿದರು. ಈ ರೀತಿ ನಿರಂತರ ಸಂಘರ್ಷವು ಮುಂದುವರಿಯಿತು.

ದೇವನು ಅವನ ಧರ್ಮ, ಗ್ರಂಥ ಮತ್ತು ಸಂದೇಶವಾಹಕರ ಮೂಲಕ ಇಡೀ ಮಾನವ ಸಮೂಹವನ್ನು ಒಟ್ಟುಗೂಡಿಸಬಯಸಿದ್ದನು. ಇದರಿಂದ ದಿನನಿತ್ಯ ನಡೆಯುವ ನಾಶ-ನಷ್ಟಗಳು ಕೊನೆಗೊಳ್ಳಲು ಸಾಧ್ಯವಿತ್ತು. ಏಕೆಂದರೆ ಮಾನವನು ಪ್ರಗತಿಯ ಆರಂಭ ಹಂತದಲ್ಲಿದ್ದನು. ಈ ಸಂದೇಶ ಸಾರ್ವತ್ರಿಕಗೊಳ್ಳಲು, ಎರಡು ದೇಶಗಳ ಮಧ್ಯೆ ಕೆಲವೊಮ್ಮೆ ಸಮುದ್ರ ಅಡ್ಡವಿದ್ದರೆ, ಮತ್ತೆ ಕೆಲವೆಡೆ ಮರುಭೂಮಿ, ಬೇರೆಡೆ ಬೆಟ್ಟ ಗುಡ್ಡಗಳು. ಹಲವೆಡೆ ದಟ್ಟ ಅರಣ್ಯಗಳು ತಡೆಯಾಗಿದ್ದುವು. ಅಂದಿನ ಮನುಷ್ಯರಿಗೆ ಈ ಕಠಿಣ ದಾರಿಯನ್ನು ಕ್ರಮಿಸಿ ಹೋಗುವ ಸಾಮರ್ಥ್ಯವಿರಲಿಲ್ಲ.

ದೈವಿಕ ಧರ್ಮ ಮತ್ತು ಸಂವಿಧಾನವು ಮನುಷ್ಯ ಸಮಾಜದ ಆವಶ್ಯಕತೆಯಾಗಿದೆ. ಇವುಗಳಿಲ್ಲದಿದ್ದರೆ ಸಭ್ಯ ಸಮಾಜವು ಒಂದು ದಿನದ ಮಟ್ಟಿಗೂ ಜೀವಂತವಿರಲಾರದು. ಈ ಕಾರಣಗಳಿಂದಾಗಿಯೇ ದೇವನು ಎಲ್ಲ ಕಾಲ ಮತ್ತು ಸಮುದಾಯಗಳ ಜನರಿಗೆ ತನ್ನ ಸಂದೇಶವಾಹಕರನ್ನು ಮತ್ತು ಗ್ರಂಥವನ್ನು(ಸಂವಿಧಾನ) ಕಳುಹಿಸಿಕೊಟ್ಟಿರುವನು. ಅದು ಅವರ ಭಾಷೆಯಲ್ಲಿದ್ದು ಅವರಿಗೆ ಜೀವನ ಪದ್ಧತಿಯನ್ನು ಕಲಿಸಿಕೊಟ್ಟಿತು.

# ಅಂತಿಮ ದೇವ ಸಂದೇಶವಾಹಕರ ಆಗಮನಕ್ಕೆ ಮುಂಚೆ ಜಗತ್ತಿನ ಪರಿಸ್ಥಿತಿ

ಮನುಷ್ಯ ಪ್ರಗತಿಯ ಶಿಖರವನ್ನು ಏರಿದಂತೆ, ಸಂಚಾರ ವಸ್ತುಗಳ ಮೇಲೆ ನಿಯಂತ್ರಣವನ್ನು ಸಾಧಿಸಿದನು. ಆಗ ದೇವನು ತನ್ನ ಇಚ್ಛೆಯಂತೆ ದೇವಸಂದೇಶವಾಹಕ ಹ. ಮುಹಮ್ಮದ್‌ರನ್ನು(ಸ) ಅಖಿಲ ಮಾನವ ಜಗತ್ತಿಗಾಗಿ ತನ್ನ ಅಂತಿಮ ಪ್ರವಾದಿಯಾಗಿ ಕಳುಹಿಸಿದನು. ಅವರ ಮೂಲಕ ಅಂತಿಮ ಗ್ರಂಥ ಕುರ್‌ಆನನ್ನು ಕಳುಹಿಸಿದನು. ಇನ್ನು ಯಾವ ದೇವ ಸಂದೇಶವಾಹಕರಾಗಲೀ ಗ್ರಂಥವಾಗಲೀ ಬರಲಿಕ್ಕಿಲ್ಲ. ಈ ಗ್ರಂಥವನ್ನು ಸುರಕ್ಷಿತವಾಗಿರಿಸುವ ಜವಾಬ್ದಾರಿಯನ್ನು ಸ್ವತಃ ದೇವನೇ ವಹಿಸಿಕೊಂಡಿರುವನು. ಆದುದರಿಂದಲೇ ಇಂದಿಗೂ ಪವಿತ್ರ ಕುರ್‌ಆನ್ ಮೂಲ ಸ್ವರೂಪದಲ್ಲೇ ಸುರಕ್ಷಿತವಾಗಿದೆ.

ಪ್ರವಾದಿ ಮುಹಮ್ಮದ್(ಸ) ದೇವಸಂದೇಶವಾಹಕರಾಗಿ ಅಖಿಲ ಮಾನವ ಜಗತ್ತಿಗೆ ದೇವಗ್ರಂಥ(ಕುರ್‌ಆನ್)ವನ್ನು ತಂದಾಗ ಪ್ರಪಂಚದ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿತ್ತು. ಅದುವರೆಗೆ ಬಂದ ಎಲ್ಲ ಗ್ರಂಥಗಳು ಮಾನವ ಹಸ್ತಕ್ಷೇಪದಿಂದಾಗಿ ಅರ್ಥಹೀನವೂ ಅಸಂಬದ್ಧವೂ ಆಗಿ ಬಿಟ್ಟದ್ದು ಉಪಯೋಗ ಶೂನ್ಯವಾಗಿದ್ದುವು. ದೇವ ಸಂದೇಶವಾಹಕರ ಜೀವನ ಚರಿತ್ರೆ ಕಥೆಗಳ ರೂಪದಲ್ಲಿ ಪ್ರಚಲಿತದಲ್ಲಿದ್ದುವು. ಸಹಸ್ರಾರು ವರ್ಷಗಳಿಂದ ಯಾವುದೇ ದೇವಸಂದೇಶವಾಹಕರ ಆಗಮನವಾಗಿರಲಿಲ್ಲ. ಒಟ್ಟು ಮಾನವ ಸಮೂಹವು ಅಂಧಕಾರದಲ್ಲಿ ಮುಳುಗಿತ್ತು. ವಿಗ್ರಹಾರಾಧನೆ ಜಗತ್ತಿನಲ್ಲೆಲ್ಲಾ ವ್ಯಾಪಕವಾಗಿತ್ತು. ಇದು ಮನುಷ್ಯನನ್ನು ಸುಲಭವಾಗಿ ಶೋಷಿಸಲು ಉತ್ತಮ ಉಪಾಧಿಯಾಗಿತ್ತು. ಸಮಾಜವು ವರ್ಗಗಳಾಗಿ ವಿಭಜನೆಗೊಂಡಿತ್ತು. ಒಂದು ವರ್ಗವು ಇನ್ನೊಂದನ್ನು ಶೋಷಿಸುತ್ತಿತ್ತು. ಈಜಿಪ್ಟಿನ ಜನರು ಸೂರ್ಯನನ್ನು ದೊಡ್ಡ ದೇವನೆಂದು ನಂಬುತ್ತಿದ್ದರು. ಅವರ ಪೈಕಿ ಚಾಣಾಕ್ಷ ಮನುಷ್ಯನೊಬ್ಬ ತನ್ನನ್ನು ಸೂರ್ಯನ ಮಗ(ಫಿರ್‌ಔನ್) ಎಂದು ಪರಿಚಯಿಸಿ ಕೊಂಡನು. ಜನರು ಅವನನ್ನು ಪೂಜಿಸುತ್ತಿದ್ದರು. ಅವನು ಅಲ್ಲಿಯ ಸರ್ವಾಧಿಕಾರಿಯಾಗಿ ಮಾರ್ಪಟ್ಟನು. ಏಕೆಂದರೆ ಜನರು ತಾವು ನಂಬುವ ದೇವರುಗಳ ಮುಂದೆ ವಿದ್ರೋಹದ ನೀತಿಯನ್ನು ಅನುಸರಿಸುತ್ತಿರಲಿಲ್ಲ. ಇದನ್ನು ನೋಡಿದ ಜಪಾನಿನ ಓರ್ವ ಚತುರ ಮನುಷ್ಯ ನಾನು ಮಿಕಾಡೋ ಎಂದು ಘೋಷಿಸಿದ. ಇದರ ಅರ್ಥ ಕೂಡಾ ಸೂರ್ಯನ ಮಗ.

ಜಪಾನಿನ ಜನರು ಸೂರ್ಯನನ್ನು ಮಹಾ ದೇವರೆಂದು ನಂಬುತ್ತಿದ್ದರು. ಜಪಾನಿನಲ್ಲಿ ಮಿಕಾಡೋನ ಆಳ್ವಿಕೆ ಆರಂಭವಾಯಿತು. ಇದೇ ಪ್ರಕಾರ ಭಾರತದಲ್ಲಿಯೂ ಸೂರ್ಯವಂಶಿ ಮತ್ತು ಚಂದ್ರವಂಶಿ ಎಂಬ ಹೆಸರಿನಲ್ಲಿ ನಾವು ಸೂರ್ಯ ಮತ್ತು ಚಂದ್ರನ ಸಂಬಂಧಿಗಳೆಂದು ಹೇಳಿಕೊಂಡು ಕೆಲವು ರಾಜರು ತಮ್ಮ ಆಳ್ವಿಕೆಯನ್ನು ಭದ್ರಪಡಿಸಿಕೊಂಡರು. ಜಗತ್ತಿನೆಲ್ಲೆಡೆ ಮಾನವನ ಶೋಷಣೆ ಆರಂಭವಾಯಿತು.

ಮಾನವ ಜಗತ್ತಿನ ಈ ದುರ್ದೆಸೆಯನ್ನು ಕಂಡು ಕೆಲವು ಸಜ್ಜನರು ಮನುಷ್ಯರನ್ನು ಇದರಿಂದ ರಕ್ಷಿಸಲು ಬಯಸಿದರು. ಯಾವಾಗಲೂ ಹೊಸ ಸಿದ್ಧಾಂತವನ್ನು ರೂಪಿಸಿದರೆ ಅದರ ಆರಂಭವು ತತ್ವಜ್ಞಾನದಿಂದಲೇ ಆರಂಭವಾಗಬೇಕು. ಅರ್ಥಾತ್ ಈ ಪ್ರಪಂಚ ಎಂದರೇನು? ಹೇಗೆ ನಿರ್ಮಿತವಾಯಿತು? ಹೇಗೆ ನಡೆಯುತ್ತಿದೆ? ಮನುಷ್ಯನು ಎಲ್ಲಿಂದ ಬಂದ? ಪ್ರಪಂಚದೊಂದಿಗೆ ಮನುಷ್ಯನ ಸಂಬಂಧ ಏನು ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ ಎಂಬುದು ಅವರಿಗೆ ತಿಳಿದಿತ್ತು.

ಪ್ರಪಂಚದಲ್ಲಿ ಕೆಲವು ವಸ್ತುಗಳು ಈ ರೀತಿ ಇವೆ. ಅವುಗಳು ನಮ್ಮ ಇಂದ್ರಿಯಗಳ ಮೂಲಕ ಅನುಭವಕ್ಕೆ ಬರುತ್ತವೆ. ವೈಜ್ಞಾನಿಕ ಉಪಕರಣಗಳ ಸಹಾಯದಿಂದ ಇವುಗಳ ಕುರಿತು ಮಾಹಿತಿ ದೊರೆಯುತ್ತದೆ. ಇದನ್ನು ಉಪಯೋಗಿಸಿ ಹೊಸ ಹೊಸ ಸೂತ್ರಗಳನ್ನು ರಚಿಸಬಹುದಾಗಿದೆ. ಆದುದರಿಂದ ಈ ರೀತಿಯ ವಸ್ತುಗಳ ಬಗ್ಗೆ ತಿಳಿಸಿಕೊಡಲು ದೇವನು ವಿಶೇಷ ವ್ಯವಸ್ಥೆ ಮಾಡಬೇಕಾದ ಅಗತ್ಯವಿಲ್ಲ. ಏಕೆಂದರೆ ಈ ವಿಷಯಗಳು ನಮ್ಮ ಚಿಂತನೆ-ಆಲೋಚನೆಗಳಿಗೆ ಹೊಳೆಯುವ ಕ್ಷೇತ್ರವಾಗಿದೆ.

ಇನ್ನು ಕೆಲವು ವಸ್ತುಗಳು ಈ ರೀತಿ ಇವೆ. ಅವುಗಳು ನಮ್ಮ ಜ್ಞಾನೇಂದ್ರಿಯಗಳ ಅನುಭವಕ್ಕೆ ಮತ್ತು ವೈಜ್ಞಾನಿಕ ಯಂತ್ರಗಳ ಹಿಡಿತಕ್ಕೆ ನಿಲುಕದಷ್ಟು ದೂರದಲ್ಲಿವೆ. ಇವುಗಳನ್ನು ಅಳತೆ ಮಾಡಲು ಅಥವಾ ತೂಗಿ ನೋಡಲು ಸಾಧ್ಯವಿಲ್ಲ. ನಮ್ಮ ಆಲೋಚನೆಯಿಂದ ಇದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಇದನ್ನು ಜ್ಞಾನ(Knowledge) ಎನ್ನುತ್ತಾರೆ.

ಮನುಷ್ಯನ ಸಾಮಾನ್ಯ ಚಿಂತನೆಗೆ ಅತೀತವಾದ ಜ್ಞಾನವನ್ನು ತಿಳಿಯಲು ಅವನು ದೇವನಿಗೆ ಅವಲಂಬಿತನಾಗಿದ್ದಾನೆ. ದೇವನು ಪುಸ್ತಕಗಳಲ್ಲಿ ಮಾಹಿತಿಯನ್ನು ಮುದ್ರಿಸಿ ಎಲ್ಲರ ಕೈಗೂ ಒಂದೊಂದು ಪುಸ್ತಕ ಕೊಟ್ಟು ಸ್ವಯಂ ಅವರೇ ಓದಿಕೊಂಡು ಈ ಪ್ರಪಂಚ ಮತ್ತು ಸ್ವತಃ ಮನುಷ್ಯನ ವಾಸ್ತವಿಕತೆ ಏನು? ಈ ಸತ್ಯದಂತೆ ಜೀವಿಸಬೇಕಾದರೆ ಭೂಮಿಯ ಮೇಲೆ ನಿನ್ನ ನಡವಳಿಕೆ ಹೇಗಿರಬೇಕು ಎಂಬುದನ್ನು ಸ್ವತಃ ತಿಳಿದುಕೊಳ್ಳುವಂತೆ ಮಾಡಲಿಲ್ಲ. ಬದಲಾಗಿ ಈ ಎಲ್ಲಾ ವಿಷಯಗಳನ್ನು ತಿಳಿಸಿ ಕೊಡಲು ದೇವನು ದೇವ ಸಂದೇಶವಾಹಕರನ್ನು ಮಧ್ಯವರ್ತಿಯಾಗಿ ಮಾಡಿದ್ದಾನೆ. 'ದಿವ್ಯವಾಣಿ'(ವಹ್ಯ್)ಯ ಮೂಲಕ ಈ ಸತ್ಯವನ್ನು ದೇವಸಂದೇಶವಾಹಕರಿಗೆ ನೀಡಿ ಜನರಿಗೆ ಈ ಜ್ಞಾನವನ್ನು ಕಲಿಸಿಕೊಡುವ ಹೊಣೆಯನ್ನು ವಹಿಸಿಕೊಡಲಾಗಿದೆ.

ಆ ಕಾಲದ ವಿಚಾರವಂತರು, ದಾರ್ಶನಿಕರು, ಸಮಾಜ ಸುಧಾರಕರು ಮನುಷ್ಯನ ಈ ದುರ್ದೆಸೆಯನ್ನು ಕಂಡು ಬಹಳ ದುಃಖಿತರಾದರು. ಅವರು ಮನುಷ್ಯರಿಗೆ ಉತ್ತಮ ಜೀವನ ಸಿದ್ಧಾಂತವನ್ನು ತೋರಿಸಿಕೊಟ್ಟು, ಈ ಸಂಕಷ್ಟದಿಂದ ಪಾರುಗೊಳಿಸಬಯಸಿದ್ದರು. ಅವರ ಪ್ರಕಾರ ಮೂರು ವಿಧದ ಜೀವನ ಸಿದ್ಧಾಂತಗಳು ಮಾತ್ರ ಇರಲಿಕ್ಕೆ ಸಾಧ್ಯ:

1) ಮಾನವನ ಜ್ಞಾನೇಂದ್ರಿಯಕ್ಕೆ ನಿಲುಕುವ ಜ್ಞಾನದ ಆಧಾರದಲ್ಲಿ ಜೀವನ ಸಿದ್ಧಾಂತವನ್ನು ರೂಪಿಸುವುದು. ಇದನ್ನು ಪೂರ್ಣ ಅಜ್ಞಾನವೆಂದೂ ಕರೆಯಬಹುದು.

2) ಮಾನವನ ಜ್ಞಾನೇಂದ್ರಿಯಕ್ಕೆ ನಿಲುಕುವ ಜ್ಞಾನದೊಂದಿಗೆ ಕೆಲವು ಊಹೆಗಳು ಮತ್ತು ಅನುಭವಗಳಲ್ಲಿ ಸಿಕ್ಕ ಜ್ಞಾನವನ್ನೂ ಸೇರಿಸಿಕೊಂಡು ಒಂದು ಜೀವನ ಸಿದ್ಧಾಂತವನ್ನು ರೂಪಿಸುವುದು. ಇದನ್ನು ಬಹುದೇವ ವಿಶ್ವಾಸಿ ಅಜ್ಞಾನ ಎಂದೂ ಕರೆಯಬಹುದು.

3) ದೇವನು ಸ್ವತಃ ದೈವಿಕ ಗ್ರಂಥದ ಮೂಲಕ ಜೀವನ ಸಿದ್ಧಾಂತವನ್ನು ಕಳುಹಿಸಿ ಕೊಡುವುದು. ಈ ಮೂರನೆಯದು ಆ ದಿನಗಳಲ್ಲಿ ಸಂಭವನೀಯವಾಗಿರಲಿಲ್ಲ. ದೇವನಿಂದ ಅದುವರೆಗೆ ಬಂದ ಎಲ್ಲ ದೈವಿಕ ಗ್ರಂಥಗಳು ಮಾನವನ ಹಸ್ತಕ್ಷೇಪಕ್ಕೆ ಒಳಗಾಗಿದ್ದವು. ಸಾವಿರಾರು ವರ್ಷಗಳಿಂದ ಯಾವುದೇ ದೈವಿಕ ಗ್ರಂಥವೂ ಬಂದಿರಲಿಲ್ಲ. ಆದುದರಿಂದ ಅಂದು ಮನುಷ್ಯನ ಬಳಿ ಎರಡೇ ಆಯ್ಕೆಗಳಿದ್ದುವು. ಒಂದು ಪೂರ್ಣ ಅಜ್ಞಾನ, ಎರಡನೆಯದು ಬಹುದೇವ ವಿಶ್ವಾಸ. ಹಾಗೆಂದರೇನು ಎಂಬುದನ್ನು ನೋಡೋಣ.

# ಪೂರ್ಣ ಅಜ್ಞಾನ

ಮಾನವ ತನ್ನ ಜ್ಞಾನೇಂದ್ರಿಯದಿಂದ ಸಮಸ್ಯೆಗಳನ್ನು ಬಗೆಹರಿಸಲು ಕುಳಿತರೆ, ಅವನು ಕೊನೆಗೆ ಇಡೀ ಪ್ರಪಂಚವು ಆಕಸ್ಮಿಕವಾಗಿ ಉಂಟಾಗಿದೆ ಮತ್ತು ಇದರ ಹಿಂದೆ ಯಾವುದೇ ಉದ್ದೇಶವಿಲ್ಲ ಎಂಬ ತೀರ್ಮಾನಕ್ಕೆ ಬಂದು ಬಿಡುತ್ತಾನೆ. ಈ ಪ್ರಪಂಚ ತನ್ನಷ್ಟಕ್ಕೇ ಉಂಟಾಗಿದೆ. ತನ್ನಿಂತಾನೇ ನಡೆಯುತ್ತಿದೆ ಮತ್ತು ಕೊನೆಗೊಂದು ದಿನ ತನ್ನಿಂತಾನೇ ಯಾವುದೇ ಪರಿಣಾಮವಿಲ್ಲದೆ ಕೊನೆಗೊಳ್ಳುತ್ತದೆ. ಈ ಅಖಿಲ ವಿಶ್ವಕ್ಕೆ ಪ್ರಭು ಇರುವಂತೆ ಭಾಸವಾಗುವುದಿಲ್ಲ. ದೇವನಿಲ್ಲ, ಇದ್ದರೂ ಅವನಿಗೆ ಮನುಷ್ಯನೊಂದಿಗೆ ಯಾವುದೇ ಸಂಬಂಧವಿಲ್ಲ ಎಂಬುದು ಈ ಸಿದ್ಧಾಂತವಾದಿಗಳ ನಿಲುವು. ಮಾನವ ಒಂದು ರೀತಿಯ ಪ್ರಾಣಿ. ಇವನು ಕೂಡಾ ಬಹುಶಃ ಆಕಸ್ಮಿಕವಾಗಿ ಹುಟ್ಟಿರಬಹುದು. ಮನುಷ್ಯನನ್ನು ಯಾರಾದರೂ ಸೃಷ್ಟಿಸಿದ್ದೇ ಅಥವಾ ಸ್ವತಃ ಹುಟ್ಟಿಕೊಂಡನೇ ಎಂಬುದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಇದು ನಿರಾಧಾರ ಪ್ರಶ್ನೆ. ಮನುಷ್ಯ ಈ ಭೂಮಿಯ ಮೇಲೆ ವಾಸಿಸುತ್ತಾನೆ. ಅವನಿಗೆ ಕೆಲವು ಆಶೆ ಆಕಾಂಕ್ಷೆಗಳಿವೆ. ಅವುಗಳನ್ನು ಪೂರ್ತಿಗೊಳಿಸಲು ಅವನಲ್ಲಿ ಆಂತರಿಕ ಪ್ರೇರಣೆಯುಂಟಾಗುತ್ತದೆ. ಕೆಲವು ಶಕ್ತಿಗಳು ಮತ್ತು ಯಂತ್ರಗಳು ಅವನ ಆಶೆಯನ್ನು ಪೂರ್ತಿಗೊಳಿಸಲು ಸಹಾಯಕವಾಗುತ್ತದೆ. ಅವನ ಎದುರಿಗೆ ಭೂಮಿಯಲ್ಲಿ ಲೆಕ್ಕವಿಲ್ಲದಷ್ಟು ಸಾಮಗ್ರಿಗಳು ಹರಡಿಕೊಂಡಿವೆ. ಅವನು ಶಕ್ತಿ ಮತ್ತು ಯಂತ್ರದ ಮೂಲಕ ತನ್ನ ಇಚ್ಛೆಗಳನ್ನು ಈಡೇರಿಸಿಕೊಳ್ಳುತ್ತಾನೆ. ಇಚ್ಛೆಗಳನ್ನು ಅತಿ ಹೆಚ್ಚು ಪೂರೈಸಿಕೊಳ್ಳುವುದು ಮತ್ತು ಆವಶ್ಯಕತೆಗಳನ್ನು ಈಡೇರಿಸಿಕೊಳ್ಳುವುದೇ ಅವನ ಜೀವನದ ಉದ್ದೇಶ. ಈ ಪ್ರಪಂಚವು ಇಚ್ಛೆಗಳನ್ನು ಪೂರೈಸಿಕೊಳ್ಳಲು ಇರುವ ಸ್ಥಳವೇ ಹೊರತು, ಇದಕ್ಕೆ ಬೇರೇನೂ ವಿಶೇಷತೆಯಿಲ್ಲ. ಅವನ ಮೇಲೆ ಯಾರದೇ ಮೇಲ್ನೋಟವಿಲ್ಲ. ಅವನು ಯಾವುದಕ್ಕೂ ಉತ್ತರದಾಯಿತ್ವದ ಹೊಣೆ ವಹಿಸಿಕೊಂಡಿಲ್ಲ. ಜೀವನವನ್ನು ಮುನ್ನಡೆಸಲು ಯಾವುದೇ ಜ್ಞಾನ ಭಂಡಾರವಾಗಲಿ, ನೀತಿಸಂಹಿತೆಯಾಗಲಿ ಲಭ್ಯವಿಲ್ಲ. ಆದುದರಿಂದ ಅವನು ಈ ಭೂಮಿಯ ಮೇಲೆ ಸ್ವತಂತ್ರ. ಅವನು ಪ್ರಶ್ನಿಸಲ್ಪಡುವುದಿಲ್ಲ. ಇದ್ದರೂ ತಾನೇ ರಚಿಸಿಕೊಂಡ ಸರಕಾರದ ಮುಂದೆ ಮಾತ್ರ. ಜೀವನವೇನಿದ್ದರೂ ಈ ಲೋಕಕ್ಕೇ ಸೀಮಿತ. ಕರ್ಮಗಳ ಪರಿಣಾಮವೂ ಕೇವಲ ಈ ಲೋಕಕ್ಕೆ ಸೀಮಿತ. ಈ ಲೌಕಿಕ ಜೀವನದ ಪರಿಣಾಮವನ್ನು ನೋಡಿಕೊಂಡು ಯಾವುದಾದರೂ ವಿಷಯ ಸರಿ ಅಥವಾ ತಪ್ಪು ಮತ್ತು ಲಾಭದಾಯಕ ಅಥವಾ ಹಾನಿಕಾರಕ ಎನಿಸಿಕೊಳ್ಳುತ್ತದೆ.

ಈ ರೀತಿಯ ಜೀವನ ಸಿದ್ಧಾಂತದಲ್ಲಿ ಜೀವನದ ಸಮಸ್ಯೆಗಳ ಪರಿಹಾರವನ್ನು ಅನುಭವದ ಆಧಾರದಲ್ಲಿ ಕಂಡುಕೊಳ್ಳಲಾಗುತ್ತದೆ. ವ್ಯಕ್ತಿಗತ ಜೀವನದಲ್ಲಿ ಈ ರೀತಿಯ ಜೀವನ ಸಿದ್ಧಾಂತದಿಂದ ಮಾನವ ಆದಿಯಿಂದ ಅಂತ್ಯದ ವರೆಗೆ ಸರ್ವತಂತ್ರ ಸ್ವತಂತ್ರ. ಅವನಿಗೆ ಯಾವುದೇ ಜವಾಬ್ದಾರಿಕೆಗಳಿಲ್ಲ. ತನ್ನ ಶಾರೀರಿಕ ಶಕ್ತಿ ಮತ್ತು ಅಸ್ತಿತ್ವದ ಒಡೆಯ ಆತನೇ. ಅದನ್ನು ಯಾವ ರೀತಿಯಲ್ಲಿ ಬೇಕಾದರೂ ಉಪಯೋಗಿಸಬಹುದು. ಪ್ರಪಂಚದ ಯಾವೆಲ್ಲ ವಸ್ತುಗಳು ಅವನ ಹಿಡಿತಕ್ಕೆ ಸಿಗುತ್ತದೋ, ಯಾವ ವಸ್ತುಗಳ ಮೇಲೆ ಅವನಿಗೆ ಪ್ರಾಬಲ್ಯವಿದೆಯೋ ಅವುಗಳೆಲ್ಲದರ ಒಡೆಯ ತಾನೇ ಎಂಬುದು ಅವನ ವಿಚಾರ. ಪ್ರಾಕೃತಿಕ ಮೇರೆಗಳು ಮತ್ತು ಸಾಮಾಜಿಕ ಜೀವನದ ಬಂಧನ ಮಾತ್ರ ಅವನ ಅಧಿಕಾರವನ್ನು ಮೊಟಕುಗೊಳಿಸಬಲ್ಲುದು. ಮನುಷ್ಯನಿಗೆ ಆತ್ಮದಲ್ಲಿ ನೈತಿಕ ವಿಚಾರ ಮತ್ತು ಜವಾಬ್ದಾರಿಕೆಯ ಪ್ರಜ್ಞೆ, ಜೀವನದ ಬಗ್ಗೆ ಪ್ರಶ್ನಿಸಬಹುದೆಂಬ ಭಯ ಇಲ್ಲದ ಕಾರಣ ಕಡಿವಾಣವಿಲ್ಲದ ಕುದುರೆಯಂತೆ ವರ್ತಿಸುತ್ತಾನೆ. ಅವನನ್ನು ನಿಯಂತ್ರಿಸಲು ಯಾರಿಗೂ ಸಾಧ್ಯವಿಲ್ಲ. ಮೇಲಿನಿಂದ ಯಾವುದೇ ನಿಯಂತ್ರಣವಿಲ್ಲದೇ ಹೋದರೆ ವ್ಯಕ್ತಿ ವಿಶ್ವಾಸಘಾತಕ, ಅತ್ಯಾಚಾರಿ ಮತ್ತು ಶಾಂತಿಭಂಗ ಮಾಡುವವನಾಗಿ ವರ್ತಿಸುವುದನ್ನು ಯಾರೂ ತಪ್ಪಿಸಲಾರರು. ಅವನು ಸ್ವಭಾವತಃ ಸ್ವಾರ್ಥಿಯೂ ಭೌತಿಕವಾದಿಯೂ ಆಗುವನು. ದೈಹಿಕ ಅಭಿಲಾಷೆಗಳ ಪೂರ್ತೀಕರಣ ಮತ್ತು ಪಾಶವೀಯ ಆವಶ್ಯಕತೆಗಳ ಹೊರತು ಅವನ ಜೀವನಕ್ಕೆ ಬೇರೆ ಉದ್ದೇಶವಿರಲಾರದು. ಅವನ ಉದ್ದೇಶವನ್ನು ಪೂರ್ತಿಗೊಳಿಸುವ ವಸ್ತುಗಳಿಗೆ ಮಾತ್ರ ಜೀವನದಲ್ಲಿ ಮಹತ್ವವಿರುವುದು. ಇಂತಹ ವಿಶ್ವಾಸವನ್ನು ಹೊಂದಿದ ಜನರು ಪ್ರಾಕೃತಿಕವಾಗಿ ಇದೇ ರೀತಿಯ ಗುಣವಿಶೇಷಗಳನ್ನು ಹೊಂದಿರುತ್ತಾರೆ. ಇಂತಹ ವ್ಯಕ್ತಿ ತನ್ನ ಸ್ವಾರ್ಥಕ್ಕಾಗಿ ದೇಶಭಕ್ತ ಮತ್ತು ಜನಾಂಗಕ್ಕಾಗಿ ತ್ಯಾಗ ಮಾಡುವವನು ಆಗಬಹುದು.

ಸಂಕ್ಷಿಪ್ತವಾಗಿ ಅವನು ಜೀವನದಲ್ಲಿ ಜವಾಬ್ದಾರಿಯುಳ್ಳ ಚಾರಿತ್ರ್ಯದ ಉದಾಹರಣೆಯನ್ನು ಮುಂದಿಡಬಹುದು. ಅವನ ವರ್ತನೆಗಳ ವಿಶ್ಲೇಷಣೆ ನಡೆಸಿದರೆ ಅವನ ಎಲ್ಲ ಕೆಲಸಗಳ ಹಿಂದೆ ಸ್ವಾರ್ಥವಿರುವುದು ಸಾಬೀತಾಗುತ್ತದೆ. ಹೆಚ್ಚೆಂದರೆ ಇಂತಹ ವ್ಯಕ್ತಿಗಳು ನ್ಯಾಷನಾಲಿಸ್ಟ್ ಆಗಬಹುದು. ಇಂತಹ ವ್ಯಕ್ತಿಗಳಿಂದ ಕೂಡಿದ ಸಮಾಜದಲ್ಲಿ ಅದರ ಪ್ರಮುಖ ವಿಶೇಷತೆಗಳು ಈ ಕೆಳಗಿನಂತಿರುವುವು:

1) ರಾಜನೀತಿಯು ಮಾನವ ಅಧಿಕಾರದಲ್ಲಿ ಕೇಂದ್ರೀಕೃತವಾಗಿರುವುದು. ಅದು ಒಂದು ವ್ಯಕ್ತಿ, ಕುಟುಂಬ ಅಥವಾ ವರ್ಗದ ರಾಜನಾಗಿದ್ದರೂ ಸರಿ. ಜನರ ಅಧಿಕಾರದ ಉನ್ನತೋನ್ನತ ಕಲ್ಪನೆ ಸಂಸತ್ತಾಗಿದೆ. ಸಂಸತ್ತಿನಲ್ಲಿ ಕೂಡಾ ಕಾನೂನನ್ನು ರಚಿಸುವವರು ಮನುಷ್ಯರಾಗಿರುತ್ತಾರೆ. ಎಲ್ಲಾ ಶಾಸನಗಳ ನಿರ್ಣಯ ಮತ್ತು ಪರಿವರ್ತನೆ ಇಚ್ಛೆ ಮತ್ತು ನೀತಿಯ ಆಧಾರದಲ್ಲಾಗಿರುವುದು. ಸ್ವಾರ್ಥ ಮತ್ತು ಅವಕಾಶವಾದಿ ನಿಲುವಿನ ಮೇಲೆ ನಿಯಮಗಳ ರಚನೆ ಮತ್ತು ಬದಲಾವಣೆಯಾಗುವುದು. ರಾಜ್ಯದಲ್ಲಿ ಹೆಚ್ಚು ಶಕ್ತಿಶಾಲಿಗಳು, ಚತುರ, ಮೋಸ-ವಂಚನೆ ತಿಳಿದ ಕಪಟಿಗಳು, ಸುಳ್ಳುಗಾರರು, ಕಠೋರ ಹೃದಯಿಗಳು ಉನ್ನತ ಪದವಿಗೇ ಏರುವರು.

ಸಮಾಜದಲ್ಲಿ ಮಾರ್ಗದರ್ಶನ ಮಾಡುವ ಮತ್ತು ಶಾಸನವನ್ನು ರಚಿಸುವ ಅಧಿಕಾರ ಅವರ ಕೈಯಲ್ಲಿರುವುದು. ಬಲಾಢ್ಯತೆಯು ಸತ್ಯ ಮತ್ತು ಬಲಹೀನತೆಯು ಮಿಥ್ಯ ಎಂಬುದು ಅವರ ನಿಲುವಾಗಿರುವುದು.

2) ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯವಸ್ಥೆಯು ಸಂಪೂರ್ಣವಾಗಿ ಭೋಗ ವಿಲಾಸ ಕೇಂದ್ರಿತವಾಗಿರುವುದು. ಇಂದ್ರಿಯ ಸುಖ ಪ್ರಾಪ್ತಿಗಾಗಿ ಮನುಷ್ಯ ಎಲ್ಲ ಮೇರೆಗಳನ್ನು ಮೀರಿ ನಿಲ್ಲುವನು. ಅವನ ವಿಷಯಾಸಕ್ತಿಯನ್ನು ಬೇಕಾದಂತೆ ತೀರಿಸಲು ಅನುಕೂಲವಾಗುವಂತೆ ನೈತಿಕ ಕಾನೂನುಗಳೂ ರಚಿಸಲ್ಪಡುವುದು.

3) ಕಲೆ ಮತ್ತು ಸಾಹಿತ್ಯ ಕೂಡಾ ಇದೇ ಮನೋವೃತ್ತಿಯಿಂದ ಪ್ರಭಾವಿತ ವಾಗಿರುವುದು. ಇದರಲ್ಲಿ ಅಶ್ಲೀಲತೆ ಹೆಚ್ಚುತ್ತಲೇ ಹೋಗುವುದು.

4) ಆರ್ಥಿಕ ವ್ಯವಸ್ಥೆಯಲ್ಲಿ ಕೆಲವೊಮ್ಮೆ ಜಮೀನ್ದಾರರು ಮೇಲುಗೈ ಸಾಧಿಸಿದರೆ ಮತ್ತೆ ಕೆಲವೊಮ್ಮೆ ಬಂಡವಾಳ ಶಾಹಿಗಳು ಅವರ ಸ್ಥಾನವನ್ನು ಕಸಿದು ಕೊಳ್ಳುವರು. ಕಾರ್ಮಿಕ ವರ್ಗವೂ ತನ್ನ ಸ್ಥಾನವನ್ನು ಭದ್ರಪಡಿಸಿ ಸರ್ವಾಧಿಕಾರ ಸ್ಥಾಪಿಸುವುದು. ಆರ್ಥಿಕ ವ್ಯವಸ್ಥೆಗೆ ಸತ್ಯದೊಂದಿಗೆ ಯಾವ ಸಂಬಂಧವೂ ಇರಲಾರದು. ಏಕೆಂದರೆ ಈ ಪ್ರಪಂಚ ಮತ್ತು ಅದರೊಳಗಿರುವ ಸಂಪತ್ತು ಒಂದು ಉತ್ತಮ ಆಹಾರ ತುಂಬಿದ ಚೀಲದಂತೆ ಯಾರಿಗೆ ಯಾವಾಗ ಹೇಗೆ ಬೇಕಿದ್ದರೂ ಕೈಹಾಕಿ ತೆಗೆದುಕೊಳ್ಳಬಹುದು ಎಂಬುದು ಅವರ ವರ್ತನೆ ಮತ್ತು ವಿಚಾರದಿಂದಲೇ ವ್ಯಕ್ತವಾಗುವುದು.

5) ಇಂತಹ ಸಮಾಜದಲ್ಲಿ ವ್ಯಕ್ತಿಗಳನ್ನು ನಿರ್ಮಿಸಲು ಶಿಕ್ಷಣದ ವ್ಯವಸ್ಥೆಯೂ ಅವರ ಪ್ರಕೃತಿ ಮತ್ತು ಜೀವನ ದರ್ಶನ ನೀತಿಗೆ ಅನುರೂಪವಾಗಿರುವುದು. ಈ ಪ್ರಪಂಚಕ್ಕೆ ಬರುವ ಪ್ರತಿಯೊಂದು ಹೊಸ ತಲೆಮಾರಿಗೆ, ಮನುಷ್ಯ ಮತ್ತು ಈ ಪ್ರಪಂಚದಲ್ಲಿ ಅವನಿಗಿರುವ ಸ್ಥಾನದ ವಿಷಯದಲ್ಲಿ ಮೇಲಿನ ವ್ಯಾಖ್ಯೆಗೆ ಅನುಗುಣವಾಗಿ ಅಭಿಪ್ರಾಯ ಮೂಡುವಂತೆ ಮಾಡಲಾಗುತ್ತದೆ. ಎಲ್ಲ ರೀತಿಯ ಜ್ಞಾನಗಳು, ವಿದ್ಯೆಯ ಯಾವುದೇ ಅಂಗಕ್ಕೆ ಸಂಬಂಧ ಪಟ್ಟದ್ದಿರಲಿ, ವ್ಯಕ್ತಿಯ ಜೀವನಕ್ಕೆ ಸಂಬಂಧಪಟ್ಟಂತೆ ಇದೇ ರೀತಿಯ ವಿಚಾರಗಳು ಉಂಟಾಗುವಂತೆ ಮಾಡಲಾಗುತ್ತದೆ. ಎಲ್ಲ ವ್ಯವಸ್ಥೆಯೂ ಇದೇ ಪದ್ಧತಿಗೆ ಅನುಗುಣವಾಗಿ ಮತ್ತು ಸಮಸ್ತ ಸಮಾಜವನ್ನು ಇದರ ಕಪಿಮುಷ್ಠಿಯಲ್ಲಿಡಲು ಪ್ರಾಪ್ತವಾಗುವಂತಹ ಶಿಕ್ಷಣವನ್ನು ನೀಡಲಾಗುತ್ತದೆ. ಈ ಶಿಕ್ಷಣ ನೀತಿಯ ಕುರಿತು ಹೆಚ್ಚಾಗಿ ವಿವರಿಸಬೇಕಾದ ಅಗತ್ಯವಿಲ್ಲ. ಏಕೆಂದರೆ ಜನರಿಗೆ ಇದರ ಬಗ್ಗೆ ವ್ಯಕ್ತಿಗತ ಅನುಭವವಿದೆ. ಇಂದಿನ ಶಿಕ್ಷಣ ಸಂಸ್ಥೆಗಳು ಇದೇ ಕಾರಣಕ್ಕಾಗಿ ಕೆಲಸ ಮಾಡುತ್ತಿವೆ. ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಇದೇ ರೀತಿಯ ದೃಷ್ಟಿಕೋನವನ್ನು ಹೊಂದಿರುತ್ತಾರೆ. ಶಿಕ್ಷಣ ಸಂಸ್ಥೆಯ ಹೆಸರನ್ನು ಯಾವುದೇ ಧರ್ಮ ಸಂಪ್ರದಾಯದ ಆಧಾರದಲ್ಲಿ ಇಟ್ಟಿರಬಹುದು.

ಮೇಲೆ ವಿವರಿಸಿದ ಎಲ್ಲಾ ವ್ಯಾಖ್ಯೆಗಳು, ವ್ಯವಹಾರಗಳು ಅಜ್ಞಾನದ ಮೇಲೆ ಆಧರಿತವಾಗಿವೆ. ಇದರ ಉದಾಹರಣೆ ಹೇಗಿದೆಯೆಂದರೆ, ಮಗು ತನ್ನ ಜ್ಞಾನೇಂದ್ರಿಯಗಳ

ಆಧಾರದಲ್ಲಿ ಬೆಂಕಿಯನ್ನು ಆಟಿಕೆಯೆಂದು ತಿಳಿಯುತ್ತದೆ. ಅದಕ್ಕೆ ಕೈ ಚಾಚಿ ಬೆಂಕಿ ಕೈಗೆ ತಗಲಿದ ಕೂಡಲೇ ಬಿಸಿಯಿಂದ ಮಗು ಕೈಯನ್ನು ಹಿಂದಕ್ಕೆಳೆಯುತ್ತದೆ. ಬೆಂಕಿಯು ತಾನು ಆಟಿಕೆಯಲ್ಲ ಎಂಬುದನ್ನು ಬಹಿರಂಗಪಡಿಸುತ್ತದೆ. ಈ ರೀತಿ ಅನುಭವದ ತಪ್ಪು ಬಹಳ ಬೇಗನೇ ಬೆಳಕಿಗೆ ಬರುತ್ತದೆ. ಆದರೆ ಭ್ರಮೆಯಾಧಾರಿತ ತಪ್ಪು ಕೆಲಸಗಳು ತಡವಾಗಿ ಬೆಳಕಿಗೆ ಬರುತ್ತದೆ. ಕೆಲವರಿಗೆ ಅದೂ ಗೊತ್ತಾಗುವುದಿಲ್ಲ. (ತಪ್ಪು ಎಂದು ತಿಳಿಯುವುದಿಲ್ಲ) ಏಕೆಂದರೆ ಯಾವ ಬೆಂಕಿಗೆ ಅವರು ಕೈಹಾಕುತ್ತಾರೋ ಅದರ ಉರಿಯು ಮಂದವಾಗಿರುತ್ತದೆ. ಕೂಡಲೇ ಹೊತ್ತಿ ಉರಿಯುವುದಿಲ್ಲ. ಶತಮಾನಗಳ ವರೆಗೆ ಉರಿಸುತ್ತಲೇ ಇರುತ್ತದೆ. ಒಂದು ವೇಳೆ ಮನುಷ್ಯ ಅನುಭವದಿಂದ ಪಾಠ ಕಲಿಯದೇ ಹೋದರೆ, ದಿನರಾತ್ರಿಗಳ ಜೀವನದಲ್ಲಿ ಅವನ ದೃಷ್ಟಿಕೋನವು ಇದೇ ಆಗಿದ್ದರೆ, ವ್ಯಕ್ತಿಗತ ಜೀವನದಲ್ಲಿ ಅಪ್ರಾಮಾಣಿಕತೆ, ಆಡಳಿತಗಾರರ ಭ್ರಷ್ಟಾಚಾರ, ಅಧಿಕಾರಿಗಳ ಅನ್ಯಾಯ, ಶ್ರೀಮಂತರ ಸ್ವಾರ್ಥ, ಜನಸಾಮಾನ್ಯರ ದುಷ್ಕೃತ್ಯಗಳು ಅವರಿಗೆ ಅನುಭವವಾಗುತ್ತದೆ ಮತ್ತು ವಿಶಾಲವಾದ ಪ್ರದೇಶದಲ್ಲಿ ಈ ದೃಷ್ಟಿಕೋನದ ಹರಡುವಿಕೆಯಿಂದ ಜಾತೀಯತೆ, ಸಾಮ್ರಾಜ್ಯವಾದ, ಯುದ್ಧ, ದಂಗೆ, ದೇಶ ದೇಶಗಳ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಳ್ಳುವಿಕೆ, ಜನರ ಮಾರಣಹೋಮ ನಡೆಯುತ್ತದೆ. ಇದನ್ನೆಲ್ಲಾ ನೋಡಿದಾಗ ಇದು ಅಜ್ಞಾನದ ಪರಿಣಾಮವಾಗಿದೆ ಎಂಬುದು ಮನುಷ್ಯನಿಗೆ ಅರ್ಥವಾಗಿ ಬಿಡುತ್ತದೆ. ಜ್ಞಾನವಿದ್ದರೆ ಹೀಗಾಗಲು ಸಾಧ್ಯವಿಲ್ಲ. ಮನುಷ್ಯ ಪ್ರಪಂಚ ಮತ್ತು ತನ್ನ ಬಗ್ಗೆ ಯಾವ ತೀರ್ಮಾನವನ್ನು ತಾಳಿದ್ದಾನೆ. ಇದು ವಾಸ್ತವಿಕತೆಗೆ ಅನುರೂಪವಾಗಿಲ್ಲ. ಇಲ್ಲದೇ ಹೋದರೆ ಇದರಿಂದಾಗಿ ಈ ರೀತಿಯ ಕೆಟ್ಟ ಪರಿಣಾಮ ಉಂಟಾಗಲು ಸಾಧ್ಯವಿರಲಿಲ್ಲ.

## ಬಹುದೇವ ವಿಶ್ವಾಸದಿಂದುಂಟಾದ ಅಜ್ಞಾನ(ಶಿರ್ಕ್)

ಈ ಸಿದ್ಧಾಂತದ ಪ್ರಕಾರ ಪ್ರಪಂಚ ತನ್ನಿಂತಾನೇ ಉಂಟಾದುದಲ್ಲ. ಇದಕ್ಕೆ ದೇವನಿದ್ದಾನೆ. ಆದರೆ ಒಬ್ಬನಲ್ಲ, ತುಂಬಾ ದೇವರುಗಳಿದ್ದಾರೆ. ಅವರಿಗೆ ಖಾತೆಗಳನ್ನು ಹಂಚಲಾಗಿದೆ. ಪ್ರತಿಯೊಂದು ಖಾತೆಗೂ ಒಬ್ಬೊಬ್ಬ ದೇವರು. ಮನುಷ್ಯನ ಅದೃಷ್ಟ-ದುರಾದೃಷ್ಟ, ಸಫಲತೆ-ವಿಫಲತೆ, ಲಾಭ ಮತ್ತು ಹಾನಿ ಈ ದೇವರುಗಳ ಪ್ರಸನ್ನತೆ ಮತ್ತು ಅಪ್ರಸನ್ನತೆಯನ್ನು ಅವಲಂಬಿಸಿದೆ. ಈ ರೀತಿಯ ನಂಬಿಕೆಯನ್ನು ಹೊಂದಿರುವ ಜನರು ತಮ್ಮ ಊಹೆಯ ಆಧಾರದಲ್ಲಿ ಯಾವ ದೇವರಿಗೆ ಯಾವ ರೀತಿಯ ಶಕ್ತಿಗಳಿವೆ ಮತ್ತು ಎಲ್ಲಿ ಇದೆ ಎಂಬುದನ್ನು ಕಂಡು ಹಿಡಿಯುವ ಪ್ರಯತ್ನವನ್ನು ನಡೆಸಿದ್ದಾರೆ. ಯಾವೆಲ್ಲಾ ವಸ್ತುಗಳ ಮೇಲೆ ಮನುಷ್ಯನ ದೃಷ್ಟಿ ನೆಟ್ಟಿತೋ ಅವುಗಳನ್ನೆಲ್ಲಾ ದೇವರಾಗಿ ಮಾಡಿಕೊಂಡರು. ಈ ರೀತಿ ಮನುಷ್ಯ ಯಾವುದೇ ಜ್ಞಾನದ ಆಧಾರವಿಲ್ಲದೆ ಕೇವಲ ಸಂಶಯಗಳ ಮೇಲೆ ಅವುಗಳಿಗೆ ಅತಿಮಾನುಷ ಶಕ್ತಿಯಿದೆಯೆಂದೂ ಅವು ತನ್ನ ಅದೃಷ್ಟವನ್ನು ಸರಿಪಡಿಸುವ ಮತ್ತು ಕೆಡಿಸುವ ಶಕ್ತಿಯನ್ನು ಹೊಂದಿದೆ ಎಂದೂ ನಂಬತೊಡಗಿದನು. ಇದರಿಂದಾಗಿ ಮನುಷ್ಯ ಉತ್ತಮ ಪರಿಣಾಮದ ನಿರೀಕ್ಷೆ ಮತ್ತು ಕೆಟ್ಟ ಪರಿಣಾಮದ ಭೀತಿಯಿಂದಲೇ ತನ್ನ ಹೆಚ್ಚಿನ ಶಕ್ತಿಯನ್ನು

ನಷ್ಟಮಾಡಿಕೊಳ್ಳಲು ಆರಂಭಿಸಿದನು. ಯಾವುದಾದರೂ ಗೋರಿಯಲ್ಲಿ ಮಲಗಿರುವವರು ತನ್ನ ಕೆಲಸವನ್ನು ಪೂರ್ತಿಗೊಳಿಸುತ್ತಾರೆ ಎಂದು ಭರವಸೆ ಇಡುತ್ತಾನೆ. ಯಾವುದಾದರೂ ವಿಗ್ರಹವು ತನ್ನ ಅದೃಷ್ಟವನ್ನು ಖಿಲಾಯಿಸೀತು ಎಂದು ನಂಬುತ್ತಾನೆ. ಯಾವುದಾದರೂ ಕಾಲ್ಪನಿಕ ಶಕ್ತಿಯನ್ನು ಪ್ರಸನ್ನಗೊಳಿಸಲು ಓಡಾಡುತ್ತಾನೆ. ಅನೇಕ ಸಂದರ್ಭಗಳಲ್ಲಿ ಶುಭ ಶಕುನದ ನಿರೀಕ್ಷೆಯಲ್ಲಿ ಕಾಲ್ಪನಿಕ ಸ್ವರ್ಗದಲ್ಲಿ ತೇಲುತ್ತಾನೆ. ಮತ್ತೊಮ್ಮೆ ಅಪಶಕುನದ ಭೀತಿಯಿಂದ ನಲುಗುತ್ತಾನೆ. ಇವುಗಳಿಂದಾಗಿ ಮನುಷ್ಯನ ವಿಚಾರ ಮತ್ತು ಆಲೋಚನೆಗಳು ಪ್ರಾಕೃತಿಕ ಮಾರ್ಗದಿಂದ ಸರಿದು ಅಪ್ರಾಕೃತಿಕವಾದ ದಾರಿಯಲ್ಲಿ ಬೀಳುತ್ತದೆ. ಈ ನಂಬಿಕೆ ಯಂತೆ ಪೂಜೆ-ಪುರಸ್ಕಾರ, ಪ್ರಾರ್ಥನೆಗಳು ಮತ್ತಿತರ ಆಚಾರಗಳು ಕ್ರಿಯಾ ವಿಧಿಗಳೆನಿಸಿ ಕೊಳ್ಳುತ್ತವೆ. ಇದರಿಂದಾಗಿ ಮನುಷ್ಯನ ದೊಡ್ಡ ಪ್ರಯತ್ನಗಳೆಲ್ಲವೂ ಪರಿಣಾಮ ಶೂನ್ಯ ವೆನಿಸುವ ಕಾರ್ಯಗಳಲ್ಲಿ ನಷ್ಟಹೊಂದಿಬಿಡುತ್ತವೆ.

ಈ ಬಹುದೇವ ವಿಶ್ವಾಸಿಗಳ ಮೂರ್ಖತನದಿಂದಾಗಿ ಲಾಭ ಪಡೆಯಲು ಚಾಣಾಕ್ಷ ಮನುಷ್ಯರಿಗೆ ಒಳ್ಳೆಯ ಅವಕಾಶ ಸಿಕ್ಕಂತಾಗುತ್ತದೆ. ಯಾರಾದರೊಬ್ಬ ಸಾಮಾನ್ಯ ವ್ಯಕ್ತಿ ರಾಜನಾಗುತ್ತಾನೆ ಮತ್ತು ಸೂರ್ಯ, ಚಂದ್ರ ಅಥವಾ ಇನ್ನಿತರ ದೇವತೆಗಳೊಂದಿಗೆ ತನ್ನ ವಂಶವೃಕ್ಷವಿದೆಯೆಂದು ಜನರಿಗೆ ವಿಶ್ವಾಸ ಮೂಡುವಂತೆ ಮಾಡುತ್ತಾನೆ. ನಾವು ದೇವರ ರೂಪಗಳು, ನೀವು ನಮ್ಮ ಸೇವಕರು ಎಂಬುದಾಗಿ ಜನಸಾಮಾನ್ಯರನ್ನು ನಂಬಿಸುತ್ತಾರೆ. ಕೆಲವರು ಮಂತ್ರವಾದಿಗಳು, ಪಂಡಿತರೆಂದು ಹೇಳಿಕೊಂಡು ಜನರಿಗೆ ಮಂತ್ರ ತಂತ್ರಗಳನ್ನು ಮಾಡಿ ತೋರಿಸಿ ನೂಲು, ತಾಯಿತ ಕೊಟ್ಟು ಇವುಗಳಿಗೆಲ್ಲಾ ಅತಿಮಾನುಷ ಶಕ್ತಿಯಿರುವುದಾಗಿ ಹೇಳಿಕೊಡುತ್ತಾರೆ. ಇದರಿಂದ ನಿಮ್ಮ ಆವಶ್ಯಕತೆಗಳು ಪೂರ್ತಿಗೊಳ್ಳುವುದೆಂದೂ ನಂಬಿಸುತ್ತಾರೆ. ಎಲ್ಲ ಸಮುದಾಯಗಳಲ್ಲೂ ಈ ರೀತಿಯ ಜನರು ವಂಶ ಪಾರಂಪರ್ಯವಾಗಿ ಮುಂದುವರಿಯುತ್ತಾ ಹೋಗುತ್ತಾರೆ. ಇವರ ಅಧಿಕಾರ ಕಾಲ ಕಳೆದಂತೆ ಹೆಚ್ಚುತ್ತಲೇ ಹೋಗುತ್ತದೆ. ಇಂತಹ ವಿಶ್ವಾಸದ ಕಾರಣದಿಂದಾಗಿ ರಾಜಮನೆತನ, ಧಾರ್ಮಿಕ ಪಂಡಿತರು ಮತ್ತು ಮಂತ್ರವಾದಿಗಳ ದೇವತ್ವದ ಭಾರದಿಂದಾಗಿ ಜನರ ಕೊರಳು ಬಾಗಿಕೊಂಡೇ ಇರುತ್ತದೆ. ಈ ಕೃತಕ ದೇವರುಗಳ ಕಾರಣದಿಂದಾಗಿ ಜನಸಾಮಾನ್ಯರು ಹಾಲು ಕರೆಯಲು, ಸರಕನ್ನು ಸಾಗಿಸಲು ಉಪಯೋಗಿಸುವ ಜಾನುವಾರುಗಳಂತೆ ಬಿದ್ದುಕೊಂಡಿರಬೇಕಾಗುತ್ತದೆ.

## ಮಾನವ ನಿರ್ಮಿತ ಜೀವನ ಸಿದ್ಧಾಂತ

ಹ. ಮುಹಮ್ಮದ್(ಸ) ಅಂತಿಮ ಪ್ರವಾದಿಯಾಗಿ ಜಗತ್ತಿಗೆ ಬರುವುದಕ್ಕೆ ಮೊದಲು ಈ ಪ್ರಪಂಚದ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಅದುವರೆಗೆ ಬಂದಂತಹ ಎಲ್ಲ ದೈವಿಕ ಗ್ರಂಥಗಳು ಜನರ ಹಸ್ತಕ್ಷೇಪದಿಂದಾಗಿ ಅನುಪಯುಕ್ತವೆನಿಸಿದ್ದವು. ಸಹಸ್ರಾರು ವರ್ಷ ಗಳಿಂದ ಯಾವುದೇ ದೇವ ಸಂದೇಶವಾಹಕರ ಆಗಮನವಾಗಿರಲಿಲ್ಲ. ಪ್ರಪಂಚದಾದ್ಯಂತ ಅರಾಜಕತೆಯು ತುಂಬಿತ್ತು. ಮಾನವನ ಮೇಲೆ ಎಲ್ಲ ಸ್ತರಗಳಲ್ಲಿಯೂ ಶೋಷಣೆ ನಡೆಯುತ್ತಿದ್ದವು. ಪ್ರಪಂಚದ ದಾರ್ಶನಿಕರು, ವಿಚಾರವಂತರು, ಸಮಾಜ ಸುಧಾರಕರು,

ಸಂತರು, ಋಷಿಮುನಿಗಳು ಮನುಷ್ಯನ ಈ ದುರ್ದೆಸೆಯಿಂದ ಬಹಳ ದುಃಖಿತರಾಗಿದ್ದರು. ಈ ಸಂಕಷ್ಟದಿಂದ ಮಾನವರನ್ನು ಪಾರುಗೊಳಿಸಿ ಸುಖಮಯ, ಸುಂದರ, ಸುಲಲಿತ ಜೀವನ ಸಿದ್ಧಾಂತದಲ್ಲಿ ಅವರನ್ನು ಸಂಘಟಿಸಬೇಕೆಂಬುದು ಅವರ ಇಚ್ಛೆಯಾಗಿದ್ದಿತು. ಮಾನವರಿಗೆ 3 ರೀತಿಯ ಜೀವನ ಸಿದ್ಧಾಂತವಿರಲು ಸಾಧ್ಯ ಎಂಬುದು ಅವರಿಗೆ ತಿಳಿಯಿತು:

1) ಪೂರ್ಣ ಅಜ್ಞಾನ.
2) ಬಹುದೇವ ವಿಶ್ವಾಸ ಜನಿತ ಅಜ್ಞಾನ.
3) ದೇವನು ಕಳುಹಿಸಿದ ದೈವಿಕ ಗ್ರಂಥ.

ಈ ಮೂರನೆಯ ವಸ್ತುವು ಪ್ರಚಲಿತವಾಗಿರಲಿಲ್ಲ. ಏಕೆಂದರೆ ದೈವಿಕ ಗ್ರಂಥಗಳೆಲ್ಲವೂ ಮನುಷ್ಯರ ಹಸ್ತಕ್ಷೇಪದಿಂದಾಗಿ ಅನುಪಯುಕ್ತವೆನಿಸಿದ್ದುವು. ಕೇವಲ ಎರಡು ಸಿದ್ಧಾಂತಗಳು ಮಾತ್ರ ಮನುಷ್ಯನ ಪಾಲಿಗೆ ಇದ್ದವು. ಪೂರ್ಣ ಅಜ್ಞಾನ ಮತ್ತು ಬಹುದೇವವಿಶ್ವಾಸ ಜನಿತ ಅಜ್ಞಾನ. ಇದರ ಆಧಾರದಲ್ಲೇ ಮನುಷ್ಯ ಜೀವನ ಸಿದ್ಧಾಂತವನ್ನು ರೂಪಿಸಿದ. ಸ್ವತಃ ನಿರ್ಮಿಸಿಕೊಂಡ ಜೀವನ ಸಿದ್ಧಾಂತದಿಂದ ಯಾವುದು ಸತ್ಯ-ಯಾವುದು ಅಸತ್ಯ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲದಂತಹ ಸಂಕಟಕ್ಕೆ ಮಾನವರು ಸಿಲುಕಿದರು. ಅವರಿಗೆ ಅವರ ಸಿದ್ಧಾಂತವನ್ನು ಸತ್ಯವೋ, ಸುಳ್ಳೋ ಎಂದು ನೋಡಲು ಒರೆಗಲ್ಲು ಇರಲಿಲ್ಲ. ದೈವಿಕ ಗ್ರಂಥ ಮಾತ್ರ ಒರೆಗಲ್ಲು ಆಗಿರಲು ಸಾಧ್ಯ. ದೈವಿಕ ಗ್ರಂಥಗಳಲ್ಲಿ ತಪ್ಪಿರಲು ಸಾಧ್ಯವಿರಲಿಲ್ಲ. ಆದರೆ ಅವರ ಬಳಿ ದೈವಿಕ ಗ್ರಂಥವಿರಲಿಲ್ಲ. ಒಂದು ಜೀವನ ಸಿದ್ಧಾಂತವನ್ನು ಮನುಷ್ಯರು ಜತೆಗೂಡಿ ರಚಿಸಿದರು. ಆದರೆ ಅದು ಸತ್ಯವೆಂದು ಸಾಬೀತುಪಡಿಸಲು ಅವರ ಬಳಿ ಮಾನದಂಡಗಳಿರಲಿಲ್ಲ. ಈ ಜೀವನ ಸಿದ್ಧಾಂತವು ಅಂಧವಿಶ್ವಾಸದ ಮೇಲೆ ಆಧರಿತವಾಗಿತ್ತು. ಇವುಗಳೇ ಮತ್ತಷ್ಟು ಕವಲುಗಳಾಗಿ ಒಡೆದು ಅನೇಕ ಸಿದ್ಧಾಂತಗಳು ಜನ್ಮತಾಳಿದವು. ಒಬ್ಬರು, ಮರಣದ ಬಳಿಕ ಪುನಃ ಜೀವನವಿಲ್ಲ ಎಂದು ಸಾರಿ ಆ ಆಧಾರದಲ್ಲಿ ಜೀವನ ಸಿದ್ಧಾಂತವನ್ನು ರೂಪಿಸಿಕೊಂಡರು. ಕೆಲವರು ಮರಣದ ಬಳಿಕ ಪುನಃ ಒಂದು ಜೀವನವಿದೆ ಎಂದರೆ ಮತ್ತೆ ಕೆಲವರು ಪುನರ್ಜನ್ಮವಿದೆ ಎಂದರು. ಕೆಲವರು ಈ ಪ್ರಪಂಚಕ್ಕೆ ದೇವನೇ ಇಲ್ಲ ಎಂದರೆ ಹಲವರು ಒಬ್ಬನೇ ದೇವನಿದ್ದಾನೆ ಎಂದರು. ಇನ್ನು ಕೆಲವರು ಹಲವು ದೇವರುಗಳಿದ್ದಾರೆ ಎಂದರು. ಈ ರೀತಿ ಪ್ರತಿಯೊಂದರ ಆಧಾರದಲ್ಲೂ ಒಂದೊಂದು ಜೀವನ ಸಿದ್ಧಾಂತ ರೂಪಿತವಾಯಿತು. ಇವೆಲ್ಲವುಗಳ ಮೂಲ ಅಂಧವಿಶ್ವಾಸವಾಗಿತ್ತು. ಅರಾಜಕತೆ ಮೆರೆದಾಡುವ ಪ್ರಪಂಚದಲ್ಲಿ ಮನುಷ್ಯ ಅದರಿಂದ ಹೊರಬರಲು ಅಂಧವಿಶ್ವಾಸದ ಜೀವನ ಸಿದ್ಧಾಂತಕ್ಕೆ ಬಲಿಬಿದ್ದನು. ಮನುಷ್ಯನ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಯಿತು. ಇದೇ ಸಮಯದಲ್ಲಿ ದೇವನು ಹ. ಮುಹಮ್ಮದ್‌ರನ್ನು(ಸ) ಅಂತಿಮ ದೇವ ಸಂದೇಶವಾಹಕರಾಗಿ ಸಕಲ ಜಗತ್ತಿಗೆ ಕಳುಹಿಸಿಕೊಟ್ಟನು. ಅವರ ಮೂಲಕ ಅಂತಿಮ ಗ್ರಂಥ ಕುರ್‌ಆನನ್ನೂ ಕಳುಹಿಸಿದನು.

ಕುರ್‌ಆನನ್ನು ಅಂತಿಮ ದೇವಗ್ರಂಥವೆಂದು ಒಪ್ಪಿಕೊಂಡರೆ ಅಂಧವಿಶ್ವಾಸದ ಮೇಲೆ ನಿರ್ಮಿತವಾದ ಅವರ ಜೀವನ ಸಿದ್ಧಾಂತವು ವರ್ಜ್ಯ ಎನಿಸುತ್ತದೆ ಎಂಬುದು ಆ ಜೀವನ

ಸಿದ್ಧಾಂತದ ಪ್ರಕಾರ ಜೀವಿಸುವವರ ದೊಡ್ಡ ಚಿಂತೆಯಾಗಿತ್ತು. ಸಾವಿರಾರು ವರ್ಷಗಳಿಂದ ಜೀವನ ಸಿದ್ಧಾಂತವೆಂದು ನಂಬಿರುವುದನ್ನು ಬಿಡಲು ಅವರು ತಯಾರಾಗಲಿಲ್ಲ. ಆದುದರಿಂದಲೇ ಕುರ್‌ಆನನ್ನು ದೈವಿಕ ಗ್ರಂಥವಲ್ಲ ಎಂದು ಬಿಟ್ಟರು. ಇದು ದೈವಿಕಗ್ರಂಥವಲ್ಲದಿದ್ದರೆ ಮತ್ತಿದು ಯಾರ ಕೃತಿ? ಪ್ರವಾದಿ ಮುಹಮ್ಮದ್(ಸ) ರಾತ್ರಿಯ ವೇಳೆಯಲ್ಲಿ ಕೆಲವು ವಾಕ್ಯಗಳನ್ನು ರಚಿಸಿ, ಬೆಳಗ್ಗೆ ಜನರನ್ನು ಒಟ್ಟು ಸೇರಿಸಿ ಇದು ದೇವನಿಂದ ಬಂದಿದೆ ಎಂದು ಹೇಳುತ್ತಾರೆ ಎಂದು ಕೆಲವರು ಆರೋಪಿಸಿದರು. ಆದರೆ ಇದು ಸತ್ಯಕ್ಕೆ ದೂರವಾದ ಮಾತಾಗಿತ್ತು. ಪ್ರವಾದಿ ಮುಹಮ್ಮದ್(ಸ) ನಿರಕ್ಷರಿಯಾಗಿದ್ದರು ಎಂಬುದು ಎಲ್ಲರಿಗೂ ತಿಳಿದಿತ್ತು. ಇನ್ನು ಕೆಲವರು ಇದು ಪ್ರವಾದಿ ಮುಹಮ್ಮದರಿಗೆ(ಸ) ರಾತ್ರಿ ವೇಳೆ ಯಾರೋ ಬಂದು ಹೇಳಿಕೊಡುತ್ತಿದ್ದರು. ಬೆಳಗ್ಗೆ ಅದನ್ನೇ ಜನರ ಮುಂದಿಟ್ಟು ಇದು ದೇವನಿಂದ ಬಂದಿದೆ ಎಂದು ನಂಬಿಸುತ್ತಿದ್ದರು. ಇದು ಕೂಡಾ ಸುಳ್ಳಾಗಿತ್ತು. ಏಕೆಂದರೆ ಅರೇಬಿಯಾದಲ್ಲಿ ಯಾವುದೇ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ ಅಥವಾ ಗ್ರಂಥಾಲಯ ಇರಲಿಲ್ಲ. ಹಾಗಿದ್ದರೆ ಅದುವರೆಗೆ ಈ ಯೋಗ್ಯತೆಯನ್ನು ಹೊಂದಿದ ವ್ಯಕ್ತಿ ಎಲ್ಲಿ ಅಡಗಿರುತ್ತಿದ್ದ? ಆದುದರಿಂದ ಯಾವುದೇ ನೆಪಗಳನ್ನು ಒಡ್ಡಲು ಸಾಧ್ಯವಿರಲಿಲ್ಲ. ಜನರು ಕುರ್‌ಆನನ್ನು ಹುಚ್ಚನ ಮಾತೆಂದೂ, ಅನಗತ್ಯ ಬಡಬಡಿಕೆಯೆಂದೂ ಕಟ್ಟುಕತೆಯೆಂದೂ ಹೇಳುತ್ತಿದ್ದರು. ಈ ರೀತಿ ಕುರ್‌ಆನನ್ನು ದೈವಿಕ ಗ್ರಂಥವೆಂದು ಒಪ್ಪಲು ಅಂದಿನ ಜನರು ನಿರಾಕರಿಸಿದರು.

ಕುರ್‌ಆನ್ ಒಂದು ಉತ್ಕೃಷ್ಟ ಗ್ರಂಥ. ಇದರ ವಾಣಿಯನ್ನು ಆಲಿಸಿದವರು ಉಲ್ಲಸಿತರಾಗುತ್ತಾರೆ. ಪ್ರವಾದಿ ಮುಹಮ್ಮದ್(ಸ) ಕುರ್‌ಆನನ್ನು ಜನರಿಗೆ ಓದಿ ಕೇಳಿಸು ತ್ತಿದ್ದರು. ಓದು ಬರಹ ತಿಳಿದ ಮತ್ತು ಅರ್ಥಮಾಡಿಕೊಂಡ ವ್ಯಕ್ತಿಗಳು ಇದು ದೈವಿಕ ಗ್ರಂಥವೆಂದು ವಿಶ್ವಾಸವಿಟ್ಟರು. ಈ ರೀತಿ ಕುರ್‌ಆನನ್ನು ನಂಬುವವರ ಸಂಖ್ಯೆ ಹೆಚ್ಚುತ್ತಾ ಹೋದಂತೆ ಶತ್ರುಗಳ ಆತಂಕ ಹೆಚ್ಚುತ್ತಾ ಹೋಯಿತು. ಕುರ್‌ಆನಿನ ಮೇಲೆ ವಿಶ್ವಾಸವಿಟ್ಟ ಜನರನ್ನು ಶತ್ರುಗಳು ಹೊಡೆಯುತ್ತಿದ್ದರು, ಬಡಿಯುತ್ತಿದ್ದರು. ಕೆಲವರನ್ನು ಹಗ್ಗದಿಂದ ಬಿಗಿದು ಎಳೆಯುತ್ತಿದ್ದರು. ಕೆಲವರನ್ನು ಸುಡುವ ಮರಳಿನ ಮೇಲೆ ಮಲಗಿಸಿ ಅವರ ಮೇಲೆ ಭಾರವಾದ ಕಲ್ಲುಗಳನ್ನು ಇಡುತ್ತಿದ್ದರು. ಇನ್ನು ಕೆಲವರನ್ನು ಅಡಿಮೇಲು ಮಾಡಿ ಮಲಗಿಸಿ ಕೆಳಗೆ ಬೆಂಕಿ ಹಾಕುತ್ತಿದ್ದರು. ಇಷ್ಟೆಲ್ಲಾ ಚಿತ್ರಹಿಂಸೆಗಳನ್ನು ಕೊಟ್ಟರೂ ವಿಶ್ವಾಸದಿಂದ ಮರಳಲು ಈ ಜನರು ಸಿದ್ಧರಾಗಲಿಲ್ಲ. ವಿಶ್ವಾಸಿಗಳ ಸಂಖ್ಯೆ ಹೆಚ್ಚುತ್ತಿದ್ದಂತೆಯೇ ಶತ್ರುಗಳು ಪ್ರವಾದಿ ಮುಹಮ್ಮದ್‌ರನ್ನೇ(ಸ) ಕೊಲ್ಲುವ ಯೋಜನೆ ಹಾಕಿಕೊಂಡರು. "ನೀವು ರಾತೋರಾತ್ರಿ ಮಕ್ಕಾ ಪಟ್ಟಣವನ್ನು ಬಿಟ್ಟು ಮದೀನಾಕ್ಕೆ ವಲಸೆ ಹೋಗಿರಿ. ಅಲ್ಲಿ ಹೆಚ್ಚಿನ ಸಂಖ್ಯೆಯ ಜನರು ವಿಶ್ವಾಸವಿರಿಸಿದ್ದಾರೆ" ಎಂದು ಪ್ರವಾದಿ ಮುಹಮ್ಮದ್‌ರಿಗೆ(ಸ) ದೇವನು ಆದೇಶವಿತ್ತನು. ಆದುದರಿಂದ ಪ್ರವಾದಿ ಮುಹಮ್ಮದ್(ಸ) ಮದೀನಾಕ್ಕೆ ವಲಸೆ(ಹಿಜ್‌ರಾ) ಹೋಗುತ್ತಾರೆ ಮತ್ತು ಹರಿಹಂಚಿಹೋಗಿದ್ದ ವಿಶ್ವಾಸಿಗಳೆಲ್ಲ ಮದೀನಾಕ್ಕೆ ಬಂದು ಒಟ್ಟು ಸೇರ ತೊಡಗಿದರು. ಕುರ್‌ಆನಿನ ಮೇಲೆ ವಿಶ್ವಾಸವಿಟ್ಟ ಜನರ ಗುಂಪು ಮದೀನಾದಲ್ಲಿ ರಚಿತವಾಯಿತು.

ವಿರೋಧಿಗಳು ಮತ್ತಷ್ಟು ಚಿಂತಾಕ್ರಾಂತರಾದರು. ಈ ವಿಶ್ವಾಸಿಗಳ ಸಣ್ಣ ಗುಂಪನ್ನು ಕೊನೆಗಾಣಿಸಲು ಅದರ ಮೇಲೆ ಆಕ್ರಮಣವನ್ನು ಮಾಡಿದರು. ಆದರೆ ಪರಾಜಿತರಾದರು. ಇದೇ ರೀತಿ ಬದ್ರ್, ಉಹುದ್ ಮತ್ತು ಹುನೈನ್‌ಗಳಲ್ಲಿ ಯುದ್ಧ ನಡೆಯಿತು. ಎಲ್ಲೆಡೆಯೂ ವಿಶ್ವಾಸಿಗಳು ಜಯಶಾಲಿಗಳಾದರು. ಕುರ್‌ಆನಿನ ಆಧಾರದಲ್ಲಿ ಒಂದು ಸಣ್ಣ ಇಸ್ಲಾಮೀ ಆಳ್ವಿಕೆ ಆರಂಭವಾಯಿತು. ಅರೇಬಿಯಾದಲ್ಲಿ ಅದುವರೆಗೆ ಯಾವುದೇ ಆಡಳಿತವಿರಲಿಲ್ಲ. ದಿನಂಪ್ರತಿ ವ್ಯಾಪಾರೀ ತಂಡಗಳ ಲೂಟಿಯಾಗುತ್ತಿತ್ತು. ಮನೆಗಳಲ್ಲೂ ಜನರು ಕಳ್ಳಕಾಕರ ಭಯದಿಂದ ಚೆನ್ನಾಗಿ ನಿದ್ರಿಸಲು ಸಾಧ್ಯವಾಗದ ಪರಿಸ್ಥಿತಿಯಿತ್ತು. ಹೆಣ್ಣು ಮಕ್ಕಳನ್ನು ಯಾರಾದರೂ ಅಪಹರಿಸಿ ಬಿಡುತ್ತಾರೋ ಎಂಬ ಹೆದರಿಕೆಯಿಂದ ಭಯಗ್ರಸ್ತರಾಗಿದ್ದರು. ಇದು ಅರೇಬಿಯಾದ ದಯನೀಯ ಪರಿಸ್ಥಿತಿಯಾಗಿತ್ತು.

ಇಸ್ಲಾಮೀ ರಾಷ್ಟ್ರದ ಸ್ಥಾಪನೆಯಾದ ಬಳಿಕ ಯಾವ ರೀತಿ ಶಾಂತಿ ನೆಲೆಸಿತೆಂದರೆ ಓರ್ವ ಹೆಣ್ಣು ಮುದುಕಿ ಸ್ವರ್ಣಾಭರಣ ಭೂಷಿತೆಯಾಗಿ ಸನ್‌ಆದಿಂದ ಹಜರ್ ಮೌತ್ ವರೆಗಿನ ಪ್ರಯಾಣವನ್ನು ಒಬ್ಬಳೇ ಮರಳುಗಾಡಿನಲ್ಲಿ ಮಾಡಬಹುದಾಗಿತ್ತು. ರಸ್ತೆಯಲ್ಲಿ ಆಕೆಗೆ ಯಾವುದೇ ಭಯ ಉಂಟಾಗುತ್ತಿರಲಿಲ್ಲ. ಇದನ್ನು ಕಂಡು ಜನರು ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವಾಸವಿರಿಸಿದರು ಮತ್ತು ಇಸ್ಲಾಮೀ ರಾಷ್ಟ್ರದ ಸ್ಥಾಪನೆಯಾಯಿತು.

ಪ್ರವಾದಿ ಮುಹಮ್ಮದ್‌ರ(ಸ) ಬಳಿಕ ನಾಲ್ವರು ಖಲೀಫರುಗಳಾದ ಹ. ಅಬೂಬಕರ್, ಹ. ಉಮರ್, ಹ. ಉಸ್ಮಾನ್, ಹ. ಅಲೀ(ರ) ಅಂದಿನ ಬಹಳ ದೊಡ್ಡ ಇಸ್ಲಾಮೀ ಸಾಮ್ರಾಜ್ಯದಲ್ಲಿ ಆಳ್ವಿಕೆಯನ್ನು ನಡೆಸಿದ್ದರು. ದೇವನು ಪರಮೋನ್ನತ ಮತ್ತು ಮನುಷ್ಯರು ಈ ಭೂಮಿಯ ಮೇಲೆ ಅವನ ಪ್ರತಿನಿಧಿಗಳು(ಖಲೀಫರು) ಎಂಬ ನೆಲೆಯಲ್ಲಿ ಕೆಲಸವನ್ನು ನಿರ್ವಹಿಸಬೇಕು ಎಂಬುದು ಇದರ ಮೂಲಾಧಾರವಾಗಿತ್ತು. ಇಡೀ ಸಾಮ್ರಾಜ್ಯದಲ್ಲಿ ದೇವ ಗ್ರಂಥದ ಆಧಾರದಲ್ಲಿ ರಚಿತವಾದ ಕಾನೂನು ಜಾರಿಯಲ್ಲಿತ್ತು. ಜನರು ಸುಖಮಯ ಜೀವನ ನಡೆಸುತ್ತಿದ್ದರು. ಆಳ್ವಿಕೆಯ ಬಗ್ಗೆ ಸಂತೃಪ್ತರಾಗಿದ್ದರು. ಮುಸ್ಲಿಮೇತರರು ಕೂಡಾ ಈ ರೀತಿಯ ಆಳ್ವಿಕೆಯಿಂದ ಸಂತುಷ್ಟರಾಗಿದ್ದರು. ಕ್ರೈಸ್ತ ಸಮುದಾಯ ಇಸ್ಲಾಮೀ ಆಳ್ವಿಕೆಯ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿತ್ತು ಎಂಬುದಕ್ಕೆ ಮಿ. ಅರ್ನಾಟ್‌ರ ಮಾತುಗಳು ಸಾಕ್ಷಿಯಾಗಿವೆ. "ಮುಸ್ಲಿಮರ ಆಡಳಿತ ಕಾಲದಲ್ಲಿ ಕ್ರೈಸ್ತ ಸಮುದಾಯದ ವ್ಯಕ್ತಿಗಳೊಂದಿಗೆ ನ್ಯಾಯಯುತ ವರ್ತನೆ ತೋರಲಾಗುತ್ತಿತ್ತು. ಅವರ ಆಳ್ವಿಕೆಯಲ್ಲಿ ನಮ್ಮ ಮೇಲೆ ಎಂದೂ ಅನ್ಯಾಯವಾಗಿರಲಿಲ್ಲ. ಇತರ ಮುಸ್ಲಿಮೇತರ ಸಮುದಾಯದ ಬಗ್ಗೆ ಕೇವಲ ಎರಡು ಉದಾಹರಣೆಗಳನ್ನು ಇಲ್ಲಿ ನೀಡಲಾಗುತ್ತಿದೆ.

ಈಜಿಪ್ಟಿನ ಓರ್ವ ಮುಸ್ಲಿಮೇತರ ವ್ಯಕ್ತಿ ಅಂದಿನ ಖಲೀಫರಾಗಿದ್ದ ಹ.ಉಮರ್‌ರ(ರ) ಬಳಿಗೆ ಬಂದು ನಿಮ್ಮ ಗವರ್ನರ್‌ರ ಮಗ ನನ್ನ ಮಗನಿಗೆ ಅನ್ಯಾಯವಾಗಿ ಹೊಡೆದಿದ್ದಾನೆ ಎಂದು ದೂರು ನೀಡಿದರು. ಗವರ್ನರ್ ಮತ್ತು ಅವನ ಮಗನನ್ನು ಕರೆಸಲಾಯಿತು. ಆರೋಪವು ಸತ್ಯವೆಂದು ಸಾಬೀತಾಯಿತು. ಖಲೀಫರು ಹುಡುಗನೊಂದಿಗೆ ಗವರ್ನರ್‌ರ

ಮಗನಿಗೆ ಕೊರಡೆಯಿಂದ ಎರಡೇಟು ಬಾರಿಸಲು ಹೇಳಿದರು. ಅವನು ಆದೇಶವನ್ನು ಪಾಲಿಸಿದನು. ಬಳಿಕ ಗವರ್ನರ್‌ರಿಗೂ ಕೊರಡೆಯಿಂದ ಹೊಡೆಯಲು ಆದೇಶಿಸಿದರು. ಏಕೆಂದರೆ ಆತ ತಾನು ಗವರ್ನರ್‌ರ ಮಗನೆಂಬ ಅಹಂಕಾರದಿಂದ ನಿನ್ನನ್ನು ಹೊಡೆದಿರಬಹುದು ಎಂದರು. ಆದರೆ ಆ ಹುಡುಗ ನನಗೆ ಹೊಡೆದವರಿಗೆ ನಾನು ಹೊಡೆದು ಪ್ರತೀಕಾರ ತೀರಿಸಿದ್ದೇನೆ. ಗವರ್ನರ್‌ರಿಗೆ ನಾನು ಹೊಡೆಯುವುದಿಲ್ಲ ಎಂದು ಬಿಟ್ಟನು.

ಈಜಿಪ್ಟಿನ ಓರ್ವ ಮುಸ್ಲಿಮೇತರ ಮುದುಕಿ ಹ. ಉಮರ್‌ರ(ರ) ಬಳಿ ಬಂದು ಈ ರೀತಿ ದೂರು ನೀಡಿದಳು. ನಿಮ್ಮ ಗವರ್ನರ್ ಅಬುಲ್ ಆಸ್‌ರು ನನ್ನ ಒಪ್ಪಿಗೆ ಇಲ್ಲದೆ, ನನ್ನ ಮನೆಯನ್ನು ಬೀಳಿಸಿ ಮಸೀದಿಯನ್ನು ವಿಸ್ತರಿಸಿದ್ದಾರೆ. ಗವರ್ನರ್‌ರನ್ನು ಕರೆಸಲಾಯಿತು. ಮುದುಕಿ ಕೊಟ್ಟ ದೂರು ಸರಿಯಾಗಿದೆ ಎಂದು ಅವರು ಒಪ್ಪಿಕೊಂಡರು. ಮಸೀದಿಯನ್ನು ಯಾವ ಬದಿಯಲ್ಲೂ ವಿಸ್ತಾರಗೊಳಿಸಲು ಅವಕಾಶವಿರಲಿಲ್ಲ. ಇವರ ಮನೆಯಿದ್ದ ಸ್ಥಳದಲ್ಲಿ ಮಾತ್ರ ವಿಸ್ತರಿಸಬಹುದಾಗಿತ್ತು. ವೃದ್ಧೆಯ ಮನೆಯ ಅಸಲು ಬೆಲೆಯ ಎರಡು ಪಟ್ಟು ಹೆಚ್ಚು ಬೆಲೆಯನ್ನು ನೀಡಲಾಗಿದೆ. ಆದರೆ ಅವರು ಸ್ವೀಕರಿಸುತ್ತಿಲ್ಲ. ಅದನ್ನು ಬೈತುಲ್‌ಮಾಲ್‌ನಲ್ಲಿ ಇಟ್ಟಿದ್ದೇವೆ. ನಮಗೂ ಬೇರೆ ದಾರಿ ಇಲ್ಲವಾಗಿದೆ. ಆದುದರಿಂದಲೇ ನಾವು ಇವರ ಮನೆಯನ್ನು ಬೀಳಿಸಿ ಆ ಜಾಗದಲ್ಲಿ ಮಸೀದಿಯನ್ನು ವಿಸ್ತರಿಸಿದೆವು ಎಂದರು. ಖಲೀಫರು ಇದನ್ನು ಕೇಳಿ ಬಹಳ ಕುಪಿತರಾದರು ಮತ್ತು ಆ ವೃದ್ಧೆಯ ಮನೆಯಿದ್ದ ಸ್ಥಳದಲ್ಲೇ ಹೊಸ ಮನೆಯನ್ನು ನಿರ್ಮಿಸಿಕೊಡಲು ಆದೇಶಿಸಿದರು.

ಇಂತಹ ಅನೇಕ ಘಟನೆಗಳಿಂದ ಮುಸ್ಲಿಮೇತರರು ಕೂಡಾ ಇಸ್ಲಾಮೀ ಆಳ್ವಿಕೆಯಿಂದ ಸಂತುಷ್ಟರಾಗಿದ್ದರೆಂದು ತಿಳಿದು ಬರುತ್ತದೆ. ಇಂದಿಗೂ ಇದು ಇತಿಹಾಸದ ಪುಟಗಳಲ್ಲಿ ಸುರಕ್ಷಿತವಾಗಿದೆ. ಇದನ್ನು ಓದಿ ಬುದ್ಧಿಜೀವಿಗಳೆನಿಸಿಕೊಂಡವರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುವರು.

ನೆಪೋಲಿಯನ್ ಬೋನಪಾರ್ಟ್ ಹೇಳುತ್ತಾರೆ: ಪ್ರಪಂಚದ ಎಲ್ಲ ಬುದ್ಧಿವಂತ ಸುಶಿಕ್ಷಿತ ವ್ಯಕ್ತಿಗಳನ್ನು ಸೇರಿಸಿ ಅವರ ಸಹಾಯದಿಂದ ಕುರ್‌ಆನನ್ನು ಕೇಂದ್ರವಾಗಿರಿಸಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವ ದಿನ ದೂರವಿಲ್ಲವೆಂದೇ ನಾನು ಭಾವಿಸುತ್ತೇನೆ. ಏಕೆಂದರೆ ಇದು ಸತ್ಯವಾಗಿದೆ ಮತ್ತು ಇದು ಜನರನ್ನು ಯಶಸ್ಸಿನೆಡೆಗೆ ಕೊಂಡೊಯ್ಯುವ ಮಾರ್ಗವಾಗಿದೆ.

ಬರ್ನಾರ್ಡ್ ಶಾ ಹೀಗೆನ್ನುತ್ತಾರೆ: ಬರುವ ಶತಮಾನದಲ್ಲಿ ಜಗತ್ತಿನ ಧರ್ಮವು ಇಸ್ಲಾಮ್ ಆಗಿರುವುದು. ಇಂದಿನ ಮುಸ್ಲಿಮರ ಇಸ್ಲಾಮ್ ಅಲ್ಲ. ಮನುಷ್ಯನ ಬುದ್ಧಿಯಲ್ಲಿ ಸ್ಥಾಪಿತವಾಗಿರುವ ಇಸ್ಲಾಮ್.

ರವೀಂದ್ರನಾಥ ಠಾಗೂರರು ಹೇಳುತ್ತಾರೆ: ಇಸ್ಲಾಮ್ ತನ್ನ ನಿರಾಕರಿಸಲಾಗದ ಸತ್ಯ ಮತ್ತು ಜನರ ಹೃದಯಗಳ ಮೇಲೆ ಗೆಲುವನ್ನು ಸಾಧಿಸಿ ಹಿಂದೂ ಧರ್ಮದ ಮೇಲೆ ವಿಜಯವನ್ನು ಸ್ಥಾಪಿಸುವ ದಿನ ದೂರವಿಲ್ಲ. ಅಂದು ಇಡೀ ಹಿಂದೂಸ್ತಾನದಲ್ಲಿ ಒಂದೇ ಧರ್ಮವಿರುವುದು ಮತ್ತು ಅದು ಇಸ್ಲಾಮ್ ಆಗಿರುವುದು.

ಗಾಂಧೀಜಿ ಹೇಳುತ್ತಾರೆ: ಭಾರತ ದೇಶವು ಸ್ವತಂತ್ರವಾದರೆ, ನಾವು ಇಲ್ಲಿಯೂ ಹ.ಅಬೂಬಕರ್‌ರು ಸ್ಥಾಪಿಸಿದ ಶಾಸನವನ್ನು ಜಾರಿಗೊಳಿಸುವೆವು.

ಜಯಪ್ರಕಾಶ ನಾರಾಯಣರು ಪಾಟ್ನಾದ ಮೆಡಿಕಲ್ ಕಾಲೇಜ್‌ನಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಜೀವನದ ಬಗ್ಗೆ ಭಾಷಣ ಮಾಡುತ್ತಾ ಹೀಗೆ ಹೇಳಿರುವರು- ಇಂದು ಜಗತ್ತಿನ ಮುಸ್ಲಿಮರು ತಮ್ಮ - ನಿಶ್ಚಿಂತತೆಯ ಪರದೆಯನ್ನು ಸರಿಸಿ ರಂಗಕ್ಕಿಳಿದರೆ ಮತ್ತು ಇಸ್ಲಾಮಿ ಸಿದ್ಧಾಂತದ ಪ್ರಕಾರ ಕೆಲಸ ಮಾಡಿದರೆ ಜಗತ್ತಿನ ಧರ್ಮವು ಇಸ್ಲಾಮ್ ಆಗುವುದು.

# ಅಂತಿಮ ದೈವಿಕ ಗ್ರಂಥದ ವೈಜ್ಞಾನಿಕ ಪುರಾವೆಗಳು

ಇಂದು ಇಡೀ ಜಗತ್ತು ದೇವನನ್ನು ನಂಬುತ್ತದೆ. ಆದರೆ ಅವರ ಬಳಿ ದೈವಿಕ ಗ್ರಂಥವಿಲ್ಲ. ಕುರ್‌ಆನನ್ನು ದೈವಿಕ ಗ್ರಂಥವೆಂದು ನಂಬಲು ಅವರು ಸಿದ್ಧರಿಲ್ಲ. ನಾವು ಜನರಿಗೆ ಇದು ದೈವಿಕ ಗ್ರಂಥ, ನಮ್ಮ ನಿಮ್ಮೆಲ್ಲರ ಸೃಷ್ಟಿಕರ್ತನ ವತಿಯಿಂದ ಬಂದಿದೆ. ಇದರ ಆದೇಶದಂತೆ ಜೀವಿಸಿದರೆ ನಮ್ಮೆಲ್ಲ ದುಃಖ ಮತ್ತು ದಾರಿದ್ರ್ಯಗಳು ದೂರವಾಗಿ ನಾವೆಲ್ಲರೂ ಒಂದೇ ತಂದೆ-ತಾಯಿಯ ಮಕ್ಕಳಂತೆ ಒಟ್ಟು ಸೇರಿ ಜೀವಿಸಬಹುದು ಎಂಬುದರ ಬಗ್ಗೆ ವಿಶ್ವಾಸವನ್ನು ಮೂಡಿಸಬೇಕು.

ಕುರ್‌ಆನನ್ನು ಅಂತಿಮ ದೈವಿಕ ಗ್ರಂಥವೆಂದು ಜನರು ನಂಬಿದರೆ ಎಲ್ಲ ರೀತಿಯ ಸಂಕಷ್ಟಗಳ ಕಾರ್ಮುಗಿಲು ತಿಳಿಯಾಗಬಹುದು ಎಂದು ನಮ್ಮ ಪೂರ್ವಜರು ನಂಬಿದ್ದರು. ಆದುದರಿಂದಲೇ ಅವರು ಕುರ್‌ಆನ್ ಅಂತಿಮ ದೇವ ಗ್ರಂಥವೆಂದು ಸಾಬೀತುಪಡಿಸಲು ವಿಶೇಷ ಪ್ರಯತ್ನಪಟ್ಟಿದ್ದಾರೆ.

1) ಅರೇಬಿಯಾದಲ್ಲಿ ಕವಿತೆಗಳು ಬಹಳ ಪ್ರಚಲಿತವಾಗಿದ್ದವು. ಯಾವುದಾದರೂ ಕವಿತೆ ಉತ್ತಮವೆಂದು ಕಂಡುಬಂದರೆ ಅದನ್ನು ರೇಶ್ಮೆ ಬಟ್ಟೆಯ ಮೇಲೆ ಚಿನ್ನದ ದಾರ ದಿಂದ ಬರೆದು ಕಅಬಾ ಭವನದ ಒಳಭಾಗದಲ್ಲಿ ತೂಗು ಹಾಕಲಾಗುತ್ತಿತ್ತು. ಅದು ಅಲ್ಲಿನ ಅತಿದೊಡ್ಡ ಪುರಸ್ಕಾರವಾಗಿತ್ತು. ಅದುವರೆಗೆ 7 ಮಂದಿಗೆ ಇಂತಹ ಪುರಸ್ಕಾರ ಸಿಕ್ಕಿತ್ತು. ಈ 7 ಕವಿಗಳಲ್ಲಿ 'ಲಬೀದ' ಕೂಡಾ ಒಬ್ಬನಾಗಿದ್ದ. ಆತನೊಂದು ಹೊಸ ಕವನ ಬರೆದು ಕಅಬಾದ ದ್ವಾರದಲ್ಲಿ ನೇತು ಹಾಕಿದ. ಒಬ್ಬ ಮುಸ್ಲಿಮ್ ವ್ಯಕ್ತಿ ಕುರ್‌ಆನಿನ ಒಂದು ಸಣ್ಣ ಅಧ್ಯಾಯವಾದ 'ಅಲ್ ಕೌಸರ್' ಬರೆದು ಅದರ ಬಳಿಯಲ್ಲೇ ನೇತು ಹಾಕಿದ. ಇದರಲ್ಲಿ ಕೇವಲ ಮೂರು ಆಯತ್(ಸೂಕ್ತ)ಗಳಿವೆ. ಮಾರನೆಯ ದಿನ ಲಬೀದ್ ಬಂದು ನೇತು ಹಾಕಿದ ತನ್ನ ಕವನದ ಬಳಿ ಇನ್ನೊಂದು ಕವನವಿರುವುದನ್ನು ನೋಡಿ, ಮುಗಿಬಿದ್ದು ಓದಿದ. ಅದನ್ನು ಓದಿದ ಬಳಿಕ ಅದರ ಕೆಳಗೆ 'ಇದು ಮಾನವ ವಾಣಿಯಲ್ಲ' ಎಂಬ ಒಂದು ವಾಕ್ಯವನ್ನು ಸೇರಿಸಿದ. ನಮ್ಮ ಪೂರ್ವಜರು 'ಲಬೀದ'ನ ಈ ಉದ್ಗಾರವನ್ನು ನೋಡಿ

ಕುರ್‌ಆನ್ ದೈವಿಕ ಗ್ರಂಥವೆಂದು ಜಗತ್ತು ತಿಳಿಯಲಿ ಎಂದು ಕೊಂಡು ಈ ಘಟನೆಯನ್ನು ದಾಖಲಿಸಿದ್ದಾರೆ.

2) ವಿಲಾಸ್ಟನ್ ಎಂಬೋರ್ವ ವ್ಯಕ್ತಿ ಒಂದು ಪುಸ್ತಕವನ್ನು ಬರೆದಿದ್ದಾನೆ. ಅದರಲ್ಲಿ ಒಂದು ಗ್ರಾಮದ ಪ್ರಸ್ತಾಪವಿದೆ. ಅಲ್ಲಿಯ ಯುವಕರು ಪವಿತ್ರ ಕುರ್‌ಆನನ್ನು ಓದಿ ಮುಸ್ಲಿಮರಾಗುತ್ತಿದ್ದರು. ಇದರ ಬಗ್ಗೆ ಅಲ್ಲಿಯ ಹಿರಿಯರು ಬಹಳ ಚಿಂತಾಕ್ರಾಂತರಾಗಿದ್ದರು. ಅಲ್ಲಿನ ವೃದ್ಧರೆಲ್ಲಾ ಒಟ್ಟು ಸೇರಿ, ಹೀಗೇ ಮುಂದುವರಿದರೆ ನಮ್ಮ ಗ್ರಾಮದ ಯುವಕರೆಲ್ಲಾ ಮುಸ್ಲಿಮರಾಗಿ ನಮ್ಮ ಧರ್ಮವು ಕೊನೆಗೊಳ್ಳ ಬಹುದೆಂದು ಆತಂಕ ವ್ಯಕ್ತಪಡಿಸಿದರು. ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಲು ತೀರ್ಮಾನಿಸಿದರು. ಕುರ್‌ಆನಿನಂತಹ ಗ್ರಂಥವೊಂದನ್ನು ನಾವೂ ರಚಿಸಿದರೆ, ನಮ್ಮ ಯುವಕರು ಮುಸ್ಲಿಮರಾಗುವುದನ್ನು ತಡೆಯಬಹುದೆಂದು ಭಾವಿಸಿದರು. ಈ ರೀತಿಯ ಗ್ರಂಥವನ್ನು ರಚಿಸುವವರು ಯಾರು ಎಂಬ ಪ್ರಶ್ನೆ ಉದ್ಭವಿಸಿತು. ಆ ಗ್ರಾಮದಲ್ಲಿ 'ಇಬ್ನುಲ್ ಮುಖಫ್ಫ' ಎಂಬೋರ್ವ ವ್ಯಕ್ತಿಯಿದ್ದ. ಅವನು ಉತ್ತಮ ಕವಿ ಹಾಗೂ ಶ್ರೇಷ್ಠ ಸಾಹಿತಿಯಾಗಿದ್ದ. ಅವನೇ ಈ ರೀತಿಯ ಗ್ರಂಥವನ್ನು ರಚಿಸಲು ಸಮರ್ಥನೆಂದು ನಿರ್ಧರಿಸಲಾಯಿತು. ವೃದ್ಧರ ತಂಡವು ಇಬ್ನುಲ್ ಮುಖಫ್ಫನನ್ನು ಭೇಟಿಯಾಗಿ ತಮ್ಮ ಬೇಡಿಕೆಯನ್ನು ಮುಂದಿಟ್ಟಿತು. ಇಬ್ನುಲ್ ಮುಖಫ್ಫನಿಗೆ ತನ್ನ ಸಾಮರ್ಥ್ಯದ ಬಗ್ಗೆ ಬಹಳ ಹೆಮ್ಮೆ ಇತ್ತು. ಅವನು ಎರಡು ಶರತ್ತುಗಳನ್ನು ಮುಂದಿರಿಸಿ ಅವರ ಬೇಡಿಕೆಗೆ ಒಪ್ಪಿಕೊಂಡ. ಈ ಕೆಲಸ ಕಠಿಣವಾದುದರಿಂದ ಸಮಯ ತಗಲಬಹುದು. ಆದುದರಿಂದ ಒಂದು ವರ್ಷದ ವರೆಗೆ ಸಮಯಾವಕಾಶ ನೀಡಬೇಕು. ಎರಡನೆಯ ಶರತ್ತು, ಕೆಲಸ ಮಾಡಲು ನನಗೆ ಏಕಾಂತವಾಸ ಬೇಕು." ಎಲ್ಲರೂ ಈ ಶರತ್ತುಗಳನ್ನು ಒಪ್ಪಿಕೊಂಡರು. ಗ್ರಾಮದ ಹೊರಭಾಗದಲ್ಲಿ ಒಂದು ಡೇರೆಯನ್ನು ನಿರ್ಮಿಸಲಾಯಿತು. ಅಲ್ಲಿ ಅವನಿಗೆ ದೈನಂದಿನ ಎಲ್ಲ ಆವಶ್ಯಕ ಸಾಮಗ್ರಿಗಳನ್ನು ಪೂರೈಸಲಾಯಿತು. ಅವನು ಡೇರೆಯಲ್ಲೇ ಕಾರ್ಯ ಮಗ್ನನಾಗಿರುತ್ತಿದ್ದ. ಹೀಗೆ ಆರು ತಿಂಗಳು ಕಳೆದ ಬಳಿಕ ವೃದ್ಧರು ಕೆಲಸ ಎಲ್ಲಿಯ ವರೆಗೆ ತಲುಪಿದೆಯೆಂದು ನೋಡಲು ಬಯಸಿದರು. ಡೇರೆಗೆ ಹೋಗಿ ನೋಡುವುದೇನು? ಮುಖಫ್ಫ ಚಿಂತಾಕ್ರಾಂತನಾಗಿ ಕುಳಿತಿದ್ದಾನೆ. ಒಂದು ಕಾಗದವನ್ನು ತೆಗೆದು ಏನನ್ನೋ ಬರೆದ. ಸ್ವಲ್ಪ ಹೊತ್ತು ಅದನ್ನು ಓದುತ್ತಾ ಕುಳಿತ. ಬಳಿಕ ಅದನ್ನು ಹರಿದು ಮೂಲೆಗೆ ಎಸೆದ. ಪುನಃ ಯೋಚನಾ ಮಗ್ನನಾದ. ತುಂಬಾ ಹೊತ್ತು ಇದೇ ಪುನರಾವರ್ತನೆಯಾಗುತ್ತಿರುವುದನ್ನು ನೋಡಿದ ವೃದ್ಧರು ಬಳಿ ಹೋಗಿ ನೋಡುವುದೇನು? ಮುಖಫ್ಫನ ಬಳಿ ಹರಿದು ಹಾಕಿದ ಕಾಗದದ ಒಂದು ದೊಡ್ಡ ರಾಶಿಯೇ ಬಿದ್ದಿತ್ತು. ಅವನು ಹೇಳಿದ "ನಾನು ಬಹಳ ಯೋಚಿಸಿ ಒಂದು ವಾಕ್ಯವನ್ನು ರಚಿಸಿ ಬರೆಯುತ್ತೇನೆ. ಅದನ್ನು ಕುರ್‌ಆನಿನ ವಾಕ್ಯದೊಂದಿಗೆ ಹೋಲಿಸಿದಾಗ ಅದರ ಧೂಳಿನ ಸಮೀಪವೂ ನನ್ನ ವಾಕ್ಯಕ್ಕೆ ತಲುಪಲು ಸಾಧ್ಯವಾಗುವುದಿಲ್ಲ. ಇದುವರೆಗೆ ಪ್ರಥಮ ವಾಕ್ಯವೇ ಬರೆದಾಗಲಿಲ್ಲ." ಇಬ್ನುಲ್ ಮುಖಫ್ಫರ ವಿವಶತೆಯನ್ನು ಕಂಡು ಜನರಿಗೆ ಇದು ದೈವಿಕ ಗ್ರಂಥವೆಂಬುದು ಮನವರಿಕೆಯಾಗಲೆಂದು ನಮ್ಮ ಪೂರ್ವಜರು ಈ ಘಟನೆಯನ್ನು ಬರೆದಿರುವರು.

3) ಈಜಿಪ್ಟಿನಲ್ಲಿ 'ಕಾಮಿಲ್ ಗೀಲಾನೀ' ಎಂಬ ಹೆಸರಿನ ಒಬ್ಬ ಶ್ರೇಷ್ಠ ಅರಬೀ ಪಂಡಿತರಿದ್ದರು. ಅರಬೀ ಸಾಹಿತ್ಯದಲ್ಲಿ ಅವರಿಗೆ ಒಳ್ಳೆಯ ಹೆಸರಿತ್ತು. ಅವರ ಓರ್ವ ಮಿತ್ರ ಡಾ| ಫಿಂಗಲ್ ಅಮೇರಿಕಾದ ನಿವಾಸಿಯಾಗಿದ್ದರು. ಅವರಿಗೂ ಅರಬೀ ಸಾಹಿತ್ಯದಲ್ಲಿ ವಿಶೇಷ ನೈಪುಣ್ಯತೆಯಿತ್ತು. ಅರಬೀ ಭಾಷೆಯೇ ಅವರಿಬ್ಬರ ಮಿತ್ರತ್ವಕ್ಕೆ ಕಾರಣವಾಗಿತ್ತು. ಇದಲ್ಲದಿದ್ದರೆ ಗೀಲಾನಿ ಒಬ್ಬ ಯಥಾರ್ಥ ಮುಸ್ಲಿಮರಾಗಿದ್ದರು. ಫಿಂಗಲ್ ಇಸ್ಲಾಮಿನ ಬದ್ಧ ವೈರಿಯಾಗಿದ್ದರು. ಒಮ್ಮೆ ಯಾವುದೋ ಕೆಲಸದ ಮೇಲೆ ಗೀಲಾನಿಯವರಿಗೆ ಅಮೇರಿಕಾಕ್ಕೆ ಹೋಗಬೇಕಾಯಿತು. ಅವರು ಡಾ| ಫಿಂಗಲರ ಬಳಿ ತಂಗಿದರು. ಒಂದು ದಿನ ಮಾತಿನ ಮಧ್ಯೆ ಡಾ| ಫಿಂಗಲರು ಗೀಲಾನಿಯವರೊಂದಿಗೆ "ನೀವು ಕುರ್‌ಆನನ್ನು ದೈವಿಕ ಗ್ರಂಥವೆಂದು ಈಗಲೂ ನಂಬುತ್ತಿರುವಿರಾ?" ಎಂದು ಕೇಳಿ ನಕ್ಕರು. ಗೀಲಾನಿಯವರ ಬಳಿ ಈ ಪ್ರಶ್ನೆಗೆ ಉತ್ತರವಿರಲಾರದೆಂದು ಅವರು ಭಾವಿಸಿದ್ದರು. ಗೀಲಾನಿ ಬಹಳ ಗಂಭೀರತೆಯೊಂದಿಗೆ "ಅದನ್ನು ಸಿದ್ಧಪಡಿಸಿ ತೋರಿಸಲಾರದೆ ಸುಲಭದಲ್ಲಿ ಉತ್ತರಿಸಲು ಸಾಧ್ಯವಿಲ್ಲ" ಎಂದು ಬಿಟ್ಟರು. ಬಳಿಕ ಫಿಂಗಲ್‌ರೊಂದಿಗೆ ನಾವಿಬ್ಬರೂ ಒಂದು ವಿಷಯವನ್ನು ಆಯ್ದುಕೊಂಡು ಅದರ ಬಗ್ಗೆ ಅರಬಿಯಲ್ಲಿ ಒಳ್ಳೊಳ್ಳೆಯ ವಾಕ್ಯಗಳನ್ನು ರಚಿಸುವ ಮತ್ತು ಕುರ್‌ಆನಿನ ವಾಕ್ಯದೊಂದಿಗೆ ನಾವು ರಚಿಸಿದ ವಾಕ್ಯವನ್ನು ಹೋಲಿಸಿ ನೋಡುವ ಎಂದರು. ಡಾ| ಫಿಂಗಲರಿಗೆ ಇದು ಬಹಳ ಹಿಡಿಸಿತು. ನರಕದ ಬಗ್ಗೆ ವಾಕ್ಯ ರಚಿಸುವುದು ಎಂದು ತೀರ್ಮಾನಿಸಲಾಯಿತು. ಇಬ್ಬರೂ ಕಾಗದ ಮತ್ತು ಲೇಖನಿ ಹಿಡಿದು ಕುಳಿತರು. 10-12 ವಾಕ್ಯಗಳನ್ನು ರಚಿಸಿದ ಬಳಿಕ ಡಾ| ಫಿಂಗಲರು ಇದಕ್ಕಿಂತ ಉತ್ತಮ ವಾಕ್ಯ ಬೇರೆ ಇರಲಾರದು ಎಂದು ಬಿಟ್ಟರು. ಗೀಲಾನಿಯವರು ನಸುನಗುತ್ತಾ ಡಾ| ಫಿಂಗಲರತ್ತ ನೋಡಿದರು. ಡಾ| ಫಿಂಗಲ್ ಪ್ರಶ್ನಿಸಿದರು "ಕುರ್‌ಆನಿನಲ್ಲಿ ನರಕದ ಬಗ್ಗೆ ಇದಕ್ಕಿಂತ ಉತ್ತಮ ವಾಕ್ಯ ಇದೆಯಾ?" ಇದಕ್ಕಿಂತ ಉತ್ತಮವಾದುದಲ್ಲ, ನಮ್ಮ ವಾಕ್ಯಗಳು ಕುರ್‌ಆನಿನ ವಾಕ್ಯಗಳ ಧೂಳಿಗೂ ಸಮಾನವಾಗಲಾರದು ಎಂದುತ್ತರಿಸಿ ಗೀಲಾನಿಯವರು ಈ ಕೆಳಗಿನ ಸೂಕ್ತವನ್ನು ಓದಿದರು:

"ಅಂದು ನಾವು ನರಕದೊಡನೆ- 'ನೀನು ತುಂಬಿದೆಯಾ?' ಎಂದು ಕೇಳುವೆವು. ಆಗ ಅದು, 'ಇನ್ನಷ್ಟು ಇದೆಯೇ?' ಎಂದು ಕೇಳುವುದು." (ಪವಿತ್ರ ಕುರ್‌ಆನ್, 50:30)

ಡಾ| ಫಿಂಗಲರು ಮೂಕವಿಸ್ಮಿತರಾಗಿ ಬಿಟ್ಟರು. ಗೀಲಾನಿಯವರೇ ಕುರ್‌ಆನ್ ದೈವಿಕ ಗ್ರಂಥ ಎಂಬುದಕ್ಕೆ ನಾನು ಸಾಕ್ಷ್ಯ ಬರೆಯುತ್ತೇನೆ ಎಂದು ಹೇಳಿದರು.

ಡಾ| ಫಿಂಗಲರಂತಹ ಮೇಧಾವಿಗಳು ಕುರ್‌ಆನ್, ದೈವಿಕಗ್ರಂಥ ಎಂಬುದನ್ನು ಒಪ್ಪಿಕೊಂಡಂತಹ ಈ ಘಟನೆಯನ್ನು ನಮ್ಮ ಪೂರ್ವಜರು ನಮಗೂ ತಿಳಿದಿರಲಿ ಎಂಬ ಕಾರಣಕ್ಕೆ ವಿವರಿಸಿರುವರು.

4) ಪಂಜಾಬಿನ ಅಲ್ಲಾಮಾ ಮಶ್‌ರಿಕೀ ಬಹಳ ದೊಡ್ಡ ವಿದ್ವಾಂಸರಾಗಿದ್ದರು. ರಷ್ಯಾ, ಅಮೇರಿಕಾ, ಇಂಗ್ಲೆಂಡ್ ಮುಂತಾದ ಜಗತ್ತಿನ ಹಲವು ದೇಶಗಳನ್ನು ಸುತ್ತಿದ್ದರು. ಅವರು

ಹೀಗೆ ಬರೆಯುತ್ತಾರೆ: "ಒಂದು ಆದಿತ್ಯವಾರ ಬೆಳಗಿನ ಹೊತ್ತು ನಾನು ಲಂಡನ್ನಿನ ಒಂದು ಸ್ಥಳದಲ್ಲಿ ಕುಳಿತಿದ್ದೆ. ಆಕಾಶವು ಮೋಡಗಳಿಂದ ಆವರಿಸಿತ್ತು. ತುಂತುರು ಮಳೆ ಹನಿಯುತ್ತಿತ್ತು. ನಾನು ನೋಡುತ್ತಿದ್ದಂತೆ ಅಂದಿನ ದೊಡ್ಡ ವಿಜ್ಞಾನಿ ಮತ್ತು ಧಾರ್ಮಿಕ ನಾಯಕರಾಗಿದ್ದ ಡಾ| ಜೇಮ್ಸ್ ಜೆಕ್ಸ್ ಕಂಕುಳಲ್ಲಿ ಒಂದು ಛತ್ರಿ, ಕೈಯಲ್ಲೊಂದು ಬೈಬಲ್ ಗ್ರಂಥ ಹಿಡಿದು ಕೊಂಡು ಹೋಗುತ್ತಿದ್ದರು. ಓಡಿಹೋಗಿ ಅವರಿಗೆ ಸಲಾಮ್ ಹೇಳಿದೆ. 'ಏನು ಬೇಕಾಗಿತ್ತು?' ಅವರು ಪ್ರಶ್ನಿಸಿದರು. ನಾನು ನಿಮ್ಮೊಂದಿಗೆ ಎರಡು ಪ್ರಶ್ನೆಗಳನ್ನು ಕೇಳಬೇಕೆಂದಿರುವೆ. ತುಂತುರು ಮಳೆಯಾಗುತ್ತಿದೆ. ನೀವು ಛತ್ರಿಯನ್ನು ಮಡಚಿ ಕಂಕುಳದಲ್ಲಿಟ್ಟಿರುವಿರೇಕೆ? ಎಂದು ಪ್ರಶ್ನಿಸಿದೆ. ಇದನ್ನು ಕೇಳಿ ಜೇಮ್ಸ್ ಜೆಕ್ಸ್ ತಮ್ಮ ಪೆದ್ದುತನಕ್ಕೆ ನಕ್ಕುಬಿಟ್ಟರು ಮತ್ತು ಕೊಡೆಯನ್ನು ಬಿಡಿಸಿ ಹಿಡಿದರು. ನಿಮ್ಮ ಇನ್ನೊಂದು ಪ್ರಶ್ನೆ ಏನೆಂದು ಕೇಳಿದರು. ಆಗ ನಾನು "ನೀವು ಚರ್ಚ್‌ಗೆ ಏಕೆ ಹೋಗುತ್ತೀರಿ?" ಎಂದು ಪ್ರಶ್ನಿಸಿದೆ. ಸ್ವಲ್ಪ ಹೊತ್ತು ಮೌನವಾದ ಬಳಿಕ 'ಸಾಯಂಕಾಲ ನನ್ನೊಂದಿಗೆ ಚಹಾ ಕುಡಿಯಲು ಬನ್ನಿ' ಎಂದು ಅವರು ನನ್ನನ್ನು ಆಮಂತ್ರಿಸಿ ಹೊರಟು ಹೋದರು. ಸಾಯಂಕಾಲ ನಾಲ್ಕು ಗಂಟೆಗೆ ನಾನು ಜೇಮ್ಸ್‌ರ ಮನೆಗೆ ಹೋದಾಗ ಅವರ ಪತ್ನಿ ಸ್ವಾಗತಿಸಿದರು. ಜೇಮ್ಸ್‌ರವರು ಚಹಾಕ್ಕಾಗಿ ಕುಳಿತ ಮೇಜಿನೆಡೆಗೆ ಕರೆದುಕೊಂಡು ಹೋಗಿ ನನ್ನೊಂದಿಗೆ ಕುಳಿತುಕೊಳ್ಳಲು ಹೇಳಿದರು. ಜೇಮ್ಸ್‌ರವರು ಮಾತಿಗಿಳಿದರು. ನಾನು ಚರ್ಚ್‌ಗೆ ಹೋಗಿ ತಲೆ ಬಾಗಿಸಿದರೆ ನನ್ನ ಮನಸ್ಸಿಗೆ ತುಂಬಾ ನೆಮ್ಮದಿ ಸಿಗುತ್ತದೆ ಮನಸ್ಸು ಶಾಂತವಾಗುತ್ತದೆ. ಇದು ನನ್ನ ಎರಡನೆಯ ಪ್ರಶ್ನೆಗೆ ಅವರ ಉತ್ತರವಾಗಿತ್ತು. ನಾನು ಜೇಮ್ಸ್‌ರಿಗೆ ಕುರ್‌ಆನಿನ ಕೆಲವು ಸೂಕ್ತಗಳನ್ನು ಓದಿ ಹೇಳಿದೆ. ಅವುಗಳಲ್ಲಿ ಇದೂ ಒಂದಾಗಿತ್ತು.

"ವಾಸ್ತವದಲ್ಲಿ ಅಲ್ಲಾಹನ ದಾಸರಲ್ಲಿ ಜ್ಞಾನವುಳ್ಳವರು ಮಾತ್ರ ಅವನನ್ನು ಭಯ ಪಡುತ್ತಾರೆ." **(ಪವಿತ್ರ ಕುರ್‌ಆನ್, 35:28)**

ಇದನ್ನು ಕೇಳುತ್ತಿದ್ದಂತೆಯೇ ಜೇಮ್ಸ್ ಆಶ್ಚರ್ಯ ವ್ಯಕ್ತಪಡಿಸಿದರು ಮತ್ತು "ನೀವು ಬಹಳ ದೊಡ್ಡ ಮಾತನ್ನು ಹೇಳಿದಿರಿ ಎಂದರು. ನಾನು 50 ವರ್ಷಗಳಿಂದ ಅಧ್ಯಯನ ನಿರತನಾಗಿದ್ದೇನೆ, ಆದರೆ ನನಗಿದು ಹೊಳೆದಿರಲಿಲ್ಲ. ಇದು ಕುರ್‌ಆನಿನಲ್ಲಿದೆಯೇ?" ಎಂದು ಪ್ರಶ್ನಿಸಿದಾಗ ನಾನು 'ಹೌದು' ಎಂದುತ್ತರಿಸಿದೆ. ಜೇಮ್ಸ್‌ರವರು ಹೇಳಿದರು. "ಮಶ್‌ರಕಿಯವರೇ ಬರೆದಿಟ್ಟು ಕೊಳ್ಳಿ, ಕುರ್‌ಆನ್ ದೈವಿಕ ಗ್ರಂಥವೆಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ಮುಹಮ್ಮದ್‌ರು(ಸ) ಓದು ಬರಹ ಬಲ್ಲವರಾಗಿರಲಿಲ್ಲ. ಈ ಸತ್ಯವನ್ನು ನಿಶ್ಚಯವಾಗಿಯೂ ದೇವನು ಅವರಿಗೆ ತೋರಿಸಿ ಕೊಟ್ಟನು."

ಈ ಎಲ್ಲಾ ಘಟನೆಗಳಲ್ಲಿ ಕುರ್‌ಆನಿನ ಉನ್ನತ ಮಟ್ಟದ ಸಾಹಿತ್ಯದ ಕುರಿತು ಹೇಳಲಾಗಿದೆ. ಜನರು ಇದರಿಂದ ಪ್ರಭಾವಿತರಾಗಿ ಕುರ್‌ಆನ್ ದೈವಿಕ ಗ್ರಂಥವೆಂಬುದನ್ನು ತಿಳಿದುಕೊಳ್ಳಲಿ ಎಂಬುದೇ ಇದರ ಉದ್ದೇಶವಾಗಿದೆ.

1919ರಲ್ಲಿ ಆಝಂಗಢದ ಒಂದು ಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ(ಮದರಸತುಲ್ ಇಸ್ಲಾಹ್) ನಾನು ಸೇರಿಕೊಂಡೆ. ಆ ಸಮಯದಲ್ಲಿ ಅಲ್ಲಿ ಅರಬೀ ಭಾಷೆಯ 4 ವರ್ಷದ ಕೋರ್ಸ್ ಇತ್ತು. ಈ ಕೋರ್ಸನ್ನು ಪೂರ್ತಿಗೊಳಿಸಿದ ಬಳಿಕ ನಾನು ಬನಾರಸ್‌ನ ಕ್ವೀನ್ಸ್ ಕಾಲೇಜಿನಲ್ಲಿ ಇಂಟರ್ ಪಾಸುಮಾಡಿದೆ. ಅಲೀಘಡ ಮುಸ್ಲಿಮ್ ಯೂನಿವರ್ಸಿಟಿಯಲ್ಲಿ ಬಿ.ಎಸ್ಸಿ, ಎಮ್.ಎಸ್ಸಿ ಮತ್ತು ಬಿ.ಎ. ಯಲ್ಲಿ ಡಿಗ್ರಿಗಳನ್ನು ಪಡೆದುಕೊಂಡೆ. ಇದರಲ್ಲೇ ನನ್ನ 13-14 ವರ್ಷಗಳು ಮುಗಿದು ಹೋದುವು. ಈ ಸುದೀರ್ಘ ಅವಧಿಯಲ್ಲಿ ನನಗೆ ಅರಬೀ ಗ್ರಂಥಗಳನ್ನು ಓದಲು ಅವಕಾಶ ಸಿಗಲಿಲ್ಲ. ಕಲಿತ ಅರಬೀಯೂ ಅಲ್ಪಸ್ವಲ್ಪ ಮರೆತು ಹೋದಂತಾಗಿತ್ತು. ಆದರೂ ಸಂಪೂರ್ಣ ಮರೆತಿರಲಿಲ್ಲ. ನಾನು ನಮ್ಮ ಪೂರ್ವಜರು ವಿವರಿಸಿರುವ ಈ ಘಟನೆಗಳಿಂದ ಪ್ರಭಾವಿತನಾಗಿರಲಿಲ್ಲ. ಹಾಗಾದರೆ ಅರಬೀ ಭಾಷೆ ಬಾರದವರು ಇದರಿಂದ ಹೇಗೆ ಪ್ರಭಾವಿತರಾದಾರೆಂದು ನಾನು ಯೋಚಿಸಿದೆ. ಆದುದರಿಂದ ನಾನು ಜನರು ಕುರ್‌ಆನ್ ದೈವಿಕ ಗ್ರಂಥವೆಂಬ ಸತ್ಯವನ್ನು ತಿಳಿಯಲು ಬೇರೊಂದು ಉಪಾಯವನ್ನು ಕಂಡು ಹಿಡಿಯಬೇಕಾಯಿತು. ಕುರ್‌ಆನಿನಲ್ಲಿರುವ ಹಲವು ವಿಷಯಗಳು ಇಂದಿಗೂ ಮಾನವ ಜಗತ್ತಿಗೆ ತಿಳಿದಿಲ್ಲ. ಆದುದರಿಂದ 1500 ವರ್ಷಗಳಿಗೆ ಮೊದಲು ಕುರ್‌ಆನ್ ಹೇಗೆ ಇದನ್ನು ಸ್ಪಷ್ಟವಾಗಿ ವರ್ಣಿಸಿತು ಎಂಬ ಪ್ರಶ್ನೆಯು ಕುರ್‌ಆನನ್ನು ಓದಿದಾಗ ನನ್ನ ಮನಸ್ಸಿನಲ್ಲಿ ಉದಿಸಿತು. ಓದು ಬರಹ ತಿಳಿದ ಎಲ್ಲರಿಗೂ ತಿಳಿದಿದೆ, ದೇವನಿಗೆ ಎಲ್ಲ ವಿಷಯಗಳ ಜ್ಞಾನವಿದೆ. ಆದುದರಿಂದ ಕುರ್‌ಆನಿನ ವಿವರಣೆಯು ದೇವನಿಂದ ಬಂದಿದೆ ಎಂಬುದು ಸ್ಪಷ್ಟ. ಈ ಸತ್ಯದ ಮುಂದೆ ಎಲ್ಲರೂ ತಲೆಬಾಗಲೇಬೇಕು. ಇದು ದೈವಿಕ ಗ್ರಂಥ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಈ ದೃಷ್ಟಿಕೋನ ವನ್ನಿಟ್ಟು ನಾನು ಕುರ್‌ಆನಿನ ಅಧ್ಯಯನ ಆರಂಭಿಸಿದಾಗ ಇತ್ತೀಚಿನ ವರೆಗೆ ಮಾನವ ಸಮೂಹಕ್ಕೆ ತಿಳಿದಿರದ ಬಹಳಷ್ಟು ವಿಚಾರಗಳು, 1500 ವರ್ಷಗಳ ಹಿಂದೆ ಬಂದ ಕುರ್‌ಆನಿನಲ್ಲಿ ಉಲ್ಲೇಖಿಸಲ್ಪಟ್ಟಿರುವುದು ಗಮನಕ್ಕೆ ಬಂತು. ಇದರ ಬಗ್ಗೆ ಸ್ಪಷ್ಟವಾದ ವಿವರಣೆಯಿದೆ. ಉದಾಹರಣೆಗೆ: ಸಿಹಿ-ಉಪ್ಪು ನೀರು.

16ನೆಯ ಶತಮಾನದ ಮಾತು. ತುರ್ಕಿ ಸಾಮ್ರಾಜ್ಯದ ನೌಕಾಸೇನೆಯ ಕಮಾಂಡರ್ ತನ್ನ ಸೇನೆಯೊಂದಿಗೆ ಇರಾನಿನ ಉಪಸಾಗರದ ಬಳಿ ನಿಂತಿದ್ದರು. ಅಲ್ಲಿಯ ನೀರು ಉಪ್ಪಾಗಿತ್ತು. ಸೇನೆಯ ಬಳಿ ಮೊದಲು ಸಾಕಷ್ಟು ಕುಡಿಯುವ ನೀರಿನ ಸಂಗ್ರಹವಿತ್ತು. ಆದರೆ ನಿಧಾನವಾಗಿ ಮುಗಿಯುತ್ತಾ ಬಂತು. ಸೇನೆಯ ಕಮಾಂಡರ್ ಅಲೀ ರಈಸ್‌ರಿಗೆ ನೀರು ಮುಗಿದು ಹೋದರೆ ಕುಡಿಯುವ ನೀರಿಗೆ ಏನು ಮಾಡುವುದು ಎಂಬ ಚಿಂತೆ ಆರಂಭ ವಾಯಿತು. ಅವರು ಸಿಹಿನೀರಿಗಾಗಿ ಬಹಳ ಹುಡುಕಾಟ ನಡೆಸಿದರೂ ಸಿಗಲಿಲ್ಲ. ಇರಾನಿನ ನಾಲ್ಕು ಬದಿಗಳಲ್ಲಿ ಮರುಭೂಮಿ ಇತ್ತು. ಒಂದು ದಿನ ಸೈನಿಕನೋರ್ವ ನೀರನ್ನು ಬಾಯಿಗೆ ಹಾಕಿಕೊಂಡು ಈ ನೀರು ಸಿಹಿಯಾಗಿದೆ ಎಂದು ಜೋರಾಗಿ ಕಿರುಚಿದ. ನಿನಗೆ ಹುಚ್ಚು ಹಿಡಿಯಿತಾ ಎಂದು ಎಲ್ಲರೂ ಅವನನ್ನು ಗೇಲಿ ಮಾಡಿದರು. ಇನ್ನೊರ್ವ ಸೈನಿಕನೂ ನೀರು

ಕುಡಿದು ನೋಡಿ ಸಿಹಿಯಾಗಿರುವುದು ಸತ್ಯ ಸಂಗತಿ ಎಂದನು. ಎಲ್ಲ ಸೈನಿಕರೂ ಓಡೋಡಿ ಬಂದು ನೀರನ್ನು ಬಾಯಿಗೆ ಹಾಕಿಕೊಂಡು ಪರೀಕ್ಷಿಸಿದರು. ಸಮುದ್ರದಲ್ಲೇ ಸ್ವಲ್ಪ ದೂರದ ವರೆಗೆ ನೀರು ಸಿಹಿಯಾಗಿದ್ದು ಬಳಿಕ ನಾಲ್ಕು ಕಡೆ ಉಪ್ಪಾದ ನೀರಿರುವುದು ತಿಳಿದು ಬಂತು. ಸಮುದ್ರದ ಉಪ್ಪು ನೀರಿನ ಮಧ್ಯೆ ಸಿಹಿನೀರಿರುವುದು ಅವರಿಗೆ ಅಚ್ಚರಿಯನ್ನುಂಟು ಮಾಡಿತ್ತು. ಈ ಆಶ್ಚರ್ಯಜನಕ ಸಂಗತಿಯನ್ನು ಮೊದಲು ಬಹಿರಂಗಪಡಿಸಿದ ವ್ಯಕ್ತಿ ಅಲೀ ರಈಸ್ ಆಗಿದ್ದಾನೆ. ಇವನಿಗಿಂತ ಮೊದಲು ಸಮುದ್ರದ ಉಪ್ಪುನೀರಿನ ಮಧ್ಯೆಯೂ ಸಿಹಿನೀರು ಇರುತ್ತದೆ. ಆದರೆ ಅವು ಪರಸ್ಪರ ಒಂದನ್ನೊಂದು ಸೇರುವುದಿಲ್ಲ ಎಂಬ ವಿಷಯವು ಯಾರಿಗೂ ತಿಳಿದಿರಲಿಲ್ಲ. ಅಮೇರಿಕನ್ನರಿಗೆ ಈ ವಿಷಯವು ತಿಳಿದಾಗ ಅವರು ಒಂದು ಹಡಗನ್ನು ಆ ಸ್ಥಳದಲ್ಲಿ ನಿಲ್ಲಿಸಿದರು ಮತ್ತು ಪಂಪಿನ ಮೂಲಕ ಸಮುದ್ರದ ಮಧ್ಯೆ ಇರುವ ಸಿಹಿ ನೀರನ್ನು ದಡಕ್ಕೆ ತಲುಪಿಸುವ ಕೆಲಸ ಆರಂಭಿಸಿದರು. ಕುರ್‌ಆನಿನಲ್ಲಿ 1500 ವರ್ಷಗಳಿಗೆ ಮೊದಲೇ ಈ ವಿಷಯವು ಬಂದಿರುತ್ತದೆ.

"ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು. ಆದರೂ ಅವುಗಳ ನಡುವೆ ಒಂದು ಪರದೆ ಅಡ್ಡವಾಗಿದ್ದು ಅದನ್ನು ಅವು ಮೀರುವುದಿಲ್ಲ."

**(ಪವಿತ್ರ ಕುರ್‌ಆನ್, 55:19-20)**

"ಎರಡು ಸಮುದ್ರಗಳನ್ನು ಸೇರಿಸಿಟ್ಟಿರುವವನು ಅವನೇ. ಒಂದು ರುಚಿಕರವೂ ಸಿಹಿಯೂ ಆಗಿದೆ. ಇನ್ನೊಂದು ಉಪ್ಪೂ ಕಹಿಯೂ ಆಗಿದೆ. ಇವೆರಡರ ಮಧ್ಯೆ ಒಂದು ತೆರೆ ಇದೆ. ಅವು ಪರಸ್ಪರ ಬೆರೆಯದಂತೆ ಮಾಡುವ ಒಂದು ತಡೆ ಇದೆ." **(ಪವಿತ್ರ ಕುರ್‌ಆನ್, 25:53)**

ಅಲೀ ರಈಸ್‌ನ ಮೊದಲು ಈ ಆಶ್ಚರ್ಯಜನಕ ವಿಷಯ ಜಗತ್ತಿಗೆ ತಿಳಿದಿರಲಿಲ್ಲವೆಂದಾದ ಮೇಲೆ 1500ವರ್ಷಗಳ ಮೊದಲು ಬಂದ ಕುರ್‌ಆನಿನಲ್ಲಿ ಈ ವಿಷಯದ ವರ್ಣನೆ ಹೇಗೆ ಬಂದಿರಬಹುದು ಎಂಬುದು ಸೋಜಿಗವೆನಿಸುತ್ತದೆ. ಒಬ್ಬ ಅಕ್ಷರ ಜ್ಞಾನವುಳ್ಳ ವ್ಯಕ್ತಿ ದೇವನಿಗೆ ಎಲ್ಲ ವಿಷಯಗಳ ಜ್ಞಾನವಿದೆ ಎಂಬುದನ್ನು ತಿಳಿಯಬಲ್ಲನು. ಆದುದರಿಂದಲೇ ಪವಿತ್ರ ಕುರ್‌ಆನ್ ದೈವಿಕ ಗ್ರಂಥವಾಗಿದೆ.

ಜನರಿಗೆ ಇರಾನಿನ ಉಪಸಾಗರಗಳಲ್ಲಿ ಸಿಹಿ ಮತ್ತು ಉಪ್ಪು ನೀರು ಒಟ್ಟೊಟ್ಟಿಗೆ ಸಿಕ್ಕಿದಾಗ ಬೇರೆ ಸಾಗರಗಳಲ್ಲಿ ಎಲ್ಲೆಲ್ಲಾ ಸಮುದ್ರದಲ್ಲಿ ಉಪ್ಪು ಮತ್ತು ಸಿಹಿ ನೀರು ಜೊತೆಯಾಗಿ ಸಿಗುತ್ತದೆ ಎಂಬುದಕ್ಕಾಗಿ ಶೋಧಕಾರ್ಯ ಆರಂಭವಾಯಿತು. ಅನೇಕ ಸಾಗರಗಳಲ್ಲಿ ಉಪ್ಪು ಮತ್ತು ಸಿಹಿ ನೀರು ಜೊತೆಯಾಗಿ ಇರುವ ವಿಷಯವು ತಿಳಿದು ಬಂತು. ಶ್ರೀಲಂಕಾದ ಉತ್ತರ ಸಮುದ್ರಗಳಲ್ಲಿ, ಜಪಾನಿನ ತೀರ ಪ್ರದೇಶಗಳಲ್ಲಿ ಸಿಹಿ ಮತ್ತು ಉಪ್ಪುನೀರಿನ ಭಂಡಾರಗಳು ಪರಸ್ಪರ ಸಮೀಪದಲ್ಲಿರುವುದು ತಿಳಿದು ಬಂತು.

ಪ್ರಾಚೀನ ಕಾಲದಿಂದಲೇ ಇರಾನಿನ ಸಾಗರಗಳಲ್ಲಿ ಮುತ್ತು ಮತ್ತು ಹವಳಗಳು ಸಿಗುತ್ತಿದ್ದುವು. ಇವುಗಳು ಉಪ್ಪು ಮತ್ತು ಸಿಹಿನೀರು ಜೊತೆಯಾಗಿರುವ ಸ್ಥಳಗಳಲ್ಲೇ ಸಿಗುತ್ತಿದ್ದವು. ಇದರ ಬಳಿಕ ಶ್ರೀಲಂಕಾ, ಜಪಾನ್‌ಗಳ ಸಾಗರ ತೀರಗಳಲ್ಲೂ ಉಪ್ಪು ಮತ್ತು

ಸಿಹಿನೀರಿನ ತಾಣಗಳು ಪರಸ್ಪರ ಸಮೀಪವಿರುವ ಸ್ಥಳಗಳಲ್ಲಿ ಮುತ್ತು ಮತ್ತು ಹವಳಗಳು ಸಿಗುವುದು ಬೆಳಕಿಗೆ ಬಂತು. ಈ ವಿಷಯವೂ ರಈಸ್‌ರ ಆಶ್ಚರ್ಯಜನಕ ಸಂಶೋಧನೆಯ ಬಳಿಕವೇ ತಿಳಿಯಿತು. ಆದರೆ ಪವಿತ್ರ ಕುರ್‌ಆನ್ 1500 ವರ್ಷಗಳಿಗೆ ಮೊದಲೇ ಈ ವಿಷಯವನ್ನು ಅಂದರೆ ಉಪ್ಪು ಮತ್ತು ಸಿಹಿನೀರಿರುವೆಡೆಗಳಲ್ಲಿ ಮುತ್ತು ಮತ್ತು ಹವಳಗಳು ಸಿಗುತ್ತವೆ ಎಂಬುದನ್ನು ತಿಳಿಸಿದೆ.

**"ಈ ಸಮುದ್ರಗಳಿಂದ ಮುತ್ತು ಮತ್ತು ಹವಳಗಳು ಲಭಿಸುತ್ತವೆ."**

**(ಪವಿತ್ರ ಕುರ್‌ಆನ್, 55:22)**

ರಈಸ್‌ರ ಶೋಧನೆಯ ಮೊದಲು ಜಗತ್ತಿಗೆ ಮುತ್ತು ಹವಳಗಳು ಎಲ್ಲಿ ಸಿಗುತ್ತವೆ ಎಂಬುದು ತಿಳಿದಿರಲಿಲ್ಲ. ಆದರೆ 1500 ವರ್ಷಗಳಿಗೆ ಮೊದಲು ಬಂದ ಪವಿತ್ರ ಕುರ್‌ಆನಿನಲ್ಲಿ ಈ ವಿಷಯ ಬಂದಿರುತ್ತದೆಯೆಂದಾದರೆ, ಇದನ್ನು ನೋಡಿದ ಪ್ರತಿಯೊಬ್ಬ ಬುದ್ಧಿವಂತನಿಗೂ ದೇವನಿಗೆ ಸಕಲ ವಿಷಯಗಳ ಜ್ಞಾನವಿರುತ್ತದೆ ಮತ್ತು ಪವಿತ್ರ ಕುರ್‌ಆನ್ ದೈವಿಕ ಗ್ರಂಥವಾಗಿದೆ ಎಂಬುದು ಮನವರಿಕೆಯಾಗುತ್ತದೆ.

## ಅಪಕೇಂದ್ರೀಯ ಬಲ

ಯಾವುದೇ ಒಂದು ವಸ್ತುವು ವೃತ್ತದೊಳಗೆ ಪ್ರವೇಶಿಸುವಾಗ ಅದರ ಪ್ರತ್ಯೇಕ ಕಣಗಳಲ್ಲಿ ಒಂದು ಬಲವು ಉತ್ಪನ್ನವಾಗಿ ಅದನ್ನು ಕೇಂದ್ರದಿಂದ ದೂರಕ್ಕೆ ತಳ್ಳುತ್ತದೆ. ಈ ಬಲವನ್ನು ಅಪಕೇಂದ್ರೀಯ ಬಲ(Centrifugal Force) ಎನ್ನುತ್ತಾರೆ. ಕುಂಬಾರನು ತನ್ನ ಚಕ್ರದ ಮೇಲೆ ಸ್ವಲ್ಪ ಮಣ್ಣನ್ನು ಇರಿಸುತ್ತಾನೆ ಮತ್ತು ಚಕ್ರವನ್ನು ವೇಗವಾಗಿ ತಿರುಗಿಸಿದಾಗ ಮಣ್ಣು ದೂರಕ್ಕೆ ಹೋಗಿ ಬೀಳುತ್ತದೆ. ಅಪಕೇಂದ್ರೀಯ ಬಲವು ಮಣ್ಣು ದೂರಕ್ಕೆ ಹೋಗಿ ಬೀಳುವಂತೆ ಮಾಡುತ್ತದೆ. ಒಂದು ಕಲ್ಲನ್ನು ದಾರಕ್ಕೆ ಬಿಗಿದು ಒಂದು ವೃತ್ತದೊಳಕ್ಕೆ ಹಾಕಿದಾಗ ಅಪಕೇಂದ್ರೀಯ ಬಲ ಉಂಟಾಗಿ ಹಗ್ಗ ಕಡಿದು ಕಲ್ಲು ಕೆಳಗೆ ಬೀಳುತ್ತದೆ. ಇದೇ ರೀತಿ ಯಾವುದೇ ವಸ್ತುವನ್ನು ವೃತ್ತದೊಳಕ್ಕೆ ಹಾಕಿದಾಗ ಅಪಕೇಂದ್ರೀಯ ಬಲ ಉಂಟಾಗುತ್ತದೆ. ನಾವು ವಾಸಿಸುತ್ತಿರುವ ಈ ಭೂಮಿಯು ತನ್ನ ಅಕ್ಷದ ಮೇಲೆ ಗಂಟೆಗೆ ಒಂದು ಸಾವಿರ ಮೈಲು ವೇಗದಲ್ಲಿ ಚಲಿಸುತ್ತಿದೆ. ಪ್ರತಿ ಗಂಟೆಗೆ 6,600ಮೈಲು ವೇಗದಲ್ಲಿ ಸೂರ್ಯನಿಗೆ ಸುತ್ತು ಬರುತ್ತಿದೆ. ಆದರೆ ಯಾವುದೇ ಅಪಕೇಂದ್ರೀಯ ಬಲ ಉಂಟಾಗುವುದಿಲ್ಲ. ಇದಕ್ಕೆ ಕಾರಣ ಹೊಳೆಯದೆ ವಿಜ್ಞಾನಿಗಳು ಚಿಂತಾಕ್ರಾಂತರಾಗಿದ್ದರು.

ನಾನು ಆಗ ಅಲೀಘಡ ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿಯ ಪರೀಕ್ಷೆ ಎದುರಿಸುತ್ತಿದ್ದೆ. ಮೌಖಿಕ ಪರೀಕ್ಷೆಯನ್ನು ನಡೆಸಲು ರಂಗೂನಿನ ವಿಶ್ವವಿದ್ಯಾಲಯದಿಂದ ಓರ್ವ ಪರೀಕ್ಷಕರು (Examiner) ಬರಬೇಕಿತ್ತು. ಬಹಳ ದಿನಗಳಿಂದ ನಾವು ಅವರ ಆಗಮನವನ್ನು ನಿರೀಕ್ಷಿಸುತ್ತಿದ್ದೆವು. ಅವರು ಬಂದರು. ನಾನು ನಮ್ಮ ಮುಖ್ಯಸ್ಥರ ಬಳಿಹೋಗಿ ನಾನು ಬಹಳ ದಿನಗಳಿಂದ ಇಲ್ಲಿಯೇ ಇದ್ದೇನೆ. ನನ್ನ ಪರೀಕ್ಷೆಯನ್ನು ಮೊದಲು ಮುಗಿಸಿದರೆ ನಾನು 12 ಗಂಟೆಯ ರೈಲಿನಲ್ಲಿ ಊರಿಗೆ ಹೊರಡಬಹುದು, ಆದುದರಿಂದ ತಾವು ಅನುಮತಿ ನೀಡಬೇಕೆಂದು

ಬಿನ್ನವಿಸಿದೆ. ಅವರು ಒಪ್ಪಿಗೆ ನೀಡಿದರು. ಪರೀಕ್ಷೆ ಆರಂಭವಾಯಿತು. ನನ್ನ ಹೆಸರನ್ನೇ ಮೊದಲು ಕರೆದರು. ನಾನು ಒಳಹೋದಾಗ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದರು. ಪರೀಕ್ಷಕರು ಜೇಬಿನಿಂದ ಪ್ರಶ್ನೆ ಪತ್ರಿಕೆಯನ್ನು ಹೊರತೆಗೆದು ಕಳೆದ ವರ್ಷ ಜರ್ಮನಿಯಲ್ಲಿ ಒಂದು ಪುಸ್ತಕ ಬಿಡುಗಡೆಯಾಗಿದೆ, ನೀನದನ್ನು ಓದಿದ್ದೀಯಾ ಎಂದು ಪ್ರಶ್ನಿಸಿದರು. "ಇಲ್ಲ ನಾನು ಇದುವರೆಗೆ ಅದರ ಹೆಸರನ್ನೂ ಕೇಳಿಲ್ಲ"ವೆಂದು ಉತ್ತರಿಸಿದೆ. ಇದನ್ನು ಕೇಳಿ ಅವರ ಮುಖದಲ್ಲಿ ಕೋಪದ ಗೆರೆಗಳು ಗೋಚರವಾದುವು. ಇನ್ನೊಂದು ಜೇಬಿನಿಂದ ಪತ್ರಿಕೆ ತೆಗೆದು ಬೇರೊಂದು ಪುಸ್ತಕದ ಹೆಸರು ಹೇಳಿ ನೀನಿದನ್ನು ಓದಿರುವೆಯಾ ಎಂದು ಪ್ರಶ್ನಿಸಿದರು. ನಾನು ಇಲ್ಲವೆಂದು ಉತ್ತರಿಸಿದೆ. ಕೋಪದಿಂದ ಮುಖ ಕೆಂಪಾಗಿಸಿ, ಹೊರ ಹೋಗಲು ಹೇಳಿದರು. ನಾನು ಊರಿಗೆ ಹೇಗೆ ಹೋಗಲಿ! ರೂಮಿಗೆ ಹೋಗಿ ಕಂಬಳಿ ಹೊದ್ದು ಬಿದ್ದುಕೊಂಡೆ. ನನಗೆ ನನ್ನ ಇಡೀ ಒಂದು ವರ್ಷ ಹಾಳಾಗಿ ಹೋದ ಬೇಸರವಿತ್ತು. ಪರೀಕ್ಷೆ ಮುಗಿದ ಮೇಲೆ ಪರೀಕ್ಷಕರು ಹೊರಟು ಹೋದರು. ನಾನು ಸಾಯಂಕಾಲ ನಮ್ಮ ಮುಖ್ಯಸ್ಥರ ಬಂಗಲೆಗೆ ಹೋದೆ. ನಾನು ಫೇಲಾಗಿ ಹೋದೆ ಎಂದು ಬೇಸರ ವ್ಯಕ್ತಪಡಿಸಿದೆ. ನೀನು ಅನುತ್ತೀರ್ಣನಾಗಲಾರೆ ಎಂದವರು ಸಮಾಧಾನಪಡಿಸಿದರು. ನಿನಗೆ 20 ಅಂಕಗಳನ್ನು ನೀಡಲಾಗಿದೆ. 20 ಅಂಕಗಳನ್ನು ಗಳಿಸಿದವರೆಲ್ಲಾ ಅನುತ್ತೀರ್ಣರಾಗುವುದಿಲ್ಲ. ಪಾಸಾಗಲು 44% ಅಗತ್ಯವಿದೆ. ಆದರೆ ಬೇರೆ ವಿಷಯಗಳಲ್ಲಿ ಉತ್ತಮ ಅಂಕಗಳಿದ್ದರೆ ನೀನು ಖಂಡಿತಾ ಉತ್ತೀರ್ಣನಾಗುವಿ ಎಂದರು. ನಾನು ಅವರೊಂದಿಗೆ ಪರೀಕ್ಷಕ ನನ್ನೊಂದಿಗೆ ಏನನ್ನು ಕೇಳಬಯಸಿದ್ದರು ಎಂದು ಪ್ರಶ್ನಿಸಿದೆ. ಕಳೆದ ವರ್ಷ ಜರ್ಮನಿಯ ಓರ್ವ ವಿಜ್ಞಾನಿ ಭೂಮಿಗೆ ಅಪಕೇಂದ್ರೀಯ ಬಲವಿಲ್ಲದ ಕಾರಣ ಭೂಮಿಯಲ್ಲಿ ಪರ್ವತಗಳು ನಿಂತಿವೆ. ಹಿಮಾಲಯ, ಆಲ್ಪಸ್, ರಾಕಿ, ಇಂಡೀಸ್ ಇತ್ಯಾದಿ ಪರ್ವತಗಳು ಎಂದರು. ಪವಿತ್ರ ಕುರ್‌ಆನ್ ಇದಕ್ಕೆ ಕಾರಣವನ್ನು ಸಾವಿರದ ಐನೂರು ವರ್ಷಗಳಿಗೆ ಮೊದಲೇ ತಿಳಿಸಿದೆ.

**"ನಾವು ಭೂಮಿಯಲ್ಲಿ ಪರ್ವತಗಳನ್ನು ನಾಟಿ ಅದು ಇವರೊಂದಿಗೆ ಉರುಳಿ ಬಿಡದಂತೆ ಮಾಡಿದೆವು." (ಪವಿತ್ರ ಕುರ್‌ಆನ್, 21:31)**

ಭೂಮಿಯಲ್ಲಿ ಅಪಕೇಂದ್ರೀಯ ಬಲವಿಲ್ಲವೆಂಬುದನ್ನು ವಿಜ್ಞಾನಿಗಳು ಇತ್ತೀಚೆಗೆ ಸಂಶೋಧನೆಗಳ ಮೂಲಕ ಕಂಡು ಹಿಡಿದಿದ್ದಾರೆ. ಆದರೆ ಪವಿತ್ರ ಕುರ್‌ಆನ್ 1500 ವರ್ಷಗಳಿಗೆ ಹಿಂದೆಯೇ ಇದರ ಬಗ್ಗೆ ಹೇಳಿವೆ. ಏಕೆಂದರೆ ಇದು ದೈವಿಕ ಗ್ರಂಥ. ದೇವನು ಸಕಲ ವಿಷಯಗಳ ಜ್ಞಾನಿಯಾಗಿದ್ದಾನೆ.

## ಸೌರ ಮಂಡಲ

ವಿಜ್ಞಾನವು ಪ್ರಗತಿ ಹೊಂದುವ ಮೊದಲು ಮನುಷ್ಯ ತನ್ನ ಅನುಭವ ಮತ್ತು ಜ್ಞಾನೇಂದ್ರಿಯಗಳಿಗೆ ಅರಿಯಬಲ್ಲ ಜ್ಞಾನವನ್ನೇ ಸತ್ಯವೆಂದು ಕೊಂಡಿದ್ದ. ಸೂರ್ಯನು ಬೆಳಿಗ್ಗೆ ಪೂರ್ವದಿಂದ ಉದಯಿಸುತ್ತಾನೆ ಮತ್ತು ರಾತ್ರಿ ಪಶ್ಚಿಮದಲ್ಲಿ ಅಸ್ತಮಿಸುತ್ತಾನೆ. ಇದನ್ನು ಕಣ್ಣಾರೆ ಕಂಡ ಮನುಷ್ಯ ಸೂರ್ಯನು ಭೂಮಿಗೆ ಸುತ್ತು ಬರುತ್ತಿದ್ದಾನೆ

ಎಂದುಕೊಂಡ. ಇದು ಪ್ರಚಲಿತ ಮಾತಾಯಿತು. ಕ್ರೈಸ್ತ ಧರ್ಮೀಯರು ಸೂರ್ಯನು ಭೂಮಿಗೆ ಸುತ್ತು ಬರುತ್ತಿದ್ದಾನೆ ಎಂಬ ವಿಷಯವನ್ನು ತಮ್ಮ ಧರ್ಮಗ್ರಂಥದಲ್ಲಿ ಸೇರಿಸಿ ಕೊಂಡರು. ಸೂರ್ಯ ಭೂಮಿಯನ್ನು ಸುತ್ತುತ್ತಿರುವುದಲ್ಲ. ಭೂಮಿಯು ಸೂರ್ಯನ ಸುತ್ತ ತಿರುಗುತ್ತಿದೆ ಎಂಬುದನ್ನು ಮೊತ್ತ ಮೊದಲಾಗಿ ಗೆಲಿಲಿಯೋ ಎಂಬ ವಿಜ್ಞಾನಿ ಕಂಡು ಹಿಡಿದು ಜಗತ್ತಿಗೆ ತಿಳಿಸಿದ. ಕ್ರೈಸ್ತ ಸಮುದಾಯವು ಇದರಿಂದ ಅತೃಪ್ತಿಗೆ ಒಳಗಾಗಿ ಗೆಲಿಲಿಯೋಗೆ ಮರಣದಂಡನೆ ವಿಧಿಸಿತು. ಗೆಲಿಲಿಯೋ ಗಲ್ಲಿಗೇರಿಸಲ್ಪಟ್ಟನು. ಸುಶಿಕ್ಷಿತ ಸಮೂಹವು ಸೂರ್ಯ ಸ್ಥಿರವಾಗಿದ್ದಾನೆ, ಭೂಮಿ ಮತ್ತು ಇತರ ಗ್ರಹಗಳು ಸುತ್ತು ಬರುತ್ತಿದೆ ಎಂಬುದನ್ನು ನಂಬುತ್ತಿದ್ದರು. ಇತ್ತೀಚಿನ ವರೆಗೂ ಇದನ್ನೇ ಸರಿ ಎನ್ನಲಾಗುತ್ತಿತ್ತು. ಆದರೆ ಇಂದು ಸೂರ್ಯನೂ ದೇವನು ನಿಶ್ಚಯಿಸಿದ ತನ್ನ ಅಕ್ಷದಲ್ಲಿ ಗಂಟೆಗೆ 20 ಕಿ.ಮೀ ವೇಗದಲ್ಲಿ ಸುತ್ತುತ್ತಿದ್ದಾನೆ ಎಂಬುದು ಸಾಬೀತಾಗಿದೆ.

ಕುರ್‌ಆನ್ ಸಾವಿರದ ಐನೂರು ವರ್ಷಗಳಿಗೆ ಮೊದಲೇ ಈ ವಿಷಯವನ್ನು ಹೇಳಿದೆ.

**"ಸೂರ್ಯನು ತನ್ನ ಸ್ಥಾನದ ಕಡೆಗೆ ಚಲಿಸುತ್ತಿದ್ದಾನೆ. ಪ್ರಬಲನೂ ಸರ್ವಜ್ಞನೂ ಆದವನ ನಿರ್ಣಯವಿದು." (ಪವಿತ್ರ ಕುರ್‌ಆನ್, 36:38)**

ಗೆಲಿಲಿಯೋನ ಸಂಶೋಧನೆಗಿಂತ ಮೊದಲು ಇಡೀ ಜಗತ್ತು ಭೂಮಿಯು ಸ್ಥಿರವಾಗಿದೆ ಮತ್ತು ಸೂರ್ಯನು ಅದಕ್ಕೆ ಸುತ್ತುಬರುತ್ತಿದ್ದಾನೆಂದು ತಿಳಿದಿತ್ತು. ಬಹು ಸಂಖ್ಯೆಯ ಅಜ್ಞಾನಿಗಳು ಇಂದಿಗೂ ಇದನ್ನೇ ನಂಬುತ್ತಿದ್ದಾರೆ. ಅಂತಹವರು ಸೂರ್ಯನು ಅಲ್ಲಿಂದ ಹೊರಟ, ಇಲ್ಲಿಗೆ ಬಂದ, ಮುಳುಗಿದ ಎನ್ನುತ್ತಾರೆ. ಅಂದರೆ ಸೂರ್ಯನು ಮಾತ್ರ ಚಲಿಸುತ್ತಿದ್ದಾನೆ. ಆದರೆ ಸುಶಿಕ್ಷಿತ ಸಮೂಹದಲ್ಲಿ ಈ ಭ್ರಮೆ ಇಲ್ಲ. ಅವರ ಪ್ರಕಾರ ಸೂರ್ಯನು ಸ್ಥಿರವಾಗಿದ್ದಾನೆ. ಭೂಮಿ ಮತ್ತು ಇತರ ಗ್ರಹಗಳು ಸೂರ್ಯನನ್ನು ಸುತ್ತುತ್ತಿವೆ. ಆದರೆ ಸೂರ್ಯನೂ ತನ್ನ ನಿರ್ಧರಿತ ಕಕ್ಷೆಯಲ್ಲಿ ಸುತ್ತುತ್ತಿದ್ದಾನೆ ಎಂಬುದು ಅತ್ಯಂತ ಹೊಸ ಶೋಧನೆ. ಸುಶಿಕ್ಷಿತ ಸಮೂಹಕ್ಕೆ ಮಾತ್ರ ಈ ಸತ್ಯ ತಿಳಿದಿದೆ. 1500 ವರ್ಷಗಳಿಗೆ ಮೊದಲು ಬಂದ ಗ್ರಂಥದಲ್ಲಿ ಈ ಬಗ್ಗೆ ಸ್ಪಷ್ಟ ಮಾಹಿತಿ ಇರುವುದು ಆಶ್ಚರ್ಯಜನಕವಾಗಿದೆ. ಇದನ್ನು ಕಂಡೂ ಯಾರಾದರೂ ಕುರ್‌ಆನ್ ದೈವಿಕ ಗ್ರಂಥವಲ್ಲವೆಂದು ಹೇಳಬಲ್ಲರೇ?

## ಹನ್ನೊಂದು ಗ್ರಹಗಳು

ಇಂದು ಮಾನವನು ಉನ್ನತಿಗೇರಿದ್ದಾನೆ. ಸೂರ್ಯನಿಂದ ಗ್ರಹಗಳ ಮೇಲೆ ಉಂಟಾಗುವ ಅಪಕೇಂದ್ರೀಯ ಬಲ(Centrifugal Force) ಮತ್ತು ಅಭಿಕೇಂದ್ರೀಯ ಬಲವನ್ನು (Centripital) ಅಳೆಯಬಲ್ಲ ಸಾಮರ್ಥ್ಯ ಮನುಷ್ಯನಿಗಿದೆ. ಈ ಗ್ರಹಗಳ ಅಭಿಕೇಂದ್ರೀಯ ಮತ್ತು ಅಪಕೇಂದ್ರೀಯ ಬಲದ ಮಧ್ಯೆ ಅಂತರವಿರದೆ ಅವು ಒಂದೇ ಆಗಿರಬೇಕಿತ್ತು. ಇದರಿಂದ ನಮ್ಮ ಅರಿವಿಗೆ ಬಾರದ ಗ್ರಹಗಳು ಇನ್ನೂ ಉಳಿದು ಕೊಂಡಿವೆ ಎಂಬುದು ತಿಳಿಯುತ್ತದೆ. ಈ ಗ್ರಹಗಳ ಬಗ್ಗೆ ತಿಳಿಯಲು ವಿಜ್ಞಾನಿಗಳು ದೊಡ್ಡ ದೊಡ್ಡ ಪರ್ವತ ಶಿಖರಗಳನ್ನೇರಿ ದೂರದರ್ಶಕ ಯಂತ್ರ ಹಿಡಿದು ವೀಕ್ಷಿಸಿದರು. ಬಹಳ ಬೇಗನೆ 9ನೆಯ

ಗ್ರಹವೂ ದೂರದರ್ಶಕಕ್ಕೆ ಸಿಕ್ಕಿತು. ಇದಕ್ಕೆ ಪ್ಲೂಟೋ(Pluto) ಎಂದು ಹೆಸರಿಸಲಾಯಿತು. ಇದರ ಬಳಿಕ ಅಪಕೇಂದ್ರೀಯ ಮತ್ತು ಅಭಿಕೇಂದ್ರೀಯ ಬಲಗಳ ಅಂತರ ಕಡಿಮೆ ಯಾಯಿತು. ಅಂತರ ಕೊನೆಗೊಂಡಿರಲಿಲ್ಲವಾದ್ದರಿಂದ ಇನ್ನೂ ಗ್ರಹಗಳು ಪತ್ತೆಯಾಗದೆ ಉಳಿದುಕೊಂಡಿದ್ದವು. ವಿಜ್ಞಾನಿಗಳು ಶೋಧಕಾರ್ಯ ಮುಂದುವರಿಸಿದರು. ಸೆಪ್ಟೆಂಬರ್ 1987ರಲ್ಲಿ ಜಾರ್ಜ್ ಕುಯೆಲ್ಸ್ ಎಂಬವನು 10ನೆಯ ಗ್ರಹವನ್ನು ಕಂಡು ಹಿಡಿದ ಮತ್ತು ಇದರ ಹೆಸರನ್ನು ವಿಜ್ಞಾನಿಯ ಹೆಸರಿನಂತೆ 'ಜಾರ್ಜ್ ಕುಯೆಲ್ಸ್ ಗ್ರಹ' ಎಂದು ನಾಮಕರಣ ಮಾಡಲಾಯಿತು. ಈ ಹತ್ತನೆಯ ಗ್ರಹ ಕಂಡುಹಿಡಿದ ಬಳಿಕವೂ ಅಪಕೇಂದ್ರೀಯ ಮತ್ತು ಅಭಿಕೇಂದ್ರೀಯ ಬಲಗಳ ಮಧ್ಯೆ ಅಂತರ ಉಳಿದಿತ್ತು. ಆದರೆ ಅಂತರ ಬಹಳ ಕಡಿಮೆ ಇದೆ. ವಿಜ್ಞಾನಿಗಳ ಪ್ರಕಾರ ಒಟ್ಟು 11 ಗ್ರಹಗಳಿವೆ. ಆದರೆ 11ನೆಯ ಗ್ರಹವು ಉಪಕರಣಗಳ ಕಣ್ಣಿಗೆ ಸಿಗದಷ್ಟು ಸಣ್ಣದಾಗಿದೆ. ಆದುದರಿಂದ ನಮ್ಮ ಯಂತ್ರಗಳಿಗೆ ಅವು ಕಾಣಸಿಗು ವುದಿಲ್ಲ. ಗ್ರಹಗಳು ಕೇವಲ 11 ಮಾತ್ರ ಇವೆ ಎಂಬುದು ವಿಜ್ಞಾನಿಗಳ ಕಲ್ಪನೆ. ಇದು ಆಶ್ಚರ್ಯಜನಕ ಸತ್ಯ. ಏಕೆಂದರೆ ಪವಿತ್ರ ಕುರ್‌ಆನ್ 1500 ವರ್ಷಗಳಿಗೆ ಮೊದಲೇ ಗ್ರಹಗಳು ಕೇವಲ 11 ಮಾತ್ರ ಇವೆ ಎಂದು ಹೇಳಿವೆ.

**"ಯೂಸುಫರು ತಮ್ಮ ಪಿತರೊಡನೆ ಹೇಳಿದ ಸಂದರ್ಭವಿದು. ಅಪ್ಪಾ ಹನ್ನೊಂದು ನಕ್ಷತ್ರಗಳೂ ಸೂರ್ಯನೂ ಚಂದ್ರನೂ ಇದ್ದು ಅವೆಲ್ಲಾ ನನಗೆ ಸಾಷ್ಟಾಂಗವೆರಗುತ್ತಿರುವುದನ್ನು ನಾನು ಸ್ವಪ್ನದಲ್ಲಿ ಕಂಡಿರುತ್ತೇನೆ." (ಪವಿತ್ರ ಕುರ್‌ಆನ್, 12:4)**

ನಮ್ಮ ವಿಜ್ಞಾನಿಗಳಿಗೆ ಗ್ರಹಗಳು ಹನ್ನೊಂದು ಮಾತ್ರ ಇದೆ ಎಂಬುದರ ಬಗ್ಗೆ ಪೂರ್ಣ ವಿಶ್ವಾಸವಿದೆ. ಆದರೆ ಅದು ನಮ್ಮ ವೈಜ್ಞಾನಿಕ ಉಪಕರಣಗಳಿಗೆ ಸಿಗುತ್ತಿಲ್ಲ. ಆದರೆ 1500 ವರ್ಷಗಳಿಗೆ ಮೊದಲೇ ಪವಿತ್ರ ಕುರ್‌ಆನ್ 11 ಗ್ರಹಗಳಿವೆ ಎಂದು ಹೇಳಿದೆ. ಆ ಸಮಯದಲ್ಲಿ ಜನರಿಗೆ ಗ್ರಹಗಳು ಎಂದರೇನೆಂದೇ ತಿಳಿದಿರಲಿಲ್ಲ. ಇದು ಪವಿತ್ರ ಕುರ್‌ಆನ್ ದೈವಿಕಗ್ರಂಥ ಎಂಬುದಕ್ಕಿರುವ ಪುರಾವೆಯಾಗಿದೆ.

## ಆದ್ ಜನಾಂಗ

ನೂಹರ(ಅ) ಕಾಲದಲ್ಲಿ ಬಿರುಗಾಳಿಯಿಂದ ಜಗತ್ತು ಮುಳುಗಿದಾಗ ಉಳಿದ ಜನರ ಪೈಕಿ ಆದ್ ಜನಾಂಗವು ಬಹಳ ಉನ್ನತಿಯನ್ನು ಪಡೆಯಿತು. ಪವಿತ್ರ ಕುರ್‌ಆನ್ ಹೇಳುತ್ತದೆ;

**"ನಿಮ್ಮ ಪ್ರಭು ನೂಹರ ಜನಾಂಗದ ತರುವಾಯ ನಿಮ್ಮನ್ನು ಅದರ ಉತ್ತರಾಧಿಕಾರಿಯನ್ನಾಗಿಯೂ ದೃಢಕಾಯರನ್ನಾಗಿಯೂ ಮಾಡಿದನೆಂಬುದನ್ನು ಮರೆಯದಿರಿ. ಆದ್ದರಿಂದ ಅಲ್ಲಾಹನ ಮಹಿಮೆಯನ್ನು ನೆನೆಯಿರಿ. ನೀವು ಯಶಸ್ವಿಗಳಾಗಬಹುದು."**

**(ಪವಿತ್ರ ಕುರ್‌ಆನ್, 7:69)**

ಅವರು ಕಟ್ಟಡಗಳ ನಿರ್ಮಾಣದಲ್ಲಿ ನಿಪುಣರಾಗಿದ್ದರು. ಸ್ತಂಭಗಳ ಮೇಲೆ ಭವನಗಳನ್ನು ನಿರ್ಮಿಸುವುದನ್ನು ಮೊತ್ತ ಮೊದಲು ಈ ಸಮುದಾಯವೇ ತಿಳಿದಿತ್ತು. ಬಳಿಕ ಅವರ ಮಧ್ಯೆ ಜಗಳ ಉಂಟಾಯಿತು ಮತ್ತು ಅವರ ಮಧ್ಯೆ ಬಹುದೇವ ವಿಶ್ವಾಸ ಉಂಟಾಯಿತು.

ಹೂದ್‌ರನ್ನು(ಅ) ದೇವನು ಅವರನ್ನು ಸುಧಾರಿಸಲು ಸಂದೇಶವಾಹಕರಾಗಿ ಕಳುಹಿಸಿದನು. ಅವರು ಆ ಜನಾಂಗದ ಸುಧಾರಣೆಗೆ ಪ್ರಯತ್ನಿಸಿದರು. ಬಹಳ ಪ್ರಯಾಸ ಪಟ್ಟರು. ಆದರೆ ಎಲ್ಲವೂ ನಿಷ್ಪ್ರಯೋಜಕವಾಯಿತು. ಕುರ್‌ಆನ್ ಹೇಳುತ್ತದೆ,

"ಇದೇನು ನೀವು ಪ್ರತಿಯೊಂದು ಉನ್ನತ ಸ್ಥಳದಲ್ಲಿ ವೃಥಾ ಒಂದು ಸ್ಮಾರಕ ಕಟ್ಟಡವನ್ನು ಕಟ್ಟುತ್ತೀರಿ." (ಪವಿತ್ರ ಕುರ್‌ಆನ್, 26:128)

ಅವರು ಹೂದರ ಮಾತನ್ನು ಆಲಿಸಲಿಲ್ಲ. ಈ ಕಾರಣದಿಂದಾಗಿ ದೇವನು ಅವರ ಮೇಲೆ ವಿಪತ್ತನ್ನೆರಗಿಸಿದನು:

"ನಿಮ್ಮ ಪ್ರಭು ಉನ್ನತ ಸ್ತಂಭಗಳ ಆದ್‌ಇರಮ್‌ನವರೊಂದಿಗೆ ಹೇಗೆ ವರ್ತಿಸಿದ ನೆಂಬುದನ್ನು ನೀವು ನೋಡಲಿಲ್ಲವೇ? ಅವರಂತಹ ಯಾವ ಜನಾಂಗವೂ ಜಗತ್ತಿನ ನಾಡು ಗಳಲ್ಲಿ ಸೃಷ್ಟಿಸಲ್ಪಟ್ಟಿರಲಿಲ್ಲ." (ಪವಿತ್ರ ಕುರ್‌ಆನ್, 89:6-8)

ಇನ್ನೊಂದೆಡೆ ಕುರ್‌ಆನ್ ಹೇಳುತ್ತದೆ;

"ಆದ್ ಜನಾಂಗದವರು ಧಿಕ್ಕರಿಸಿದರು. ನೋಡಿರಿ, ಆಗ ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದುವು ನನ್ನ ಎಚ್ಚರಿಕೆಗಳು? ನಾವು ಒಂದು ನಿರಂತರ ಅಶುಭದ ದಿನ ಅವರ ಮೇಲೆ ತೀವ್ರವಾದ ಬಿರುಗಾಳಿಯನ್ನು ಕಳುಹಿಸಿದೆವು. ಬೇರು ಸಹಿತ ಕಿತ್ತು ಬೀಳುವ ಖರ್ಜೂರದ ಕಾಂಡಗಳಂತೆ ಅದು ಜನರನ್ನು ಎತ್ತಿ ಎತ್ತಿ ಎಸೆಯುತ್ತಿತ್ತು. ಆದುದರಿಂದ ನೋಡಿರಿ, ಹೇಗಿತ್ತು ನನ್ನ ಶಿಕ್ಷೆ ಮತ್ತು ಹೇಗಿದ್ದವು ನನ್ನ ಎಚ್ಚರಿಕೆಗಳು.

(ಪವಿತ್ರ ಕುರ್‌ಆನ್, 54:18-21)

ಆದ್ ಸಮೂಹವು ಪ್ರವಾದಿ ಹೂದ್‌ರ(ಅ) ಮಾತನ್ನು ಆಲಿಸಲಿಲ್ಲ. ಆದುದರಿಂದ ದೇವನು ಅವರ ಮೇಲೆ ವಿಪತ್ತನ್ನು ಎರಗಿಸಿದನು. ಕುರ್‌ಆನಿನಲ್ಲಿ ಹೀಗಿದೆ;

"ಸಮೂದ್ ಮತ್ತು ಆದ್(ಜನಾಂಗದವರು) ಹಠಾತ್ತನೆ ಬಂದೆರಗುವ ಆ ವಿಪತ್ತನ್ನು ನಿರಾಕರಿಸಿಬಿಟ್ಟರು. ಸಮೂದರಂತು ಒಂದು ಭೀಕರ ಅಪಘಾತದ ಮೂಲಕ ನಾಶಗೊಳಿಸಲ್ಪಟ್ಟರು ಮತ್ತು ಆದ್ ಒಂದು ತೀವ್ರ ಚಂಡಮಾರುತದಿಂದ ನಾಶಗೊಳಿಸಲ್ಪಟ್ಟರು. ಅಲ್ಲಾಹನು ಅದನ್ನು ನಿರಂತರ ಏಳು ರಾತ್ರಿ ಮತ್ತು ಎಂಟು ಹಗಲುಗಳ ಕಾಲ ಅವರ ಮೇಲೆ ಹೇರಿಬಿಟ್ಟನು. (ನೀವು ಅಲ್ಲಿರುತ್ತಿದ್ದರೆ) ಅವರು ಅಲ್ಲಿ ಖರ್ಜೂರದ ಟೊಳ್ಳಾದ ಕಾಂಡಗಳಂತೆ ಬಿದ್ದಿರುವುದನ್ನು ಕಾಣುತ್ತಿದ್ದಿರಿ. ಈಗ ಅವರ ಪೈಕಿ ಯಾರಾದರೂ ಉಳಿದಿರುವುದು ನಿಮಗೆ ಕಾಣಸುತ್ತಿದೆಯೇ?"

(ಪವಿತ್ರ ಕುರ್‌ಆನ್, 69:4-8)

ಈ ರೀತಿ ಪವಿತ್ರ ಕುರ್‌ಆನ್ 25 ಸ್ಥಳಗಳಲ್ಲಿ ಆದ್ ಜನಾಂಗದ ವರ್ಣನೆಯನ್ನು ಮಾಡಿದೆ. ಆದರೆ ಆದ್ ಜನಾಂಗದ ಪಳೆಯುಳಿಕೆಗಳು ಭೂಮಿಯಲ್ಲಿ ಕಾಣಲು ಸಿಗುವುದಿಲ್ಲ ಎಂಬ ಕಾರಣದಿಂದಾಗಿ ಕೆಲವರು ಕುರ್‌ಆನನ್ನು ದೈವಿಕ ಗ್ರಂಥವೆಂದು ಒಪ್ಪಲು ಹಿಂದೇಟು ಹಾಕುತ್ತಿದ್ದರು.

1992ನೆಯ ಇಸವಿಯಲ್ಲಿ ತೈಲ ಹುಡುಕುವ ಕೆಲವು ಕಂಪೆನಿಗಳು 'ಅಹ್‌ಕಾಫ್' ಎಂಬ ಸ್ಥಳದಲ್ಲಿ ಪೆಟ್ರೋಲಿಗಾಗಿ ಹುಡುಕಾಟ ಆರಂಭಿಸಿದ್ದುವು. ಆ ಸಂದರ್ಭದಲ್ಲಿ ಭೂಮಿಯ ಆಳದಲ್ಲಿ ಬಹಳ ದೊಡ್ಡ ಕಟ್ಟಡವೊಂದು ಕಾಣಿಸಿತು. ಅವರು ಅಗೆದು ನೋಡಿದಾಗ ಅದು ಬಹಳ ಕಲಾತ್ಮಕವಾದ ಕಟ್ಟಡವಾಗಿತ್ತು. ಅದರಲ್ಲಿ ಎಂಟು ಸ್ತಂಭಗಳಿದ್ದವು. ಪ್ರತಿಯೊಂದು ಸ್ತಂಭವೂ 10 ಅಡಿ ಅಗಲವಿತ್ತು ಮತ್ತು ಅದರ ಮೇಲೆ ಕಟ್ಟಡ ನಿರ್ಮಿಸಲಾಗಿತ್ತು. ಅದರೊಳಗೆ ಸಿಕ್ಕಿದ ಎಲ್ಲಾ ಸಾಮಾನುಗಳು ಕಲಾತ್ಮಕವಾಗಿದ್ದುವು.

ಈ ರೀತಿ ಕುರ್‌ಆನ್ ದೈವಿಕ ಗ್ರಂಥವೆಂಬುದಕ್ಕೆ ಸಾಕಷ್ಟು ಪುರಾವೆಗಳು ಅದರಲ್ಲಿ ನಮಗೆ ನೋಡಲು ಸಿಗುತ್ತವೆ. ಇಂದಿಗೂ ಕುರ್‌ಆನನ್ನು ದೈವಿಕ ಗ್ರಂಥವೆಂದು ಒಪ್ಪಿಕೊಳ್ಳಲು ಯಾರಾದರೂ ಹಿಂದೇಟು ಹಾಕಿದರೆ ಅವರನ್ನು ಹಠಮಾರಿಗಳು ಮತ್ತು ಪೂರ್ವಗ್ರಹ ಪೀಡಿತರು ಎನ್ನದೆ ನಿರ್ವಾಹವಿಲ್ಲ.

# ಮನುಷ್ಯ ಜ್ಞಾನ ಮತ್ತು ದೈವಿಕ ಜ್ಞಾನ

ಮಾನವನ ಇಂದ್ರಿಯ ಜ್ಞಾನವು ಸೀಮಿತವಾಗಿದೆ. ಈ ಸೀಮಿತ ಪರಿಧಿಯನ್ನು ಉಲ್ಲಂಘಿಸಿ ಹೋಗಲು ಅವನಿಗೆ ಸಾಧ್ಯವಿಲ್ಲ. ಎಷ್ಟೇ ದೊಡ್ಡ ಜ್ಞಾನಿಯಾಗಿದ್ದರೂ ಅವನ ಮಾತು ಅಂತಿಮ ಎನ್ನಲು ಸಾಧ್ಯವಿಲ್ಲ. ಏಕೆಂದರೆ ಅದು ಬದಲಾಗುತ್ತದೆ. ಅವನ ಸಮಾಜದ ಜನರು ಅವನ ಮಾತನ್ನೇ ಅಂತಿಮವೆಂದೂ ಇದು ಪರಿವರ್ತನೆಯಾಗಲು ಸಾಧ್ಯವಿಲ್ಲ ವೆಂದೂ ನಂಬುತ್ತಾರೆ. ಆದರೆ ಬೇರೊಬ್ಬ ಜ್ಞಾನಿಯು ಈ ಸಂಶೋಧನೆಯನ್ನು ಅರ್ಥಹೀನ ವೆಂದು ಸಾರಿ ಆ ಸ್ಥಳದಲ್ಲಿ ಬೇರೆ ಯಾವುದಾದರೂ ವಿಷಯವನ್ನು ಪ್ರಸ್ತುತಪಡಿಸುತ್ತಾನೆ. ಅಂದಿನ ಸಮಾಜ ಅದನ್ನೇ ಸತ್ಯವೆಂದು ತಿಳಿದು ನಂಬುತ್ತದೆ. ಸಮಯ ಕಳೆದಂತೆ ಈ ಜ್ಞಾನವೂ ಹೊಸ ಸಂಶೋಧನೆಗಳ ಮುಂದೆ ಅರ್ಥಹೀನವೆನಿಸಿಕೊಳ್ಳುತ್ತದೆ. ಈ ರೀತಿ ಪರಿವರ್ತನೆಗಳು ನಡೆಯುತ್ತಲೇ ಇರುತ್ತದೆ. ಆದರೆ ದೇವನಿಗೆ ಜಗತ್ತಿನ ಸಕಲ ವಸ್ತುಗಳ ಜ್ಞಾನವಿದೆ. ಆದುದರಿಂದ ದೇವನಿಂದ ಬಂದಂತಹ ಜ್ಞಾನವು ಎಂದೂ ಅರ್ಥಹೀನಗೊಳ್ಳಲು ಸಾಧ್ಯವಿಲ್ಲ. ಆದುದರಿಂದಲೇ ದೈವಿಕ ಜ್ಞಾನವು ಯಾವಾಗಲೂ ಸ್ಥಿರವಾಗಿರುತ್ತದೆ.

ಒಂದು ಕಾಲದಲ್ಲಿ ವಿಜ್ಞಾನಿಗಳು ಈ ಪ್ರಪಂಚವು ನಾಲ್ಕು ಮೂಲ ವಸ್ತುವಿನಿಂದ ಉಂಟಾಗಿದೆ ಎನ್ನುತ್ತಿದ್ದರು.

1) ನೀರು. 2) ಬೆಂಕಿ. 3) ಮಣ್ಣು. 4) ಗಾಳಿ.

ಅವರ ಅಭಿಪ್ರಾಯದಂತೆ ಅದು ಬದಲಾಗದ ಸತ್ಯವಾಗಿತ್ತು. ಆದರೆ ನಂತರ ಬಂದ ವಿಜ್ಞಾನಿಗಳು ಈ ಸ್ಥಿರ ಸತ್ಯವೆಂದು ನಂಬಿದ್ದ ವಿಷಯವನ್ನು ಅಸತ್ಯವೆಂದು ಸಾರಿದರು. ನೀರು ಒಂದು ಮೂಲ ವಸ್ತುವಲ್ಲವೆಂದೂ ಅದು ಆಮ್ಲಜನಕ ಮತ್ತು ಜಲಜನಕದ ಸಂಯೋಗ ವಸ್ತು ಎಂಬುದು ತಿಳಿದು ಬಂತು. ಬೆಂಕಿಯು ಒಂದು ಧಾತುವೇ ಅಲ್ಲ. ಮಣ್ಣು ಬಹಳ ವಸ್ತುಗಳ ಒಟ್ಟು ಸೇರುವಿಕೆಯಿಂದ ಉಂಟಾಗಿದೆ. ಗಾಳಿ ಕೂಡಾ ಬಹಳಷ್ಟು ಅನಿಲಗಳ ಮಿಶ್ರಣವಾಗಿದೆ. ಈ ರೀತಿ ಹಿಂದಿನ ವಿಜ್ಞಾನಿಗಳ ಸಂಶೋಧನೆಯು ಅರ್ಥಹೀನವಾಯಿತು.

ಪವಿತ್ರ ಕುರ್‌ಆನ್ ಅವತೀರ್ಣವಾಗಿ 1500 ವರ್ಷಗಳು ಸಂದವು. ಆದರೆ ಅದರಲ್ಲಿ ಬಂದ ಆದೇಶವನ್ನು ಯಾರಿಗೂ ಅರ್ಥಹೀನವೆನ್ನಲು ಸಾಧ್ಯವಾಗಿಲ್ಲ. ಇದು ಪವಿತ್ರ ಕುರ್‌ಆನ್ ದೈವಿಕ ಗ್ರಂಥವೆಂಬುದಕ್ಕಿರುವ ದೊಡ್ಡ ನಿದರ್ಶನವಾಗಿದೆ.

# ಅಂತಿಮ ದೈವಿಕ ಗ್ರಂಥವು ಜಗತ್ತಿಗೆ ಏನನ್ನು ನೀಡಿದೆ?

**ಮಾ**ನವ ಸಂಘ ಜೀವಿ. ಸಮಾಜವು ಮನುಷ್ಯನ ಅವಶ್ಯಕತೆಯಾಗಿದೆ. ಸಮಾಜವು ಸಂಘಟಿತವಾಗಿರದೇ ಇರುತ್ತಿದ್ದರೆ ಮನುಷ್ಯ ಕಾಡು ಪ್ರಾಣಿಯಂತೆ ಇರುತ್ತಿದ್ದನು. ಮಾನವ ಸಮಾಜವನ್ನು ಸಂಘಟಿತವಾಗಿಡಲು ದೇವನು ತನ್ನ ಸಂದೇಶವಾಹಕರ ಮೂಲಕ ದೈವಿಕ ಗ್ರಂಥಗಳನ್ನು ಕಳುಹಿಸಿದ್ದಾನೆ. ಈ ಗ್ರಂಥಗಳೇ ಮಾನವ ಸಮಾಜದ ವ್ಯವಸ್ಥೆಯಾಗಿದ್ದವು. ಆದರೆ ಮನುಷ್ಯ ತನ್ನ ದುಷ್ಟತನದಿಂದ ಈ ಗ್ರಂಥಗಳಲ್ಲಿ ಸೇರ್ಪಡೆಯನ್ನು ಮಾಡಿ ಕೆಡಿಸಿಬಿಟ್ಟನು. ಈ ರೀತಿ ಮನುಷ್ಯನ ಆಚಾರ ಮತ್ತು ದೈವಿಕ ವ್ಯವಸ್ಥೆಗಳ ಮಧ್ಯೆ ಆಗಾಗ ಸಂಘರ್ಷಗಳಾಗುತ್ತಿದ್ದುವು. ದೇವನು ತನ್ನ ಅಂತಿಮ ಗ್ರಂಥ ಪವಿತ್ರ ಕುರ್‌ಆನನ್ನು ಪ್ರವಾದಿ ಮುಹಮ್ಮದ್‌ರ(ಸ) ಜೊತೆ ಕಳುಹಿಸಿದನು. ಅದರ ಸುರಕ್ಷಿತತೆಯ ಸಂಪೂರ್ಣ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿರುವನು. ಈ ಅಂತಿಮ ದೈವಿಕ ಗ್ರಂಥವು ಮಾನವ ಸಮಾಜದ ಅತ್ಯುತ್ತಮ ವ್ಯವಸ್ಥೆಯಾಗಿದೆ.

ಮನುಷ್ಯ ಸಮಾಜವು ದೈವಿಕ ವ್ಯವಸ್ಥೆಯನ್ನು ಅತ್ಯುತ್ತಮವೆಂದು ತಿಳಿಯುತ್ತದೆ. ಅದೇ ವೇಳೆ ಪ್ರಪಂಚದ ಜನರು ಈ ಆದೇಶದಂತೆ ಜೀವಿಸುವ ಮನಸ್ಸು ಮಾಡದೇ ಇದ್ದರೆ ಅದು ಎಷ್ಟೇ ಒಳ್ಳೆಯ ವ್ಯವಸ್ಥೆಯಾಗಿದ್ದರೂ ಸರಿ, ನಿಷ್ಪ್ರಯೋಜಕವೆನಿಸಿ ಬಿಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಇಂದು ಜಗತ್ತು ಪವಿತ್ರ ಕುರ್‌ಆನ್ ದೈವಿಕ ಗ್ರಂಥವಾಗಿದೆ ಮತ್ತು ಸಂಪೂರ್ಣವಾಗಿ ಸುರಕ್ಷಿತವಿದೆ ಎಂದು ನಂಬಲು ನಿರ್ಬಂಧಿತವಾಗಿದೆ.

ಒಂದು ವ್ಯವಸ್ಥೆಯು ಸಫಲವಾಗಬೇಕಿದ್ದರೆ ಆ ವ್ಯವಸ್ಥೆಯು ಚೆನ್ನಾಗಿರಬೇಕು. ಅದೇ ವೇಳೆ ದೇಶವಾಸಿಗಳಲ್ಲಿ ಕಾನೂನು ಮತ್ತು ಕಾಯಿದೆಗಳ ಪ್ರಕಾರ ನಡೆಯುವ ಅಭಿರುಚಿ ಇರಬೇಕು. ಈ ಉದ್ದೇಶಕ್ಕಾಗಿ ಅವನು ದೇಶ ಮತ್ತು ಮಾತೃಭೂಮಿಯ ಪ್ರೇಮವನ್ನು ಒಂದು ಕಾರಣವನ್ನಾಗಿಸಿರುವನು. ಉದಾಹರಣೆಗೆ;

1) ದ್ವಿತೀಯ ವಿಶ್ವ ಮಹಾ ಯುದ್ಧದ ವೇಳೆ ಜಪಾನ್ ಚೀನಾವನ್ನು ಸೋಲಿಸಿ ಭಾರತದ ಪೂರ್ವಗಡಿಗೆ ತಲಪುತ್ತದೆ. ಆದರೆ ಅದಕ್ಕೆ ಹಿಂದೂ ಮಹಾಸಾಗರವನ್ನು ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಇಂಗ್ಲೀಷರು ತಮ್ಮ ಎರಡು ದೊಡ್ಡ

ಹಡಗುಗ್ಗಳನ್ನು ಸಿಂಗಾಪುರದ ಪೂರ್ವ ಸಮುದ್ರದಲ್ಲಿ ನಿಲ್ಲಿಸಿದ್ದರು. ಅದನ್ನು ಯಾವುದೇ ದೊಡ್ಡ ಡೈನಮೈಟ್‌ನಿಂದಲೂ ಸ್ಫೋಟಿಸಲು ಸಾಧ್ಯವಿಲ್ಲ ಎಂಬುದು ಜಗತ್ತಿಗೇ ತಿಳಿದ ವಿಚಾರವಾಗಿತ್ತು. ಏಕೆಂದರೆ ಆ ಹಡಗಿಗೆ ಒಂದು ಅಡಿ ದಪ್ಪದ ಲೋಹದ ಕವಚದ ರಕ್ಷಣೆಯಿತ್ತು. ಈ ಹಡಗನ್ನು ಮುಳುಗಿಸಬೇಕಿದ್ದರೆ ಶಕ್ತಿಶಾಲಿ ಬಾಂಬನ್ನು ಕಟ್ಟಿಕೊಂಡು ಒಬ್ಬ ಮನುಷ್ಯ ಹಡಗಿನ ಚಿಮಿಣಿಯ ಮೂಲಕ ಒಳಹೊಕ್ಕು ಬಾಂಬನ್ನು ಸ್ಫೋಟಿಸಿ ಆ ಮೂಲಕ ಹಡಗನ್ನು ಸ್ಫೋಟಿಸುವುದು ಏಕೈಕ ಮಾರ್ಗವಾಗಿತ್ತು. ಜಪಾನ್ ದೇಶದ ಇಬ್ಬರು ಯುವಕರು ಈ ಕೆಲಸವನ್ನು ಮಾಡಲು ಸಿದ್ಧರಾದರು. ಶರೀರದ ಮೇಲೆ ಶಕ್ತಿಶಾಲಿ ಬಾಂಬ್‌ಗಳನ್ನು ಕಟ್ಟಿ ಕೊಂಡು ಒಂದೊಂದು ಟ್ರೇಲರ್‌ನಲ್ಲಿ ಕುಳಿತರು. ಈ ಟ್ರೇಲರ್‌ಗಳನ್ನು ಒಂದು ವಿಮಾನಕ್ಕೆ ಕಟ್ಟಲಾಗಿತ್ತು. ಈ ವಿಮಾನವು ಸಿಂಗಾಪುರದ ಕಡೆಗೆ ಕಳುಹಿಸಲ್ಪಟ್ಟಿತು ಮತ್ತು ಬ್ರಿಟಿಷ್ ಯುದ್ಧ ನೌಕೆಯ ಬಳಿ ತಲಪಿದಾಗ ಎರಡೂ ಟ್ರೇಲರ್‌ಗಳನ್ನು ವಿಮಾನದಿಂದ ಇಳಿಸಲಾಯಿತು. ಆ ಯುವಕರು ಈ ಟ್ರೇಲರ್‌ನಿಂದ ಹಡಗಿನ ಚಿಮಿನಿಯೊಳಗೆ ಹೊಕ್ಕರು ಮತ್ತು ನೌಕೆಯನ್ನು ಬಾಂಬಿನ ಮೂಲಕ ಸ್ಫೋಟಿಸಿದರು. ಇಬ್ಬರು ಯುವಕರ ದೇಹವು ಛಿದ್ರವಿಚ್ಛಿದ್ರವಾಯಿತು. ಬ್ರಿಟಿಷ್ ಯುದ್ಧ ನೌಕೆ ಕ್ಷಣಾರ್ಧದಲ್ಲಿ ನೀರಿನಲ್ಲಿ ಮುಳುಗಿತು. ಇದು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡುವುದರ ಅತ್ಯುತ್ತಮ ಉದಾಹರಣೆಯಾಗಿದೆ.

2) ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಯುದ್ಧ ನಡೆಯುತ್ತಿತ್ತು. ಪಾಕಿಸ್ತಾನಿ ಸೈನಿಕರು ಒಂದು ರೀತಿಯ ಟ್ಯಾಂಕನ್ನು ಮೈದಾನಕ್ಕೆ ತಂದು ಭಾರತೀಯ ಸೈನಿಕರ ಮೇಲೆ ಗುಂಡು ಹಾರಿಸಲು ಆರಂಭಿಸಿದರು. ಒಬ್ಬ ಭಾರತೀಯ ಸೈನಿಕ ಅಬ್ದುಲ್ ಹಮೀದ್ ಖಾನ್ ತನ್ನ ಶರೀರಕ್ಕೆ ಬಾಂಬುಗಳನ್ನು ಕಟ್ಟಿಕೊಂಡು ಟ್ಯಾಂಕ್‌ಗಳನ್ನು ನಿಲ್ಲಿಸಿದ ಸಾಲಿನೆಡೆಗೆ ತೆವಳಿಕೊಂಡು ಹೋದ. ಟ್ಯಾಂಕಿನ ಮೇಲ್ಭಾಗಕ್ಕೆ ಹತ್ತಿ, ಅದರ ಮೇಲ್ಭಾಗದ ಬಾಗಿಲನ್ನು ತೆರೆದು ಒಳಗೆ ಒಂದು ಬಾಂಬನ್ನು ಸ್ಫೋಟಿಸಿದ. ಇದರಿಂದ ಅದರೊಳಗಿನ ಯಂತ್ರಗಳು ತುಂಡು ತುಂಡಾಗಿ ಬಿದ್ದವು. ಚಾಲಕನೂ ಸತ್ತುಹೋಗಿ ಟ್ಯಾಂಕ್ ಸುಮ್ಮನಾಯಿತು. ಇದೇ ರೀತಿ ಎರಡನೆಯ ಮೂರನೆಯ ಟ್ಯಾಂಕ್‌ಗಳನ್ನೂ ನಿಷ್ಕ್ರಿಯಗೊಳಿಸಿದ. ಪಾಕಿಸ್ತಾನಿ ಸೈನಿಕರಿಗೆ ತಮ್ಮ ಟ್ಯಾಂಕ್‌ಗಳು ಕೆಲಸ ಮಾಡದೆ ಸ್ತಬ್ಧವಾದುದನ್ನು ಕಂಡು ಆಶ್ಚರ್ಯವಾಯಿತು. ಅವರು ನೋಡುತ್ತಿದ್ದಂತೆ ನಾಲ್ಕನೆಯ ಟ್ಯಾಂಕರ್‌ನ ಮೇಲಕ್ಕೆ ಓರ್ವ ಮನುಷ್ಯ ಹತ್ತುತ್ತಿರುವುದನ್ನು ಕಂಡರು. ಅವನ ಮೇಲೆ ಗುಂಡು ಹಾರಿಸಿ ಕೊಂದು ಬಿಟ್ಟರು. ಇದು ದೇಶ ಪ್ರೇಮದಿಂದ ಪ್ರಾಣ ತ್ಯಾಗ ಮಾಡುವುದರ ಉತ್ತಮ ಉದಾಹರಣೆಯಾಗಿದೆ.

3) ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ಸಮಯ. ಅನೇಕ ಮಂದಿ ಚಾಟಿ ಏಟು ತಿಂದರು. ಜೈಲಿಗೆ ಹೋದರು ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ನೇಣುಗಂಬಕ್ಕೇರಿದರು. ಇದು ಕೂಡಾ ದೇಶಪ್ರೇಮದ ಉತ್ತಮ ಉದಾಹರಣೆಗಳಾಗಿವೆ. ದೇಶಭಕ್ತರು ವಿವಿಧ ರೀತಿಯ ಕಷ್ಟಗಳನ್ನು ಅನುಭವಿಸಿದರು. ಆದರೆ ದೇಶವು ಸ್ವತಂತ್ರಗೊಂಡಾಗ ದೇಶಭಕ್ತರೆನಿಸಿಕೊಂಡವರಲ್ಲಿ ಅನೇಕರು ದೇಶವನ್ನು ಲೂಟಿ ಮಾಡುವ ಕಾಯಕದಲ್ಲಿ ಮುಂಚೂಣಿಯಲ್ಲಿದ್ದರು.

ಈ ಉದಾಹರಣೆಗಳಿಂದ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿ ಎಂಬುದು ಬಹಳ ಬಲವುಳ್ಳದ್ದು. ಇದಕ್ಕಾಗಿ ವ್ಯಕ್ತಿಗಳು ಪ್ರಾಣತ್ಯಾಗಕ್ಕೂ ಸಿದ್ಧರಾಗುತ್ತಾರೆ. ಎಂಬುದನ್ನು ತಿಳಿಯಬಹುದು. ಆದರೆ ಇವುಗಳ ಪ್ರಭಾವವು ಹೃದಯದಲ್ಲಿ ಬಹಳ ಹೊತ್ತು ಇರುವುದಿಲ್ಲ. ತನ್ನಿಂತಾನೇ ಮರೆತು ಹೋಗುತ್ತದೆ. ಆದುದರಿಂದಲೇ ಅಂತಿಮ ದೈವಿಕಗ್ರಂಥದ ಕಾನೂನು ಮತ್ತು ಕಾಯಿದೆಗಳ ಪ್ರಕಾರ ಮನುಷ್ಯರು ನಡೆಯುವಂತಾಗಲು ದೇಶಪ್ರೇಮವನ್ನು ಮಾಧ್ಯಮ ವಾಗಿಸಲಿಲ್ಲ. ಬದಲಾಗಿ ದೇವರು, ನರಕ ಮತ್ತು ಸ್ವರ್ಗವನ್ನು ಮಾಧ್ಯಮವಾಗಿಸಿದೆ.

# ದೇವರು

ಇಂದು ಬೆರಳೆಣಿಕೆಯ ಕೆಲವು ನಾಸ್ತಿಕರನ್ನು ಹೊರತು ಪಡಿಸಿ ಇಡೀ ವಿಶ್ವವು ದೇವನನ್ನು ನಂಬುತ್ತದೆ. ಆದರೆ ಯಾರ ವಿಚಾರಧಾರೆಗಳೂ ದೈವಿಕ ಗ್ರಂಥದಂತೆ ಇಲ್ಲ. ಆದುದರಿಂದಲೇ ಇವರ ಪ್ರಕಾರ ದೇವರು,

1) 6 ದಿನಗಳಲ್ಲಿ ಪ್ರಪಂಚವನ್ನು ಸೃಷ್ಟಿಸಿ 7ನೆಯ ದಿನ ವಿಶ್ರಾಂತಿಯನ್ನು ತೆಗೆದು ಕೊಳ್ಳಬೇಕಾದ ಅಗತ್ಯ ಕಂಡುಬಂತು.

2) ಕೆಲವರ ಪ್ರಕಾರ ದೇವರು ರಬ್ಬುಲ್ ಆಲಮೀನ್(ಸರ್ವಲೋಕಗಳ ಪ್ರಭು) ಅಲ್ಲ. ರಬ್ಬುಲ್ ಇಸ್ರಾಈಲ್(ಇಸ್ರಾಈಲರ ಪ್ರಭು) ಆಗಿದ್ದಾನೆ. ಅವನಿಗೆ ಒಂದು ಪ್ರತ್ಯೇಕ ಜನಾಂಗದೊಂದಿಗೆ ಬೇರೆ ಯಾರೊಂದಿಗೂ ಇಲ್ಲದ ವಿಶೇಷ ಸಂಬಂಧವಿದೆ.

3) ಕೆಲವರ ಪ್ರಕಾರ ದೇವರು ಯಅ್‌ಕೂಬರೊಂದಿಗೆ(ಅ) ಮಲ್ಲಯುದ್ಧ ಮಾಡಿ ಸೋಲನುಭವಿಸುತ್ತಾನೆ.

4) ಕೆಲವರ ಪ್ರಕಾರ ದೇವರು ಉಝೈರ್ ಎಂಬ ಮಗನನ್ನು ಹೊಂದಿದ್ದಾನೆ.

5) ಕೆಲವರ ಪ್ರಕಾರ ದೇವರು ಯೇಸು ಮಸೀಹರೆಂಬ ಏಕೈಕ ಪುತ್ರನನ್ನು ಹೊಂದಿದ್ದಾನೆ. ಅವನು ಬೇರೆ ಜನರ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ತನ್ನ ಮಗನನ್ನೇ ಶಿಲುಬೆಗೇರಿಸಿದ.

6) ಕೆಲವರ ಪ್ರಕಾರ ದೇವರಿಗೆ ಮಡದಿ ಮಕ್ಕಳಿರುತ್ತಾರೆ. ಆದರೆ ಅವರಿಗೆ ಹೆಣ್ಣುಮಕ್ಕಳೇ ಹುಟ್ಟುತ್ತಾರೆ.

7) ಕೆಲವರ ಪ್ರಕಾರ ದೇವನು ಮನುಷ್ಯ ರೂಪ ಧರಿಸುತ್ತಾನೆ. ಜನರ ಮಧ್ಯೆ ಮನುಷ್ಯರಂತೆ ಇದ್ದು ಕೆಲಸ ಮಾಡುತ್ತಾನೆ.

8) ಕೆಲವರ ಪ್ರಕಾರ ದೇವರು ಕೇವಲ 'ವಾಜಿಬುಲ್ ವಜೂದ್' ಅಥವಾ 'ಇಲ್ಲತುಲ್ ಇಲಲ್'(First cause) ಆಗಿದ್ದಾನೆ. ಇಡೀ ವಿಶ್ವವನ್ನು ಒಮ್ಮೆ ನಿರ್ಮಿಸಿ ಬಿಟ್ಟು ದೂರ ಹೋಗಿ ಕುಳಿತುಬಿಟ್ಟಿದ್ದಾನೆ. ಇದರ ಬಳಿಕ ಪ್ರಪಂಚವು ಅವನ ಸ್ವಯಂಕೃತ ಕಾನೂನಿನಂತೆ ತನ್ನಿಂತಾನೇ ನಡೆಯುತ್ತದೆ. ಮನುಷ್ಯನಿಗೆ ದೇವನೊಂದಿಗೆ ಮತ್ತು ದೇವನಿಗೆ ಮನುಷ್ಯ ನೊಂದಿಗೆ ಯಾವುದೇ ರೀತಿಯ ಸಂಬಂಧವಿಲ್ಲ.

ಈ ರೀತಿಯಲ್ಲಿ ದೇವನನ್ನು ನಂಬುವವರು ದೇವನು ಸರ್ವಲೋಕಗಳ ಸೃಷ್ಟಿಕರ್ತ ಒಡೆಯ, ಪಾಲಕ, ಸಲಹೆಗಾರ ವ್ಯವಸ್ಥಾಪಕ ಮತ್ತು ಪರಮಾಧಿಕಾರಿ ಎಂಬುದನ್ನು ಒಪ್ಪುವುದಿಲ್ಲ. ದೇವನು ಆ ಸಕಲ ವಿಶ್ವವನ್ನು ಕೇವಲ ಸೃಷ್ಟಿಸಿದ್ದು ಮಾತ್ರವಲ್ಲ, ಪ್ರತಿಕ್ಷಣ ಅದನ್ನು ಪರಿಪಾಲಿಸುತ್ತಲೂ ಇದ್ದಾನೆ. ಅವನ ಅಧಿಕಾರವಿಲ್ಲಿ ನಡೆಯುತ್ತಿದೆ. ಅವನು ಎಲ್ಲ ಕುಂದು ಕೊರತೆ ಮತ್ತು ದೌರ್ಬಲ್ಯಗಳಿಂದ ಮುಕ್ತನು. ಅವನ ಸ್ವಭಾವ ಅಧಿಕಾರ ಮತ್ತು ಆರಾಧ್ಯನಾಗುವ ಹಕ್ಕಿನಲ್ಲಿ ಯಾರೂ ಅವನಿಗೆ ಭಾಗೀದಾರರಿಲ್ಲ. ಅವನಿಗಿಂತ ಮಿಗಿಲು ಯಾರೂ ಇಲ್ಲ. ಅವನಿಗೆ ಮಕ್ಕಳಿಲ್ಲ. ಅವನು ಯಾರನ್ನೂ ಮಗನಾಗಿ ಮಾಡಿಕೊಂಡಿಲ್ಲ. ಅವನು ಯಾರ ತಂದೆಯೂ ಅಲ್ಲ, ಅವನು ಅಮರ. ಅವನಿಗೆ ಯಾವುದೇ ಒಂದು ವರ್ಗ ಅಥವಾ ಜನಾಂಗದೊಂದಿಗೆ ವಿಶೇಷ ಸಂಬಂಧವಿಲ್ಲ.

ಇಂದು ಪವಿತ್ರ ಕುರ್‌ಆನನ್ನು ಹೊರತುಪಡಿಸಿದರೆ ಬೇರಾವ ಗ್ರಂಥವೂ ಪೂರ್ಣ ರೂಪದಲ್ಲಿ ದೈವಿಕವೂ ಸುರಕ್ಷಿತವೂ ಆಗಿ ಉಳಿದಿಲ್ಲ. ಇಂದು ಜಗತ್ತು ತನ್ನದೇ ಕಲ್ಪನೆಯಲ್ಲಿ ದೇವನನ್ನು ಸೃಷ್ಟಿಸಿಕೊಂಡು ಅವನಿಗೆ ಗುಣವಿಶೇಷಗಳನ್ನು ಹೇರುತ್ತಿದೆ. ಪವಿತ್ರ ಕುರ್‌ಆನ್ ದೈವಿಕ ಗ್ರಂಥ ಮತ್ತು ಸಂಪೂರ್ಣ ಸುರಕ್ಷಿತವಿದೆ ಎಂಬುದು ಸಾಬೀತಾಗಿದೆ. ಆದುದರಿಂದಲೇ ದೇವನ ಬಗ್ಗೆ ಈ ಗ್ರಂಥವು ಏನನ್ನುತ್ತದೋ ಅದೆಲ್ಲವೂ ಸರಿಯಾದುದಾಗಿದೆ.

ಪವಿತ್ರ ಕುರ್‌ಆನಿಗಿಂತ ಮೊದಲು ಬೇರೆ ಗ್ರಂಥಗಳು ದೇವನಿಂದ ಅವತೀರ್ಣವಾಗಿದ್ದವು. ಆದರೆ ಅವುಗಳು ಜನರ ಹಸ್ತಕ್ಷೇಪದಿಂದಾಗಿ ಉಪಯೋಗ ಶೂನ್ಯವಾದುವು. ಆದುದರಿಂದ ಯಾರ ಬಳಿಯೂ ದೇವನ ಬಗ್ಗೆ ಸರಿಯಾದ ಮಾಹಿತಿಯೊದಗಿಸಬಲ್ಲ ಸಾಧನಗಳಿರಲಿಲ್ಲ. ಜನರು ತಮ್ಮ ಕಲ್ಪನೆಯ ದೇವರುಗಳನ್ನು ಸೃಷ್ಟಿಸಿಕೊಂಡರು ಮತ್ತು ಅದರ ಬಗ್ಗೆ ಸ್ವಯಂಕೃತ ಮಾಹಿತಿಯನ್ನು ನೀಡಿದರು. ಅದರಿಂದಾಗಿಯೇ ಇವರ ದೇವರ ಬಗೆಗಿನ ಕಲ್ಪನೆಗಳು ಒಂದಕ್ಕೊಂದು ಹೊಂದಿಕೊಳ್ಳುವುದಿಲ್ಲ.

ಅಂತಿಮ ದೈವಿಕ ಗ್ರಂಥದ ಆಧಾರದಲ್ಲಿ ದೇವನ ಬಗ್ಗೆ ಸರಿಯಾದ ಪರಿಚಯವನ್ನು ಮಾಡಿಕೊಟ್ಟರೂ ಜನರು ಇದು ಲೇಖಕರ ಸ್ವಯಂಕೃತ ಮಾತು ಎಂದೇ ತಿಳಿಯಬಹುದು. ಆದುದರಿಂದ ದೇವನ ಬಗ್ಗೆ ನೀಡಿದ ಮಾಹಿತಿಯ ಜೊತೆಗೆ ಅಂತಿಮ ಗ್ರಂಥದಲ್ಲಿ ಅದರ ಉಲ್ಲೇಖವಿರುವ ಸ್ಥಳಗಳ ಬಗ್ಗೆಯೂ ತಿಳಿಸಲಾಗುವುದು. ಏಕೆಂದರೆ ಓದುಗರ ಮನಸ್ಸಿನಲ್ಲಿ ಯಾವುದೇ ತಪ್ಪುಕಲ್ಪನೆಯು ಉಳಿಯಬಾರದು. ಆದರೆ ಈ ಸಣ್ಣ ಪುಸ್ತಕದಲ್ಲಿ ಎಲ್ಲ ಸೂಕ್ತಗಳನ್ನು ಬರೆಯುವುದು ಸಾಧ್ಯವಿಲ್ಲ. ಆದುದರಿಂದ ಕೇವಲ ಸೂಕ್ತಗಳ ಸಂಖ್ಯೆಗಳನ್ನು ಮಾತ್ರ ಬರೆಯಲಾಗುತ್ತಿದೆ. ಓದುಗರು ಇದನ್ನು ಕುರ್‌ಆನಿನೊಂದಿಗೆ ತುಲನೆ ಮಾಡಿ ಕೊಂಡು ನೋಡಬಹುದು.

ಅಂತಿಮ ದೈವಿಕಗ್ರಂಥ ಪವಿತ್ರ ಕುರ್‌ಆನ್ ದೇವನನ್ನು ಯಾವ ರೀತಿ ಪರಿಚಯಿಸುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ ಮತ್ತು ಕುರ್‌ಆನಿನಲ್ಲಿರುವ ಯಾವ ಸೂಕ್ತವು ಇದಕ್ಕೆ ಆಧಾರವಾಗಿದೆ ಎಂಬುದನ್ನು ನೋಡಲು ಸೂಕ್ತ(ಆಯತ್)ಗಳ ಸಂಖ್ಯೆಯನ್ನು ಬರೆಯಲಾಗಿದೆ.

ಇಸ್ಲಾಮಿನ ಮೂಲಭೂತ ನಂಬಿಕೆಗಳ ಪೈಕಿ ಪ್ರಪ್ರಥಮ ಮತ್ತು ಬಹುಮುಖ್ಯ ವಿಷಯ ಒಬ್ಬನೇ ದೇವನ ಮೇಲೆ ವಿಶ್ವಾಸ(ಏಕದೇವವಿಶ್ವಾಸ). ಕೇವಲ ಅವನಿದ್ದಾನೆ ಎಂಬ ನಂಬಿಕೆ ಮತ್ತು ಕೇವಲ ಮಾತಿನ ಮೂಲಕ ಮಾತ್ರ ಹೇಳಿಕೆ ಅಲ್ಲ. ಬದಲಾಗಿ ಅವನೊಬ್ಬನೇ ಈ ಅಖಿಲ ವಿಶ್ವದ ಸೃಷ್ಟಿಕರ್ತ, ಒಡೆಯ, ಸಾಮ್ರಾಟ ಮತ್ತು ಮೇಲ್ವಿಚಾರಕನಾಗಿದ್ದಾನೆ. (2:101, 6:73, 7:54, 13:16, 20:4-8, 25:2, 32:5)

ಅವನು ಸೃಷ್ಟಿಸಿರುವುದರಿಂದ ಈ ಪ್ರಪಂಚ ಉಂಟಾಗಿದೆ. ಅವನು ಇದನ್ನು ಸುಸೂತ್ರವಾಗಿ ನಡೆಸುತ್ತಿರುವುದರಿಂದ ನಡೆಯುತ್ತಿದೆ. ಇಲ್ಲಿಯ ಪ್ರತಿಯೊಂದು ವಸ್ತುವಿನ ಅಸ್ತಿತ್ವ ಮತ್ತು ಉಳಿವಿಗೆ ಯಾವ ಶಕ್ತಿಯ ಅವಶ್ಯಕತೆಯಿದೆಯೋ ಅವನ್ನು ಸಿದ್ಧಪಡಿಸುವವನು ದೇವನಾಗಿದ್ದಾನೆ. (6:164, 35:3,41, 45:58)

ಪರಮಾಧಿಕಾರದ ಎಲ್ಲ ಲಕ್ಷಣಗಳು ಕೇವಲ ಅವನಲ್ಲಿ ಮಾತ್ರ ಇದೆ ಮತ್ತು ಯಾರೂ ಲವಲೇಶವೂ ಅವನಿಗೆ ಭಾಗೀದಾರರಿಲ್ಲ. (3:26, 83, 154, 5:1, 6:18, 57, 7:128, 10:107, 13:41, 18:26-27, 21:23, 23:88, 36:83, 48:11, 57:5, 59:23, 67:1, 72:22, 85:16, 95:8)

ಅಖಿಲ ಪ್ರಪಂಚವನ್ನು ಮತ್ತು ಅದರಲ್ಲಿರುವ ಪ್ರತಿಯೊಂದು ವಸ್ತುವನ್ನು ಅವನು ವೀಕ್ಷಿಸುತ್ತಿದ್ದಾನೆ. ಪ್ರಪಂಚ ಮತ್ತು ಅದರಲ್ಲಿರುವ ಪ್ರತಿಯೊಂದು ವಸ್ತು ಅವನ ಅಧೀನದಲ್ಲಿದೆ. ಕೇವಲ ಅವನು ಮಾತ್ರ ಅವುಗಳ ವರ್ತಮಾನ, ಭೂತ, ಭವಿಷ್ಯಗಳನ್ನು ಅರಿಯುತ್ತಾನೆ. ಯಾವುದೇ ಅಪ್ರತ್ಯಕ್ಷ ಜ್ಞಾನ ಅವನ ಹೊರತು ಯಾರಿಗೂ ಇಲ್ಲ. (6:59, 18:26, 27:65, 34:2-3, 50:16, 57:4, 67:13, 14, 192)

ಅವನು ಚಿರಂತನನು ಮತ್ತು ಅಮರನು. ಅವನ ಹೊರತು ಎಲ್ಲವೂ ನಾಶವಾಗಲಿದೆ ಮತ್ತು ಅವನು ಮಾತ್ರ ಸದಾ ಜೀವಂತ ಮತ್ತು ಬಾಕಿ ಉಳಿಯುವವನು. (2:255, 28:88, 40:65, 55:27, 57:3)

ಅವನು ಯಾರ ಸಂತಾನವೂ ಅಲ್ಲ, ಅವನಿಗೆ ಯಾರೂ ಸಂತಾನವಿಲ್ಲ. ಅವನ ಹೊರತು ಜಗತ್ತಿನಲ್ಲಿರುವವೆಲ್ಲವೂ ಅವನ ಸೃಷ್ಟಿ. ಪ್ರಪಂಚದಲ್ಲಿರುವ ಯಾರಿಗೂ ಜೀವನ ಸಜಾತೀ ಸಂಬಂಧಿ ಅಥವಾ ಮಗ ಮತ್ತು ಮಗಳು ಎನ್ನಲು ಸಾಧ್ಯವಿಲ್ಲ. (2:116-117, 6:102, 18:4, 5, 19:35, 88,93, 40:91, 112:3-4)

ಅವನೇ ವಾಸ್ತವದಲ್ಲಿ ಜನರ ಆರಾಧ್ಯ. ಅವನ ಜೊತೆ ಬೇರೆ ಯಾರನ್ನೂ ಆರಾಧನೆಯಲ್ಲಿ ಭಾಗೀದಾರರಾಗಿಸುವುದು ಬಹಳ ದೊಡ್ಡ ಪಾಪ ಮತ್ತು ದ್ರೋಹ (ವಿಶ್ವಾಸ ಘಾತಕತನವಾಗಿದೆ). ಅವನು ಮನುಷ್ಯರ ಪ್ರಾರ್ಥನೆಗಳನ್ನು ಆಲಿಸುವವನು ಮತ್ತು ಸ್ವೀಕರಿಸುವವನು. ಅವನಿಗೆ ಮಾತ್ರ ಪ್ರಾರ್ಥನೆಗಳನ್ನು ತಿರಸ್ಕರಿಸುವ ಅಧಿಕಾರವಿದೆ. ಅವನೊಂದಿಗೆ ಪ್ರಾರ್ಥಿಸದೆ ಇರುವುದು ಅಹಂಕಾರವಾಗಿದೆ. ಅವನನ್ನು ಹೊರತು ಬೇರೆಯವರೊಂದಿಗೆ ಪ್ರಾರ್ಥಿಸುವುದು ಅಜ್ಞಾನವಾಗಿದೆ. ಅವನ ಜೊತೆ ಬೇರೆಯವರನ್ನು

ಸೇರಿಸಿ ಪ್ರಾರ್ಥಿಸುವುದು ದೇವೇತರರನ್ನು ಅವನೊಂದಿಗೆ ಭಾಗೀದಾರರಾಗಿಸಿದಂತೆ. (28:88, 31:13, 34:22, 38:65, 39:3, 5, 6, 64, 40:60)

ಇಸ್ಲಾಮಿನ ಪ್ರಕಾರ ದೇವನ ಆಧಿಪತ್ಯ ಪ್ರಕೃತಿಗೆ ಅನುರೂಪವಾಗಿದೆ. ಮಾತ್ರವಲ್ಲ ಅವನ ಆಧಿಪತ್ಯವೇ ರಾಜನೀತಿಯೂ, ಕಾನೂನೂ ಆಗಿದೆ. ಇವುಗಳಲ್ಲಿ ಅವನಿಗೆ ಯಾರೂ ಭಾಗೀದಾರರಿಲ್ಲ. ಅವನ ಭೂಮಿಯಲ್ಲಿ ಅವನು ಸೃಷ್ಟಿಸಿದ ಸೃಷ್ಟಿಗಳ ಮೇಲೆ ಅವನ ಹೊರತು ಬೇರೆಯವರಿಗೆ ಆಡಳಿತ ನಡೆಸುವ ಅಧಿಕಾರವಿಲ್ಲ. ಅವನು ರಾಜನಾಗಿದ್ದರೂ ಸರಿ. ರಾಜ ಪರಿವಾರದವನಾಗಿದ್ದರೂ ಸರಿ. ಪ್ರಜಾತಂತ್ರ ವ್ಯವಸ್ಥೆಯನ್ನು ತರ್ಕಸಿದ್ಧವಾಗಿ ಒಪ್ಪಿಕೊಳ್ಳುವವರು, ಶಾಸಕರು ಕೂಡಾ ಇದರಲ್ಲಿ ಸೇರುತ್ತಾರೆ. ದೇವನ ಎದುರಾಗಿ ಸ್ವತಂತ್ರರಾಗ ಬಯಸುವವರೂ ದೇವವಿರೋಧಿಗಳು. ಅವನ ಹೊರತು ಅನ್ಯರ ಆಜ್ಞಾಪಾಲನೆ ಮಾಡುವವರೂ ವಿರೋಧಿಗಳು. ರಾಜನೀತಿ ಮತ್ತು ಕಾನೂನುಗಳನ್ನು ತಮ್ಮಿಷ್ಟದಂತೆ ರಚಿಸಿ, ದೇವನ ಆದೇಶಗಳನ್ನು ವ್ಯಕ್ತಿಗತ ಕಾನೂನಿಗೆ ಸೀಮಿತಗೊಳಿಸಿ ಕೊಳ್ಳುವವರು ಮತ್ತು ಧಾರ್ಮಿಕ ಆದೇಶಗಳಿಗೆ ಸೀಮಿತಗೊಳಿಸುವವರೂ ವಿರೋಧಿಗಳು. ವಾಸ್ತವದಲ್ಲಿ ಅವನ ಭೂಮಿಯಲ್ಲಿ ಅವನು ಸೃಷ್ಟಿಸಿದ ಮನುಷ್ಯರಿಗೆ ಶರೀಅತ್(ಕಾನೂನು) ನೀಡುವ ಅಧಿಕಾರ ಅವನ ಹೊರತು ಬೇರಾರಿಗೂ ಇರಲು ಸಾಧ್ಯವಿಲ್ಲ. ದೇವನ ಆಧಿಪತ್ಯವನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. (2:178, 180, 182, 229, 232, 3:64, 4:11, 60, 5:38, 40, 44, 45, 47, 50, 115, 7:3, 9:31, 12:40, 16:116, 23:116, 24:2, 25:42, 26:21, 45:18, 114:1, 3)

ಇಸ್ಲಾಮಿನ ಈ ದೇವರ ಬಗೆಗಿನ ಕಲ್ಪನೆಗಳಿಂದ ಕೆಳಗಿನ ವಿಷಯಗಳು ಸ್ಪಷ್ಟವಾಗುತ್ತದೆ:

1) ದೇವನು ಮಾತ್ರ ಮನುಷ್ಯನ ಏಕೈಕ ಮತ್ತು ನೈಜ ಆರಾಧ್ಯನಾಗಿದ್ದಾನೆ. ಅರ್ಥಾತ್ ಆರಾಧನೆಗೆ ಅವನು ಮಾತ್ರ ಅರ್ಹನಾಗಿದ್ದಾನೆ. ಅವನ ಹೊರತು ಇನ್ನಾರಿಗೂ ಆರಾಧಿಸಲ್ಪಡುವ ಹಕ್ಕು ಇಲ್ಲ.

2) ವಿಶ್ವದಲ್ಲಿರುವ ಸಕಲ ಶಕ್ತಿಗಳ ಒಡೆಯನು ಅವನಾಗಿದ್ದಾನೆ. ಮಾನವನ ಪ್ರಾರ್ಥನೆಯನ್ನು ಸ್ವೀಕರಿಸುವ ಅಥವಾ ಸ್ವೀಕರಿಸದಿರುವ ಅಧಿಕಾರ ಅವನಿಗಿದೆ. ಆದುದರಿಂದ ಮನುಷ್ಯನು ಅವನನ್ನು ಮಾತ್ರ ಪ್ರಾರ್ಥಿಸಬೇಕು. ಬೇರೆ ಯಾರೊಂದಿಗಾದರೂ ಪ್ರಾರ್ಥಿಸಬಹುದೆಂಬ ಕಲ್ಪನೆಯೂ ಮನುಷ್ಯನ ಮನಸ್ಸಿನಲ್ಲಿ ಮೂಡಬಾರದು.

3) ಮನುಷ್ಯನ ವಿಧಿಗಳ ಒಡೆಯ ಅವನು ಮಾತ್ರ. ಬೇರೆ ಯಾರಿಗೂ ಮನುಷ್ಯನ ವಿಧಿಯನ್ನು ರಚಿಸುವ ಅಥವಾ ಕೆಡಿಸುವ ಸಾಮರ್ಥ್ಯವಿಲ್ಲ. ಆದುದರಿಂದ ಮನುಷ್ಯನ ನಿರೀಕ್ಷೆ ಮತ್ತು ಭಯದ ಕೇಂದ್ರ ಬಿಂದು ವಾಸ್ತವದಲ್ಲಿ ಅವನಾಗಿದ್ದಾನೆ. ಅವನ ಹೊರತು ಬೇರೆ ಯಾರಿಗೂ ಭಯಪಡಬೇಕಾದ ಅಗತ್ಯವಿಲ್ಲ ಮತ್ತು ಯಾರಿಂದಲೂ ಏನನ್ನೂ ನಿರೀಕ್ಷಿಸಬಾರದು.

4) ಮಾನವ ಮತ್ತು ಅವನ ಸುತ್ತಲಿರುವ ಸಕಲ ವಿಶ್ವದ ಸೃಷ್ಟಿಕರ್ತ ಮತ್ತು ಒಡೆಯ ಅವನಾಗಿದ್ದಾನೆ. ಆದುದರಿಂದ ಮಾನವನ ಮತ್ತು ಸಕಲ ವಿಶ್ವದ ನಿಜವಾದ ಅರಿವು ಹಾಗೂ ಪೂರ್ಣ ಜ್ಞಾನ ಕೇವಲ ಅವನಿಗಿದೆ ಮತ್ತು ಇರಲು ಸಾಧ್ಯ. ಆದುದರಿಂದಲೇ ಅವನು ಜೀವನದ ಏರಿಳಿತಗಳಿಂದ ಕೂಡಿದ ರಸ್ತೆಯಲ್ಲಿ ಮನುಷ್ಯನಿಗೆ ಸರಿಯಾದ ಮಾರ್ಗದರ್ಶನ ಮತ್ತು ಸೂಕ್ತ ಕಾನೂನು ನೀಡಲು ಸಮರ್ಥನಾಗಿದ್ದಾನೆ.

5) ಅವನು ಸೃಷ್ಟಿಕರ್ತ ಮತ್ತು ಒಡೆಯನಾಗಿದ್ದಾನೆ. ಮನುಷ್ಯ ಮತ್ತು ಅವನು ವಾಸಿಸುವ ಈ ಭೂಮಿಯ ಒಡೆಯನು ಅವನೇ. ಆದುದರಿಂದ ಈ ಭೂಮಿಯಲ್ಲಿ ಬೇರೆಯವರ ಅಧಿಕಾರ ಅಥವಾ ಸ್ವಂತ ಅಧಿಕಾರ ಚಲಾವಣೆಯು ಕುಫ್ರ್(ಸತ್ಯನಿಷೇಧ) ಆಗಿದೆ. ಇದೇ ರೀತಿ ಮನುಷ್ಯ ಸ್ವಯಂ ಕಾನೂನು ರಚಿಸುವುದು ಅಥವಾ ಇನ್ನಾರೋ ವ್ಯಕ್ತಿ ಮತ್ತು ಸಂಸ್ಥೆಗೆ ಕಾನೂನುಗಳನ್ನು ರಚಿಸುವ ಅಧಿಕಾರವಿದೆಯೆಂದು ಭಾವಿಸುವುದೂ ಸತ್ಯನಿಷೇಧವಾಗಿದೆ. ತಾನು ಸೃಷ್ಟಿಸಿದ ಭೂಮಿಯಲ್ಲಿ ತನ್ನ ಸೃಷ್ಟಿಗಳ ಮೇಲೆ ಆಡಳಿತ ನಡೆಸುವ ಮತ್ತು ಅವರಿಗಾಗಿ ಕಾನೂನುಗಳನ್ನು ರಚಿಸುವ ಅಧಿಕಾರ ಆ ದೇವನಿಗೆ ಮಾತ್ರ ಇದೆ.

6) ಸರ್ವೋಚ್ಚ ಆಡಳಿತಗಾರ ಮತ್ತು ವಾಸ್ತವಿಕ ಒಡೆಯನು ಅವನಾದ ಕಾರಣ ಅವನ ಕಾನೂನು ಮಾತ್ರ ಸರ್ವಶ್ರೇಷ್ಠವಾದುದು. ಆದುದರಿಂದ ಮಾನವನು ಕಾನೂನುಗಳನ್ನು ರಚಿಸುವ ಅಧಿಕಾರವಿದ್ದರೆ ಅದು ದೇವನ ಕಾನೂನಿನ ಆದೇಶಗಳ ಪಾಲನೆಯ ಆಧಾರದಲ್ಲಿ ಮಾತ್ರ ಇರತಕ್ಕದ್ದು. ಇದು ಅಂತಿಮ ದೈವಿಕ ಗ್ರಂಥ. ಕುರ್‌ಆನಿನ ಆಧಾರದಲ್ಲಿ ನೀಡಲಾಗಿರುವ ದೇವನ ಪರಿಚಯ. ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ದೇವನ ಸರಿಯಾದ ಪರಿಚಯವನ್ನು ಮಾಡಿಕೊಡಲಾಗಿದೆ. ಇದನ್ನು ಯಾರಾದರೂ ಸರಿಯಾಗಿ ಓದಿದರೆ ಅನಂತರ ದೇವನ ಆದೇಶಕ್ಕೆ ವಿರುದ್ಧವಾಗಿ ಒಂದು ಹೆಜ್ಜೆ ಮುಂದಿಡಲೂ ಅವರಿಗೆ ಸಾಧ್ಯವಾಗ ಲಾರದು. ಹೃದಯ ಮತ್ತು ಮನಸ್ಸಿನಲ್ಲಿ ದೇವನ ಕಲ್ಪನೆ ಸರಿಯಾಗಿ ಮೂಡಿದ ವ್ಯಕ್ತಿ ದೈವಿಕ ಗ್ರಂಥ ವಿರೋಧಿಸುವ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಈ ವಿಷಯವನ್ನು ಒಂದು ಐತಿಹಾಸಿಕ ಘಟನೆಯ ಮೂಲಕ ಸಾಬೀತು ಪಡಿಸಲಾಗುತ್ತಿದೆ.

ಸಾಸಾಮಿ ಕುಟುಂಬದ ಓರ್ವ ರಾಜ ಅಹ್‌ಮದ್ ಬಿನ್ ನಸರ್ ನೇಶಾಪುರವನ್ನು ಪ್ರಥಮ ಬಾರಿ ಪ್ರವೇಶಿಸಿದನು. ಅಲ್ಲಿ ಒಂದು ದರಬಾರು ಏರ್ಪಡಿಸಿದನು. ಸ್ವಯಂ ಕಿರೀಟಧಾರಿಯಾಗಿ ರಾಜಾಸನದಲ್ಲಿ ಕುಳಿತು ಸಭಾ ಕಾರ್ಯಕ್ರಮವು ಕುರ್‌ಆನ್ ಪಠಣ ದೊಂದಿಗೆ ಆರಂಭಗೊಳ್ಳುವುದೆಂದು ಘೋಷಿಸಿದನು. ಸಭೆಯಲ್ಲಿ ಕುಳಿತಿದ್ದ ಹಿರಿಯ ವ್ಯಕ್ತಿ ಎದ್ದು ನಿಂತು ಪರಲೋಕದ ವಿಚಾರಣಾ ನ್ಯಾಯಾಲಯದ ವಿಷಯ ಬರುವ ಸೂಕ್ತಗಳನ್ನು ಪಠಿಸಿದರು. ಅವರು ಓದುತ್ತಾ ಈ ಸ್ಥಳಕ್ಕೆ ತಲುಪಿದರು. "ಅಂದು ಇಡೀ ಅಧಿಕಾರ ದೇವನ ಕೈಯಲ್ಲಿರುವುದು ಮತ್ತು ಅವನು ಕೇಳುವನು- ಇಂದು ಅಧಿಕಾರ ಯಾರ ಕೈಯಲ್ಲಿದೆ? ವಾಸ್ತವದಲ್ಲಿ ಇಂದು ಅಧಿಕಾರ ಯಾರ ಕೈಯಲ್ಲಿದೆ? ಲೋಕದಲ್ಲಿ ಬಹಳ ರಾಜರಿದ್ದರು ಇಂದು ಅವರೆಲ್ಲ ಎಲ್ಲಿದ್ದಾರೆ? ನಾಲ್ಕೂ ಕಡೆಯಿಂದ ಇಂದು ಅಧಿಕಾರ ದೇವನ ಕೈಯಲ್ಲಿದೆ

ಎಂಬ ಉತ್ತರ ಕೇಳಿ ಬರುವುದು." ಇದನ್ನು ಕೇಳಿ ಅಹ್‌ಮದ್ ಬಿನ್ ನಸರ್ ನಡುಗಲಾರಂಭಿಸಿದನು. ಸಿಂಹಾಸನದಿಂದ ಕೆಳಗಿಳಿದು ಕಿರೀಟವನ್ನು ತೆಗೆದು ಹಾಕಿದ ಮತ್ತು ಸಾಷ್ಟಾಂಗ(ಸುಜೂದ್) ಎರಗಿದ. ಅಳುತ್ತಾ ಹೀಗೆಂದ, "ಏ ದೇವನೇ, ಬಾದಶಹ ನೀನಾಗಿರುವಿ, ನಾನಲ್ಲ." ಈ ಘಟನೆಯಿಂದ ದೇವನ ನಿಜವಾದ ಪರಿಚಯ ಮನಸ್ಸು ಮತ್ತು ಹೃದಯದಲ್ಲಿ ನೆಲೆಸಿದರೆ ದೇವನ ನೆನಪು ಬರುತ್ತಲೇ ಎಲ್ಲ ಅಧಿಕಾರಶಾಹಿತ್ವವು ಕೊನೆಗೊಳ್ಳುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಇನ್ನೊಂದು ಘಟನೆ ಹೀಗಿದೆ: ಒಬ್ಬ ಶ್ರೀಮಂತ ವ್ಯಕ್ತಿಯ ಬಳಿ ಹದಿಹರೆಯದ ಹುಡುಗಿಯೋರ್ವಳು ಕೆಲಸಕ್ಕಿದ್ದಳು. ಒಂದು ದಿನ ಶ್ರೀಮಂತ ಆಕೆಯ ಬಗ್ಗೆ ಕೆಟ್ಟದಾಗಿ ಯೋಚಿಸಿದ. ಹುಡುಗಿಯನ್ನು ಕೋಣೆಯೊಳಕ್ಕೆ ಕರೆದ. ಅವಳು ಬಂದ ಮೇಲೆ ಒಳಗಿನಿಂದ ಬಾಗಿಲುಗಳನ್ನು ಮುಚ್ಚಲು ಹೇಳಿದ. ಹುಡುಗಿಗೆ ಶ್ರೀಮಂತನ ದುರುದ್ದೇಶ ತಿಳಿಯಿತು. ಎಲ್ಲಾ ಬಾಗಿಲುಗಳನ್ನು ಮುಚ್ಚಿದಳು. ಆದರೆ ಒಂದು ಬಾಗಿಲ ಬಳಿ ಹೋಗಿ ಅಲ್ಲೇ ನಿಂತುಬಿಟ್ಟಳು. "ಎಲ್ಲ ಬಾಗಿಲುಗಳನ್ನು ಮುಚ್ಚಿ ಆಯಿತೇ?" ಶ್ರೀಮಂತ ಪ್ರಶ್ನಿಸಿದ. ಹುಡುಗಿ ಆಯಿತು. ಎಲ್ಲ ಬಾಗಿಲುಗಳನ್ನು ಮುಚ್ಚಿದೆ, ಆದರೆ ಒಂದು ಬಾಗಿಲನ್ನು ಮುಚ್ಚಲು ಸಾಧ್ಯವಾಗುತ್ತಿಲ್ಲ ಎಂದಳು. ಮುಂದುವರಿಸುತ್ತಾ ಹುಡುಗಿ ಹೇಳಿದಳು: ದೇವನು ನನ್ನನ್ನು ಮತ್ತು ನಿಮ್ಮನ್ನು ನೋಡುತ್ತಿದ್ದಾನೆ. ಆ ಬಾಗಿಲನ್ನು ಮುಚ್ಚಲು ಆಗುತ್ತಿಲ್ಲ ಎಂದಳು. ಇದನ್ನು ಕೇಳುತ್ತಲೇ ಶ್ರೀಮಂತನಿಗೆ ದೇವಭಯ ಮೂಡಿತು. ಅವನಿಗೆ ದೇವನು ಎಲ್ಲವನ್ನು ನೋಡುವವನು ಮತ್ತು ಕೇಳುವವನು ಎಂಬುದು ತಿಳಿದಿತ್ತು. ಅವನು ಹೆದರಿಕೆಯಿಂದ ನಡುಗಲಾರಂಭಿಸಿದ ಮತ್ತು ಹುಡುಗಿಯೊಂದಿಗೆ, ನೀನು ಬೇಗನೇ ಈ ಕೋಣೆಯಿಂದ ಹೊರಹೋಗಿ ಬಿಡು ಎಂದು ಅಪ್ಪಣೆ ಕೊಟ್ಟ. ಶ್ರೀಮಂತ ದೇವನ ಮುಂದೆ ಸಾಷ್ಟಾಂಗವೆರಗಿ ಅಳುತ್ತಾ ಕ್ಷಮಾಯಾಚನೆ ಮಾಡತೊಡಗಿದ.

ಇದರಿಂದ ಸ್ಪಷ್ಟವಾಗುವುದೇನೆಂದರೆ ಒಂದು ವೇಳೆ ದೇವನ ಸರಿಯಾದ ಕಲ್ಪನೆ ಹೃದಯದಲ್ಲಿ ಇದ್ದದ್ದೇ ಆದರೆ ಮನುಷ್ಯ ಅನೇಕ ಕೆಡುಕುಗಳನ್ನು ಮಾಡಿದ್ದರೂ, ದೇವನ ನೆನಪು ಮೂಡುತ್ತಲೇ ಎಲ್ಲಾ ನಶೆಯು ಇಳಿದು ಬಿಡುವುದು.

## ನರಕ

ನರಕವೆಂದರೆ ಅಗ್ನಿ ತುಂಬಿದ ಒಂದು ದೊಡ್ಡ ಹೊಂಡ. ಇದರ ತಾಪವು ನಮ್ಮ ಸಾಧಾರಣ ಬೆಂಕಿಗಿಂತ ಸಾವಿರಪಟ್ಟು ಅಧಿಕವಿರುತ್ತದೆ ಮತ್ತು ಅದರ ಉರಿಯುವಿಕೆಯಲ್ಲಿ ಹೆಚ್ಚು ಕಡಿಮೆ ಆಗುವುದಿಲ್ಲ. ಅದರಲ್ಲಿ ಹಾವು, ಚೇಳುಗಳು ಹರಿದಾಡುತ್ತಿರುತ್ತವೆ. ಆದರೆ ದೇವನ ಆದೇಶಕ್ಕೆ ಬದ್ಧವಾಗಿರುವ ಬೆಂಕಿಯು ಈ ಹಾವು, ಚೇಳುಗಳನ್ನು ಕರಟಿಸುವುದಿಲ್ಲ. ಅಂತಿಮ ದೈವಿಕ ಗ್ರಂಥದ ಆದೇಶದಂತೆ ಜೀವಿಸದ ಜನರನ್ನು ಇದರಲ್ಲಿ ಹಾಕಲಾಗುವುದು.

ಭೂಮಿಯಲ್ಲಿ ಬೆಂಕಿಹತ್ತಿ ಉರಿದರೆ ಮಾನವನಿಗೆ ಬಹಳ ನೋವಾಗುತ್ತದೆ. ಆದರೆ ಒಂದು ಅಥವಾ ಎರಡು ನಿಮಿಷ. ಮರಣಹೊಂದಿದ ಕೂಡಲೇ ಈ ನೋವು ಕೊನೆಗೊಳ್ಳುತ್ತದೆ.

ಆದರೆ ನರಕದ ಬೆಂಕಿಯು ಭೂಮಿಯದ್ದಕ್ಕಿಂತ ಸಾವಿರಪಟ್ಟು ಅಧಿಕ ಶಕ್ತಿಯುಳ್ಳದ್ದಾಗಿರುತ್ತದೆ. ಆದರೂ ಅದರಲ್ಲಿ ಹಾಕಲ್ಪಟ್ಟ ವ್ಯಕ್ತಿಯು ಮರಣ ಹೊಂದುವುದಿಲ್ಲ. ನರಕಕ್ಕೆ ಹಾಕಲ್ಪಟ್ಟ ವ್ಯಕ್ತಿಯ ಚರ್ಮ ಮಾಂಸವು ಬೆಂಕಿಯಲ್ಲಿ ಕರಟಿ ಹೋಗುತ್ತದೆ. ಪುನಃ ಹೊಸ ಮಾಂಸವನ್ನೂ ಚರ್ಮವನ್ನೂ ಶರೀರಕ್ಕೆ ಹೊದಿಸಲಾಗುತ್ತದೆ. ಈ ರೀತಿ ಬೆಂಕಿಯು ಉರಿಯುತ್ತಲೇ ಇರುತ್ತದೆ. ಅವನ ನೋವಿನಲ್ಲಿ ಯಾವುದೇ ಕಡಿತವಾಗುವುದಿಲ್ಲ.

ನರಕದಲ್ಲಿ ಹಾವು ಚೇಳುಗಳು ಹರಿದಾಡುತ್ತಿರುತ್ತವೆ. ಆದರೆ ಅವುಗಳು ಸಾಯುವುದಿಲ್ಲ. ಚೇಳು ಚುಚ್ಚಿದರೆ ಇಡೀ ಶರೀರವೇ ಸಿಡಿಯುತ್ತದೆ. ಹಾವು ಕಚ್ಚಿದರೆ ತಲೆ ಒಡೆಯುತ್ತದೆ. ಹಸಿವು ಬಾಯಾರಿಕೆಗಳಿಂದ ವ್ಯಕ್ತಿ ಚಡಪಡಿಸುತ್ತಿರುತ್ತಾನೆ. ತಿನ್ನಲರ್ಹ ಯಾವ ವಸ್ತುವೂ ಅಲ್ಲಿರಲಾರದು. ಕುದಿಯುವ ನೀರು ಇರುವುದು ಮತ್ತು ಅದನ್ನು ಕುಡಿಯಲು ಪ್ರಯತ್ನಿಸಿದರೆ ತುಟಿ, ಗಂಟಲು ಕರಟಿಹೋಗುವುದು. ಬಾಯಾರಿಕೆ ನೀಗದು. ಇದರ ಜೊತೆಗೆ ಹೊಡೆತ ಬಡಿತಗಳ ಶಿಕ್ಷೆಯೂ ಇರುತ್ತದೆ. ಇದು ಸದಾ ಮುಂದುವರಿಯುತ್ತಿರುತ್ತದೆ. ಎಂದಿಗೂ ಮುಗಿಯಲಾರದು. ಇದು ನರಕದ ಸಂಕ್ಷಿಪ್ತ ವಿವರಣೆ. ಒಂದು ವೇಳೆ ನರಕದ ಈ ವಿವರಣೆ ಹೃದಯದಲ್ಲಿ ಸರಿಯಾಗಿ ನೆಲೆಸಿದ್ದೇ ಆದರೆ ವ್ಯಕ್ತಿಯು ನರಕಕ್ಕೆ ಹೋಗುವ ಕೆಲಸಗಳಿಂದ ದೂರವಿರುತ್ತಾನೆ.

ಪ್ರವಾದಿ ಮುಹಮ್ಮದ್‌ರ(ಸ) ಕಾಲದಲ್ಲಿ ಅರೇಬಿಯಾದ ಮರುಭೂಮಿಯಲ್ಲಿ 'ಗಾಮಿದಿಯಾ' ಎಂಬ ಸಮೂಹವಿತ್ತು. ಅಲ್ಲಿನ ಓರ್ವ ಯುವತಿ ವ್ಯಭಿಚಾರವೆಸಗಿದ್ದಳು. ಅವಳಿಗೆ ವ್ಯಭಿಚಾರಿಗಳನ್ನು ನರಕಕ್ಕೆ ಹಾಕಲಾಗುವುದು ಮತ್ತು ಅನಂತ ಕಾಲದ ವರೆಗೆ ಅಲ್ಲಿ ಉರಿಯುತ್ತಲೇ ಇರಬೇಕಾದೀತು ಎಂಬುದು ತಿಳಿದಿತ್ತು. ಈ ಬಗ್ಗೆ ಅರಿವು ಆಕೆಗೆ ಮೂಡಿದಾಗ ಅವಳು ತುಂಬಾ ಹೆದರಿಬಿಟ್ಟಳು. ಭೂಮಿಯಲ್ಲಿ ವ್ಯಭಿಚಾರಕ್ಕೆ ದೇವನು ನಿಶ್ಚಯಿಸಿರುವ ಶಿಕ್ಷೆಯನ್ನು ಅನುಭವಿಸಿದರೆ ಪರಲೋಕದ ಶಿಕ್ಷೆಯಿಂದ ಪಾರಾಗಬಹುದು ಎಂಬುದು ತಿಳಿದಿತ್ತು. ಇಸ್ಲಾಮ್ ವ್ಯಭಿಚಾರಕ್ಕೆ ಅತ್ಯುಗ್ರ ಶಿಕ್ಷೆಯನ್ನೇ ನಿಗದಿಪಡಿಸಿದೆ.

ಯುವತಿ ಪ್ರವಾದಿ ಮುಹಮ್ಮದ್‌ರ(ಸ) ಬಳಿಗೆ ಹೋದಳು. ನನ್ನಿಂದ ವ್ಯಭಿಚಾರವಾಗಿದೆ ಮತ್ತು ನಾನೀಗ ಗರ್ಭವತಿಯಾಗಿದ್ದೇನೆ. ನೀವು ನನಗೆ ಶಿಕ್ಷೆಯನ್ನು ವಿಧಿಸಿರಿ. ಏಕೆಂದರೆ ನಾನು ಪರಲೋಕದಲ್ಲಿ ನರಕಕ್ಕೆ ತಳ್ಳಲ್ಪಡಲು ಬಯಸುವುದಿಲ್ಲ ಎಂದಳು. ಪ್ರವಾದಿ ಮುಹಮ್ಮದ್‌ರು(ಸ) ಹೇಳಿದರು. 'ನೀನೀಗ ಮರಳಿ ನಿನ್ನ ಕುಟುಂಬದ ಬಳಿ ಹೋಗು' ಮಗುವಿನ ಜನನವಾದ ಬಳಿಕ ಬಾ. ಹುಡುಗಿ ಹಿಂತಿರುಗಿದಳು. ಒಂಭತ್ತು ತಿಂಗಳುಗಳ ಬಳಿಕ ಮಗುವಿನೊಂದಿಗೆ ಮರಳಿ ಬಂದಳು. ನನಗೆ ಶಿಕ್ಷೆಯನ್ನು ಜಾರಿಗೊಳಿಸಿರಿ ಎಂದು ಬೇಡಿಕೊಂಡಳು. ಪ್ರವಾದಿ(ಸ) ಹೇಳಿದರು. ನೀನು ಮಗುವಿಗೆ ಎದೆಹಾಲು ನೀಡು. ಮಗು ಹಾಲು ಕುಡಿಯುವುದನ್ನು ನಿಲ್ಲಿಸಿದ ಬಳಿಕ ಮರಳಿ ಬಾ. ಪುನಃ ಮಗುವಿನೊಂದಿಗೆ ಅವಳು ಮರಳಿದಳು. ಎರಡೂವರೆ ವರ್ಷ ಕಳೆದ ಮೇಲೆ ಆಕೆ ಮರಳಿ ಬಂದು ಮಗು ಸ್ತನಪಾನವನ್ನು ನಿಲ್ಲಿಸಿದೆ ಎಂದಳು. ಪ್ರವಾದಿ ಮುಹಮ್ಮದ್‌ರು(ಸ) ಅವಳ ಅಪರಾಧಕ್ಕೆ ಶಿಕ್ಷೆ ಕೊಡಿಸಿದರು.

ಅವಳು ಕಾನೂನಿನ ಹಿಡಿತಕ್ಕೆ ಸಿಕ್ಕಿ ಅಪರಾಧ ಸಾಬೀತಾದ ಬಳಿಕ ಶಿಕ್ಷೆ ಅನುಭವಿಸಿದಳೆಂದು ಯಾರೂ ತಪ್ಪಾಗಿ ತಿಳಿಯಬಾರದು. ಅವಳು ವ್ಯಭಿಚಾರ ಮಾಡುವುದನ್ನು ಯಾರೂ ನೋಡಿರಲಿಲ್ಲ. ಪೊಲೀಸರು ಆಕೆಯನ್ನು ಬಂಧಿಸಿರಲಿಲ್ಲ. ಆದರೂ ಆಕೆ ಪ್ರವಾದಿ ಮುಹಮ್ಮದ್‌ರ(ಸ) ಬಳಿ ಬಂದಳು. ಅವರು ಅವಳಿಗೆ 9 ತಿಂಗಳ ಕಾಲಾವಕಾಶ ನೀಡಿದರು. ಒಂದು ವೇಳೆ ಆಕೆ ತಪ್ಪಿಸಿಕೊಳ್ಳುವವಳಾಗಿದ್ದರೆ ಮರಳಿ ಬರುತ್ತಿರಲಿಲ್ಲ. ಪುನಃ ಎರಡನೆಯ ಬಾರಿ ಆಕೆಗೆ 2½ ವರ್ಷಗಳ ಕಾಲ ಅವಕಾಶ ನೀಡಿದರು. 2½ ವರ್ಷ ಕಳೆದ ಕೂಡಲೇ ಆಕೆ ಮರಳಿ ಬಂದಳು. ಇಲ್ಲಿ ಯಾವುದೇ ನ್ಯಾಯದ ಹಿಡಿತವಿರಲಿಲ್ಲ. ನರಕದ ಸರಿಯಾದ ಕಲ್ಪನೆ ಮನುಷ್ಯನ ಹೃದಯದಲ್ಲಿ ನೆಲೆಸಿದ್ದೇ ಆದರೆ, ಅದರಿಂದ ರಕ್ಷೆ ಹೊಂದುವ ಎಲ್ಲ ವ್ಯವಸ್ಥೆಯನ್ನೂ ಅವನು ಮಾಡಿಕೊಳ್ಳುತ್ತಾನೆ. ಪ್ರಾಣವನ್ನೇ ತ್ಯಜಿಸಬೇಕಾದರೂ ಸರಿ. ಈ ಜ್ಞಾನವೂ ಮನುಷ್ಯನನ್ನು ಕೆಡುಕಿನಿಂದ ದೂರ ಉಳಿಯಲು ಸನ್ನದ್ಧಗೊಳಿಸುತ್ತದೆ.

## ಸ್ವರ್ಗ

ಈ ಲೋಕದಲ್ಲಿ ಅಂತಿಮ ದೈವಿಕ ಗ್ರಂಥದ ಆದೇಶದಂತೆ ಜೀವಿಸಿದ ಜನರನ್ನು ಪರಲೋಕದಲ್ಲಿ ಸ್ವರ್ಗದಲ್ಲಿರಿಸಲಾಗುವುದು. ಸ್ವರ್ಗವು ಒಂದು ಮನೋಹರ ಸ್ಥಳವಾಗಿ ರುವುದು. ಅಲ್ಲಿ ದೊಡ್ಡ ದೊಡ್ಡ ಸುಂದರ ಮಹಲುಗಳಿರುವುದು. ಅದರಲ್ಲಿ ಎಲ್ಲ ಕ್ಷಣಗಳಲ್ಲೂ ಕೆಲಸಕ್ಕೆ ಸನ್ನದ್ಧರಾಗಿರುವ ಆಳುಕಾಳುಗಳು ಓಡಾಡಿಕೊಂಡಿರುವರು. ಅದರಲ್ಲಿ ಹಾಲು, ಜೇನು ಮತ್ತು ಸಿಹಿ ನೀರಿನ ನದಿಗಳು ಹರಿಯುತ್ತಿರುವುದು. ಹಣ್ಣುಗಳಿಂದ ತುಂಬಿದ ತೋಟಗಳಿರುವುವು. ಎಲ್ಲ ರೀತಿಯಲ್ಲೂ ಆರಾಮವಿರುವುದು. ಮನುಷ್ಯ ಇಷ್ಟಪಟ್ಟದ್ದೆಲ್ಲವೂ ಕ್ಷಣ ಮಾತ್ರದಲ್ಲಿ ಸಿಗುವುದು. ಅಲ್ಲಿ ಅನಾರೋಗ್ಯವಾಗಲೀ, ವೃದ್ಧಾಪ್ಯವಾಗಲೀ, ಮೃತ್ಯು ವಾಗಲೀ ಬಾರದು. ಅಲ್ಲಿ ಸದಾ ಕಾಲ ಜೀವಂತ ಉಳಿಯುವ ಅಮರತ್ವ ದೊರೆಯುವುದು.

ಮನುಷ್ಯನ ಮನಸ್ಸಿನಲ್ಲಿ ಸ್ವರ್ಗದ ಸರಿಯಾದ ಕಲ್ಪನೆ ಮೂಡಿದರೆ ಮನುಷ್ಯ ಸ್ವರ್ಗಕ್ಕೆ ಹೋಗುವುದು ತಪ್ಪಿಹೋಗಬಲ್ಲ ಯಾವ ಕೆಲಸಕ್ಕೂ ಕೈ ಹಾಕಲಾರ. ಪ್ರಾಣವನ್ನು ಪಣಕ್ಕಿಟ್ಟಾದರೂ ಸ್ವರ್ಗಗಳಿಸಲು ಪ್ರಯತ್ನಿಸುವನು. ಸ್ವರ್ಗದ ಸರಿಯಾದ ಚಿತ್ರಣವಿರುವ ಮನುಷ್ಯ ಸದಾ ಅಲ್ಲಿಗೆ ಹೋಗಲು ಅಗತ್ಯವಾದ ಕೆಲಸಗಳಲ್ಲೇ ನಿರತನಾಗಿರುವನು. ಪರಲೋಕದಲ್ಲಿ ಸ್ವರ್ಗ ಸಿಗುವುದಾದರೆ ಈ ಪ್ರಪಂಚದಲ್ಲಿ ಪ್ರಾಣವನ್ನು ತ್ಯಜಿಸಲೂ ಸಿದ್ಧನಾಗುವನು. ಶತ್ರುಗಳು 'ಉಹುದ್' ಬೆಟ್ಟದ ಬಳಿ ಮುಸ್ಲಿಮರ ಮೇಲೆ ಆಕ್ರಮಣ ನಡೆಸಿದರು ಮತ್ತು ಯುದ್ಧ ನಡೆಯುತ್ತಿತ್ತು. ಓರ್ವ ಸಹಾಬಿ ಕೈಯಲ್ಲಿ ಖರ್ಜೂರಗಳನ್ನು ಹಿಡಿದು ತಿನ್ನುತ್ತಾ ಪ್ರವಾದಿ ಮುಹಮ್ಮದ್‌ರ(ಸ) ಬಳಿ ಬಂದು ನಿಂತರು. ಪ್ರವಾದಿಯೊಂದಿಗೆ(ಸ), 'ನಾನು ಈ ಯುದ್ಧದಲ್ಲಿ ಭಾಗವಹಿಸಿ ಹುತಾತ್ಮನಾದರೆ ಸ್ವರ್ಗ ಸಿಗುವುದೇ ಎಂದು ಆ ಸಹಾಬಿ ಪ್ರಶ್ನಿಸಿದರು. ಹ. ಮುಹಮ್ಮದ್(ಸ), 'ಹೌದು' ಎಂದು ಉತ್ತರಿಸಿದರು. ಇದನ್ನು ಕೇಳಿದ ವ್ಯಕ್ತಿ ಕೈಯಲ್ಲಿ ಹಿಡಿದು ತಿನ್ನುತ್ತಿದ್ದ ಖರ್ಜೂರವನ್ನು ಎಸೆದು, ಇದನ್ನು ತಿನ್ನುತ್ತಾ ಸಮಯ ವ್ಯರ್ಥಗೊಳಿಸಲಾರೆ ಎಂದನು. ಅವರು ಯುದ್ಧದಲ್ಲಿ ಭಾಗವಹಿಸಿ ಶೂರತನದಿಂದ

ಹೋರಾಡಿ ಹುತಾತ್ಮರಾದರು. ದೇವ ಗ್ರಂಥದ ಸರಿಯಾದ ಪರಿಚಯವಿದ್ದ ವ್ಯಕ್ತಿ ಎಂದಿಗೂ ದೇವಾದೇಶಗಳಿಗೆ ಅವಮಾನ ಮಾಡಲಾರ. ಪ್ರಾಣದ ಆಸೆಯನ್ನು ತ್ಯಜಿಸಿ ಸ್ವರ್ಗಕ್ಕಾಗಿ ಪ್ರಯತ್ನ ಪಡುವನು.

ಇದು ದೇವರು, ಸ್ವರ್ಗ, ನರಕಗಳ ಸಂಕ್ಷಿಪ್ತ ಪರಿಚಯ. ಇವುಗಳ ಬಗ್ಗೆ ಸರಿಯಾದ ತಿಳುವಳಿಕೆ ಮನುಷ್ಯನಿಗಿದ್ದರೆ ಸ್ವರ್ಗ ಗಳಿಸಲು ಜೀವನ ಪರ್ಯಂತ ಹೋರಾಡುವನು. ಲೌಕಿಕ ಜೀವನದ ಪ್ರತಿಯೊಂದು ಕ್ಷಣವನ್ನೂ ದೇವಾದೇಶದ ಅನುಸಾರವಾಗಿ ಸಾಗಿಸುತ್ತಾನೆ ಮತ್ತು ಇದರ ಪ್ರಭಾವವನ್ನು ಅವನ ಜೀವನವಿಡೀ ನೋಡಲು ಸಾಧ್ಯವಿದೆ.

## ಆಧಿಪತ್ಯ

ಯಾವ ಸಂವಿಧಾನದ ಪ್ರಕಾರ ಜೀವಿಸಲು ದೇಶವಾಸಿಗಳಿಗೆ ಮನಸ್ಸಿರುವುದಿಲ್ಲವೋ ಅಂತಹ ಸಂವಿಧಾನವು ಕಸದ ಬುಟ್ಟಿಗೆ ಎಸೆಯಲು ಅರ್ಹವಾಗಿರುತ್ತದೆ. ಸಂವಿಧಾನದ ಜೊತೆ ಆಧಿಪತ್ಯವು ಇಲ್ಲದೇ ಹೋದರೆ ಅದು ಕೇವಲ ಟೊಳ್ಳಾಗಿ ಬಿಡುತ್ತದೆ. ಅದಕ್ಕೆ ಯಾವ ಬೆಲೆಯೂ ಇರುವುದಿಲ್ಲ. ದೇಶವಾಸಿಗಳು ಅದಕ್ಕೆ ಮಾನ್ಯತೆ ನೀಡುವುದಿಲ್ಲ. ಆದರೆ, ಸಂವಿಧಾನದ ಜೊತೆ ಆಧಿಪತ್ಯವೂ ಇದ್ದರೆ ಅಂತಹ ಸಂವಿಧಾನವು ನಿಜವಾದ ಸಂವಿಧಾನವೆನಿಸಿ ಕೊಳ್ಳುತ್ತದೆ. ಅದರ ಆದೇಶಗಳಿಗೆ ಬೆಲೆಯೂ ಇರುತ್ತದೆ. ಜನರು ಅದರ ಆದೇಶಗಳನ್ನು ತಿರಸ್ಕರಿಸಲು ಹೆದರುತ್ತಾರೆ. ಆದ್ದರಿಂದ ಆಧಿಪತ್ಯವು ಸಂವಿಧಾನದ ಒಂದು ಆವಶ್ಯಕತೆಯಾಗಿದೆ.

ಆಧಿಪತ್ಯದಲ್ಲಿ ಎರಡು ವಿಧಗಳಿವೆ:

1) ದೇವನ ಆಧಿಪತ್ಯ ಮನುಷ್ಯರ ಮೇಲೆ (Sovereignty of God over man).

2) ಮನುಷ್ಯರ ಆಧಿಪತ್ಯ ಮನುಷ್ಯರ ಮೇಲೆ (Sovereignty of man over man).

ಕುರ್‌ಆನಿನ ಪ್ರಕಾರ;

1) ದೇವನು ಈ ಸಮಸ್ತ ವಿಶ್ವದ, ಮನುಷ್ಯರ ಮತ್ತು ಮನುಷ್ಯರಿಗೆ ಉಪಯುಕ್ತವೆನಿಸುವ ಸಕಲ ಚರಾಚರಗಳ ಸೃಷ್ಟಿಕರ್ತ.

2) ಈ ಎಲ್ಲ ಸೃಷ್ಟಿಗಳ ಒಡೆಯ, ಅಧಿಕಾರಿ ಮತ್ತು ಮೇಲ್ವಿಚಾರಕ ಕೂಡಾ ದೇವನೇ ಆಗಿರುವನು.

3) ಈ ವಿಶ್ವದ ಆಧಿಪತ್ಯ ಆ ಏಕದೇವನ ಹೊರತು ಬೇರಾರಿಗೂ ಇಲ್ಲ ಮತ್ತು ಇರಲು ಸಾಧ್ಯವಿಲ್ಲ. ಯಾರಿಗೂ ಅವನ ಆಧಿಪತ್ಯದಲ್ಲಿ ಭಾಗೀದಾರರಾಗುವ ಹಕ್ಕಿಲ್ಲ.

4) ಆಧಿಪತ್ಯದ ಎಲ್ಲ ಗುಣ ಮತ್ತು ಅಧಿಕಾರ ಕೇವಲ ದೇವನೊಬ್ಬನಲ್ಲಿ ಕೇಂದ್ರೀಕೃತವಾಗಿದೆ. ಈ ವಿಶ್ವದಲ್ಲಿ ಇದಕ್ಕೆ ಬೇರೆ ಯಾರೂ ಹಕ್ಕುದಾರರಿಲ್ಲ. ಅವನೇ ಎಲ್ಲರನ್ನೂ ಹತ್ತಿಕ್ಕುವವನು ಮತ್ತು ಎಲ್ಲವನ್ನೂ ಅರಿಯುವವನು. ಅವನು ನ್ಯೂನತೆಗಳಿಂದ ಮುಕ್ತನು ಮತ್ತು ಪರಮ ಪಾವನನು. ಅವನೇ ಎಲ್ಲರ ರಕ್ಷಕ ಮತ್ತು ಆಶ್ರಯದಾತ. ಅವನು ಜಾಗೃತ ಮತ್ತು ಚಿರಂಜೀವಿಯಾಗಿರುವನು. ಅವನಿಗೆ ಸಕಲ ಸಾಮರ್ಥ್ಯವಿದೆ. ಎಲ್ಲ ಅಧಿಕಾರ ಅವನ

ಕೈಯಲ್ಲಿದೆ. ಎಲ್ಲ ವಸ್ತುಗಳ ವಿಧಿಯನ್ನು ನಿರ್ಣಯಿಸುವವನು ಅವನೇ. ಲಾಭ ಅಥವಾ ನಷ್ಟವನ್ನುಂಟು ಮಾಡುವ ಸಾಮರ್ಥ್ಯ ಅವನಿಗಿದೆ. ಅವನ ಅಪ್ಪಣೆಯ ಹೊರತು ಯಾರೂ ಯಾರಿಗೂ ಲಾಭವನ್ನಾಗಲಿ ನಷ್ಟವನ್ನಾಗಲಿ ಉಂಟುಮಾಡಲಾರರು. ಅವನ ಆಜ್ಞೆಯ ವಿನಾ ಅವನ ಮುಂದೆ ಶಿಫಾರಸು ಮಾಡತಕ್ಕವರಾರೂ ಇಲ್ಲ. ಅವನು ಯಾರನ್ನೂ ವಿಚಾರಣೆಗೆ ಗುರಿಪಡಿಸಬಹುದು. ಯಾರನ್ನು ಬೇಕಾದರೂ ಕ್ಷಮಿಸಬಹುದು. ಅವನ ಆಜ್ಞೆಯನ್ನು ಪುನರ್ವಿಮರ್ಶೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ಅವನು ಯಾರ ಮುಂದೆಯೂ ಉತ್ತರದಾಯಿಯಲ್ಲ, ಎಲ್ಲರೂ ಅವನ ಎದುರು ಉತ್ತರದಾಯಿಗಳು. ಅವನ ಆಜ್ಞೆಗಳು ಪ್ರಚಲಿತವಾಗಿರುತ್ತವೆ. ಅವನ ಆದೇಶಗಳನ್ನು ಧಿಕ್ಕರಿಸುವ ಶಕ್ತಿ ಯಾರಿಗೂ ಇಲ್ಲ. ಆಧಿಪತ್ಯದ ಈ ಸಕಲ ಗುಣವಿಶೇಷಗಳು ಆ ದೇವನೊಬ್ಬನಿಗೆ ಮಾತ್ರ ಇದೆ. ಅವನಿಗೆ ಭಾಗೀದಾರರಿಲ್ಲ.

ವಿಶ್ವದ ಈ ವಿಚಾರಧಾರೆಯ ಪ್ರಕಾರ ಕುರ್‌ಆನ್ ಹೇಳುತ್ತದೆ. ಮನುಷ್ಯರಿಗೆ ಆಜ್ಞೆಗಳನ್ನು ನೀಡುವವನು ಮತ್ತು ಆಧಿಪತಿ ಅವನಾಗಿದ್ದಾನೆ. ಅವನೇ ವಿಶ್ವದ ಒಡೆಯ ಮತ್ತು ಆಜ್ಞೆಗಳನ್ನು ನೀಡುವವನು. ಮಾನವನಿಗೆ ಸಂಬಂಧಪಟ್ಟಂತೆಯೂ ಆಧಿಪತ್ಯವು ಅವನಿಗೇ ಸಲ್ಲುತ್ತದೆ. ಅವನ ಹೊರತು ಬೇರೆ ಯಾರೂ ಆಜ್ಞೆಗಳನ್ನು ನೀಡುವ ಮತ್ತು ತೀರ್ಮಾನಿಸುವ ಅಧಿಕಾರವನ್ನು ಹೊಂದಿಲ್ಲ. ವಿಶ್ವದಲ್ಲಿರುವ ಸಕಲ ಚರಾಚರಗಳು ದೇವನ ಆಜ್ಞಾಪಾಲನೆ ಮಾಡುತ್ತವೆ ಮತ್ತು ಆಧಿಪತ್ಯವನ್ನು ಒಪ್ಪುತ್ತವೆ. ಅದೇ ಪ್ರಕಾರ ನಡೆಯುತ್ತವೆ. ಮನುಷ್ಯ ಕೂಡಾ ದೇವನ ಆಜ್ಞಾಪಾಲಕನಾಗಬೇಕು ಮತ್ತು ಆಧಿಪತ್ಯವನ್ನು ಒಪ್ಪಿಕೊಳ್ಳಬೇಕು. ಒಂದು ಸೂಕ್ಷ್ಮ ಪರಮಾಣುವಿನಿಂದ ಹಿಡಿದು ದೊಡ್ಡ ಗ್ಯಾಲಕ್ಸಿಗಳ ವರೆಗೆ ಎಲ್ಲವೂ ದೇವನಿಗೆ ವಿಧೇಯವಾಗಿವೆ. ದೇವನು ಮನುಷ್ಯನಿಗೆ ತನ್ನ ಅಂತಿಮ ಗ್ರಂಥ ಕುರ್‌ಆನಿನಲ್ಲಿ ಯೋಚಿಸಿ ವಿಚಾರ ಮಾಡಿಕೊಂಡು ಸರಿಯಾಗಿ ಅರ್ಥೈಸಿ ಪೂರ್ಣ ವಿಶ್ವಾಸದೊಂದಿಗೆ ಅವನ ಆಧಿಪತ್ಯವನ್ನು ಒಪ್ಪಿಕೊಳ್ಳಲು ಮತ್ತು ಆಜ್ಞಾಪಾಲಕ ದಾಸರಾಗಲು ಕರೆ ನೀಡುತ್ತದೆ. ಇದನ್ನು ಕುರ್‌ಆನ್ ಬಹಳ ವಿಸ್ತಾರವಾಗಿ ವಿವರಿಸಿದೆ.

1) ಈ ವಿಶ್ವದ ಪ್ರಭು ಮತ್ತು ಮೇಲ್ವಿಚಾರಕನೇ ವಾಸ್ತವದಲ್ಲಿ ಮನುಷ್ಯನ ಪ್ರಭು ಕೂಡಾ ಆಗಿದ್ದಾನೆ. ಅವನ ದೇವತ್ವವನ್ನು ಒಪ್ಪಿಕೊಳ್ಳಬೇಕು.

2) ಆಜ್ಞೆಯನ್ನು ನೀಡುವ ಮತ್ತು ಕಾನೂನುಗಳನ್ನು ರಚಿಸುವ ಹಕ್ಕು ಅವನ ಹೊರತು ಇನ್ನಾರಿಗೂ ಇಲ್ಲ. ಮನುಷ್ಯ ಅವನನ್ನು ಮಾತ್ರ ಆರಾಧಿಸಬೇಕು. ಇದುವೇ ಸರಿಯಾದ ಮಾರ್ಗ.

3) ಆಜ್ಞೆಯನ್ನು ನೀಡುವ ಹಕ್ಕು ದೇವನಿಗೆ ಮಾತ್ರ ಇದೆ. ಏಕೆಂದರೆ ಆತ ಸೃಷ್ಟಿಕರ್ತ.

4) ಆಜ್ಞೆಯನ್ನು ನೀಡುವ ಹಕ್ಕು ದೇವನಿಗಿದೆ. ಏಕೆಂದರೆ ಅವನು ರಾಜಾಧಿರಾಜ.

5) ದೇವನ ಆಜ್ಞೆಗಳು ಸತ್ಯವಾಗಿದೆ. ಏಕೆಂದರೆ ಅವನೇ ಸತ್ಯದ ಜ್ಞಾನಿ ಮತ್ತು ಅವನು ಮಾತ್ರ ಸರಿಯಾದ ಮಾರ್ಗದರ್ಶನ ನೀಡಬಲ್ಲವನಾಗಿದ್ದಾನೆ.

ಈ ಕಾರಣಗಳಿಂದಾಗಿ ಮನುಷ್ಯ ಅಲ್ಲಾಹನ ಆಜ್ಞೆಗಳನ್ನೇ ಪಾಲಿಸಬೇಕು ಮತ್ತು ಅವನ ಕಾನೂನಿನ ಅನುಸರಣೆ ಮಾಡಬೇಕು ಎಂದು ಕುರ್‌ಆನ್ ತೀರ್ಮಾನಿಸುತ್ತದೆ. ಅವನ ಹೊರತು ಬೇರೆಯವರ ಅಥವಾ ಸ್ವಂತ ಇಚ್ಛೆಯಂತೆ ಜೀವಿಸುವುದು ನಿಷಿದ್ಧವಾಗಿದೆ.

ದೇವನು ಮನುಷ್ಯನ ಜೀವನಕ್ಕೆ ಯಾವೆಲ್ಲಾ ಮಿತಿ ಮೇರೆಗಳನ್ನು ನಿರ್ಣಯಿಸಿರುವನೋ ಅವನ್ನು ಮೀರಿ ಹೋಗುವ ಅಧಿಕಾರ ಯಾರಿಗೂ ಇಲ್ಲ.

ದೇವನು ಹೇಳುತ್ತಾನೆ- ಅವನ ಆಜ್ಞೆಗೆ ವಿರುದ್ಧವಾದ ಆಜ್ಞೆಗಳನ್ನು ಅನುಸರಿಸುವುದು ತಪ್ಪು ಮಾತ್ರವಲ್ಲ ನಿಷಿದ್ಧವಾಗಿದೆ. ಸತ್ಯನಿಷೇಧ, ಪಥಭ್ರಷ್ಟತೆ, ಅನ್ಯಾಯ ಕೂಡಾ ಆಗಿದೆ. ಅಲ್ಲಾಹನ ಹೊರತು ಇತರರ ಆಜ್ಞೆಗಳ ಪಾಲನೆ, ತೀರ್ಮಾನಗಳು ಅಜ್ಞಾನದ ತೀರ್ಮಾನಗಳಾಗಿವೆ. ಇವುಗಳನ್ನು ನಿರಾಕರಿಸುವುದು ವಿಶ್ವಾಸದ ಬೇಡಿಕೆಯಾಗಿದೆ.

ದೇವ ಮತ್ತು ಅವನ ಸಂದೇಶವಾಹಕರ ಆಜ್ಞೆಗಳು ಕುರ್‌ಆನಿನ ಪ್ರಕಾರ ಸರ್ವೋಚ್ಚ ಕಾನೂನುಗಳಾಗಿವೆ. ಇವುಗಳನ್ನು ಸತ್ಯವಿಶ್ವಾಸಿಯು ಪಾಲಿಸುತ್ತಾನೆ. ಯಾವುದೇ ವಿಷಯದಲ್ಲಿ ದೇವನು ಮತ್ತು ಅವನ ಸಂದೇಶವಾಹಕರು ಒಂದು ತೀರ್ಮಾನ ಮಾಡಿದ್ದರೆ, ತನ್ನಿಚ್ಛೆಯಂತೆ ತೀರ್ಮಾನಿಸುವ ಹಕ್ಕು ಯಾರಿಗೂ ಇಲ್ಲ. ಈ ತೀರ್ಮಾನಗಳನ್ನು ವಿರೋಧಿಸುವುದು ವಿಶ್ವಾಸಕ್ಕೆ ವಿರುದ್ಧವಾಗಿದೆ.

ಮನುಷ್ಯನ ಅಧಿಕಾರದ ರೂಪುರೇಷೆಗಳು ಕುರ್‌ಆನಿನ ಪ್ರಕಾರ ಹೀಗಿರಬೇಕು. ದೇಶವು ದೇವನ ಮತ್ತು ದೇವ ಸಂದೇಶವಾಹಕರ ಕಾನೂನುಗಳ ಸರ್ವೋಚ್ಚತೆಯನ್ನು ಸ್ವೀಕರಿಸಿ ಅದರ ಪ್ರಕಾರ ಅಧಿಕಾರವನ್ನು ಚಲಾಯಿಸಬೇಕು. ವಾಸ್ತವಿಕ ಅಧಿಪತಿಯ ಪ್ರತಿನಿಧಿತ್ವವನ್ನು ಮನ್ನಿಸಿ ಆ ರೂಪದಲ್ಲಿ ಕೆಲಸ ನಿರ್ವಹಿಸಬೇಕು. ಈ ಆಧಾರದಲ್ಲಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ವ್ಯವಸ್ಥೆಯು ಮೇಲೆ ತಿಳಿಸಲಾಗಿರುವ ಸೀಮೆಯೊಳಗೇ ಇರುವುದು.

ಕುರ್‌ಆನಿನಲ್ಲಿ ಈ ಪ್ರತಿನಿಧಿತ್ವದ ಚಿತ್ರಣವನ್ನು ನೀಡಿರುವ ಪ್ರಕಾರ ಈ ಜಗತ್ತಿನಲ್ಲಿ ಮನುಷ್ಯನಿಗೆ ಯಾವೆಲ್ಲ ಶಕ್ತಿಗಳು ಸಿದ್ಧಿಸಿವೆಯೋ ಅವುಗಳು ದೇವನಿಂದ ನೀಡಲ್ಪಟ್ಟವುಗಳಾಗಿವೆ. ಮನುಷ್ಯನಿಗೆ ದೇವನು ನೀಡಿರುವ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿ ಅವನ ಆಜ್ಞಾಪಾಲಕನಾಗಿ ಈ ಜಗತ್ತಿನಲ್ಲಿ ಜೀವಿಸಬೇಕು. ಇದು ದೇವನ ಉದ್ದೇಶ. ಮನುಷ್ಯ ಇಲ್ಲಿ ಸ್ವಯಂ ಮಾಲಿಕನಲ್ಲ, ಬದಲಾಗಿ ನೈಜ ಮಾಲಕನ ಪ್ರತಿನಿಧಿಯಾಗಿದ್ದಾನೆ.

ಕುರ್‌ಆನಿನ ಅಧ್ಯಯನದಿಂದ ತಿಳಿದು ಬರುವಂತೆ ದೇವನೇ ನಿಜವಾದ ಅಧಿಪತಿ. ಮನುಷ್ಯ ತಾನೂ ಅಧಿಪತಿ ಎಂದು ತಿಳಿಯುವುದೇ ಎಲ್ಲ ಕೆಡುಕುಗಳ ಮೂಲವಾಗಿದೆ. ಜಗತ್ತಿನಲ್ಲಿರುವ ಎಲ್ಲ ಕೆಡುಕುಗಳ ಮೂಲವನ್ನು ಹುಡುಕಿದರೆ ಅದಕ್ಕೆ ಕಾರಣ ದೇವೇತರರ ಆಧಿಪತ್ಯವನ್ನು ಸ್ವೀಕರಿಸಿರುವುದು. ಇದು ವಿಷದ ವರ್ತುಲ. ಈ ಬೇರು ಎಲ್ಲಿಯ ವರೆಗೆ ಬಾಕಿ ಉಳಿಯುವುದೋ ಅಲ್ಲಿಯ ವರೆಗೆ ಗೆಲ್ಲುಗಳನ್ನು ಕತ್ತರಿಸಿ ಹಾಕುವುದರಿಂದ ಪ್ರಯೋಜನವಾಗದು. ಒಂದು ಕಡೆಯಿಂದ ಕಷ್ಟಗಳು ಬರುವುದು ನಿಂತು ಬಿಟ್ಟರೆ ಮತ್ತೊಂದೆಡೆಯಿಂದ ಆರಂಭಗೊಳ್ಳುವುದರ ಹೊರತು ಬೇರೇನೂ ಆಗಲಾರದು.

ಮನುಷ್ಯ ಜೀವನದಲ್ಲಿ ವಿಶ್ವದ ವಿವಿಧ ಘಟ್ಟಗಳಲ್ಲಿ ಎದುರಾಗುವ ಸಂಕಷ್ಟಗಳಿಗೆ ಒಬ್ಬರನ್ನು ಬಿಟ್ಟು ಬೇರೆಯವರ ಆಧಿಪತ್ಯವನ್ನು ನಂಬಿ ಎಂಬ ಸಲಹೆ ನೀಡಲಾಗುತ್ತದೆ. ಆದರೆ ಇದು ಸಮಸ್ಯೆಯ ಪರಿಹಾರವಾಗಲಾರದು. ಇದರಿಂದ ಸಂಕಷ್ಟಗಳ ಸರಮಾಲೆ ಯಾವ ಮೂಲದಿಂದ ಬರುತ್ತಿತ್ತೋ ಅಲ್ಲಿಂದ ತಪ್ಪಿ ಬೇರೊಂದು ಕಡೆಯಿಂದ ಬರಲಾರಂಭಿಸುತ್ತದೆ. ಇದನ್ನು ಯಾರು ಪರಿಹರಿಸಬಲ್ಲರು?

ಮನುಷ್ಯ ಇನ್ನೊಬ್ಬನ ದೇವನಾಗಿ ಮಾರ್ಪಡಬಹುದು. ಬೇರೆ ಯಾರನ್ನೋ ದೇವನೆಂದು ತಿಳಿಯಬಹುದು. ಸ್ವಯಂ ತನ್ನನ್ನೇ ದೇವನೆಂದು ನಂಬಿ ಕೂರಬಹುದು. ಆದರೆ ಇದಾವುದ ರಿಂದಲೂ ನಾಶ-ನಷ್ಟಗಳ ನಿಜವಾದ ಕಾರಣವು ನಿವಾರಣೆಯಾಗದೆ ಹಾಗೆಯೇ ಉಳಿದು ಬಿಡುವುದು.

ಸರ್ವಾಧಿಕಾರವು ಎಲ್ಲ ಕೆಡುಕುಗಳ ಮೂಲವೆಂದು ಕೆಲವರು ತಿಳಿಯುತ್ತಾರೆ. ಒಂದು ವೇಳೆ ಸರ್ವಾಧಿಕಾರವನ್ನು ಕಿತ್ತು ಹಾಕಿದರೆ ಒಬ್ಬ ವ್ಯಕ್ತಿ ಅಥವಾ ಕುಟುಂಬದ ದೇವತ್ವದ ಸ್ಥಾನವು ಹೊರಟು ಹೋಗಿ ಪಾರ್ಲಿಮೆಂಟು ದೇವತ್ವದ ಸ್ಥಾನಕ್ಕೆ ಏರುವುದು. ಇದರಿಂದ ಮನುಷ್ಯರ ಸಮಸ್ಯೆಗಳು ನಿಜವಾಗಿಯೂ ಬಗೆಹರಿಯಬಲ್ಲುದೇ? ಪಾರ್ಲಿಮೆಂಟು ಅಧಿಕಾರ ದಲ್ಲಿರುವೆಡೆಗಳಲ್ಲಿ ಅನ್ಯಾಯ ಅಶಾಂತಿ ಕೊನೆಗೊಂಡಿದೆಯೇ?

ಸಾಮ್ರಾಜ್ಯವಾದವೇ ಎಲ್ಲ ಕೆಡುಕುಗಳ ಮೂಲವೆಂಬುದು ಇನ್ನು ಕೆಲವರ ಅಭಿಪ್ರಾಯ. ಸಾಮ್ರಾಜ್ಯವಾದವು ಕೊನೆಗೊಂಡರೆ ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಅಧಿಕಾರ ಹಸ್ತಾಂತರವಾಗುವುದು. ಇದರಿಂದಾಗಿ ಜಗತ್ತಿನಲ್ಲಿ ಶಾಂತಿ ನೆಮ್ಮದಿ ನೆಲೆಸಬಲ್ಲುದೇ? ಮನುಷ್ಯ ತನ್ನನ್ನೇ ದೇವನೆಂದು ತಿಳಿದು ಜೀವಿಸುವೆಡೆಯಲ್ಲಿ ಮಾನಸಿಕ ಶಾಂತಿ ಲಭ್ಯವಾಗಿದೆಯೇ?

ಮತ್ತೆ ಕೆಲವರ ಪ್ರಕಾರ ಬಂಡವಾಳ ಶಾಹಿತ್ವವೇ ಎಲ್ಲ ಕೆಡುಕುಗಳ ಮೂಲವಾಗಿದೆ. ಒಂದು ವೇಳೆ ಬಂಡವಾಳ ಶಾಹಿತ್ವವು ಕೊನೆಗೊಂಡಿತು ಎಂದಿಟ್ಟು ಕೊಳ್ಳೋಣ. ಇದರಿಂದೇನಾಗಬಹುದು? ಕಾರ್ಮಿಕರು ಶ್ರೀಮಂತರ ದೇವತ್ವದಿಂದ ರಕ್ಷಣೆ ಹೊಂದಿ ತಾವೇ ರಚಿಸಿರುವ ದೇವರುಗಳ ದಾಸ್ಯ ಸ್ವೀಕರಿಸುವರು. ಇದರಿಂದ ಸ್ವಾತಂತ್ರ್ಯ, ನ್ಯಾಯ, ಶಾಂತಿ ಮನುಷ್ಯನಿಗೆ ಸಿಗಬಲ್ಲುದೇ? ತಾವೇ ನಿರ್ಮಿಸಿಕೊಂಡಿರುವ ದೇವರುಗಳಿರುವೆಡೆಗಳಲ್ಲಿ ಮನುಷ್ಯನಿಗೆ ಈ ಅನುಗ್ರಹಗಳು ಪ್ರಾಪ್ತವಾಗಿದೆಯೇ?

ಮಾನವನನ್ನು ಸೃಷ್ಟಿಸಿದ, ಮನುಷ್ಯನಿಗೆ ವಾಸಸ್ಥಾನವಾಗಿ ಈ ಭೂಮಿಯನ್ನು ಮಾಡಿದ, ಗಾಳಿ, ನೀರು, ಬೆಳಕು, ಉಷ್ಣತೆ ಮತ್ತು ಸಕಲ ಸಾಮಗ್ರಿಗಳ ಮೂಲಕ ಮಾನವನನ್ನು ಪೋಷಿಸುತ್ತಿರುವ, ಯಾರ ಹಿಡಿತದಿಂದ ಮನುಷ್ಯನು ತಪ್ಪಿಸಿಕೊಳ್ಳಲಾರನೋ ಅವನೇ ನಿಜವಾದ ದೇವನೆಂದು ಬುದ್ಧಿಯು ತೀರ್ಮಾನಿಸುತ್ತದೆ. ದೇವನೇ ಮನುಷ್ಯ ಮತ್ತು ಸಮಸ್ತ ವಿಶ್ವದ ನೈಜ ಒಡೆಯ. ಅವನೇ ನಮ್ಮನ್ನು ಸಲಹುವವನು. ಅವನೇ ರಾಜ ಮತ್ತು ಅಧಿಪತಿ. ಅವನ ಈ ಭೂಮಿಯಲ್ಲಿ ಅವನ ಹೊರತು ಇನ್ನಾರಿಗೆ ತಾನೇ ಆಧಿಪತ್ಯದ

ಅಧಿಕಾರವಿರಬಲ್ಲುದು? ಯಾರಿಗೆ ಇಷ್ಟು ಶಕ್ತಿ ಇದೆ? ಈ ಜಗತ್ತಿನಲ್ಲಿ ಅವನ ಹೊರತು ಆಡಳಿತ ನಡೆಸುವಷ್ಟು ಜ್ಞಾನ ಮತ್ಯಾರಿಗಿದೆ? ಯಾರು ದೇವನ ಆಧಿಪತ್ಯವನ್ನು ಒಪ್ಪುವುದಿಲ್ಲವೋ ಬೇರೆ ಯಾರನ್ನಾದರೂ ಅಧಿಪತಿ ಎಂದು ತಿಳಿಯುತ್ತಾರೋ ಅಥವಾ ಸ್ವತಃ ತನ್ನನ್ನೇ ಅಧಿಪತಿ ಎಂದು ಭಾವಿಸುತ್ತಾರೋ ಎಲ್ಲರೂ ದಾರಿತಪ್ಪಿದವರಾಗುವರು. ಇದು ಒಂದು ಹಸಿ ಸುಳ್ಳಾಗುತ್ತದೆ. ಯಾರು ಒಡೆಯನೋ ಅವನು ಒಡೆಯನಾಗಿಯೇ ಇರುವನು. ಯಾರು ರಾಜ ಮತ್ತು ಅಧಿಪತಿಯೋ ಅವನು ರಾಜ ಮತ್ತು ಅಧಿಪತಿಯೇ ಆಗಿರುವನು. ವಾಸ್ತವಿಕತೆಗೆ ವಿರುದ್ಧವಾಗಿ ಬೇರೆಯವರ ಆಜ್ಞಾಪಾಲನೆಯನ್ನು ಮಾಡಿದ ವ್ಯಕ್ತಿಗಳ ಜೀವನವು ಸಂಪೂರ್ಣ ಕೆಟ್ಟುಹೋಗುವುದು. ಸ್ವೇಚ್ಛೆಯಂತೆ ಜೀವಿಸುವವರೂ ಇದೇ ಪರಿಣಾಮವನ್ನೆದುರಿಸುವರು.

ಇಂದು ಮನುಷ್ಯ ಎದುರಿಸುತ್ತಿರುವ ಸಕಲ ಸಮಸ್ಯೆಗಳಿಗೆ ಪರಿಹಾರವೊಂದೇ. ಅವನು ದೇವೇತರರ ಆಜ್ಞಾಪಾಲನೆಯನ್ನು ತೊರೆಯಬೇಕು. ಏಕೈಕನೂ ಅಜೇಯನೂ ಆದ ವಾಸ್ತವದಲ್ಲಿ ಈ ಜಗತ್ತಿನ ಒಡೆಯನಾದ ಆ ಏಕದೇವನ ಆಜ್ಞಾಧಿಕಾರವನ್ನು ಸ್ವೀಕರಿಸಬೇಕು. ಮನುಷ್ಯ ಪರಮೋಚ್ಚವೆಂದು ತಿಳಿದಿರುವ ಸಕಲ ಆಜ್ಞಾಧಿಕಾರಗಳನ್ನು ರದ್ದುಗೊಳಿಸಬೇಕು. ಏಕೆಂದರೆ ಅವೆಲ್ಲವೂ ತಪ್ಪು ಸಿದ್ಧಾಂತಗಳ ಮೇಲೆ ನಿರ್ಮಿತವಾಗಿವೆ. ಕೇವಲ ಅವನ ಆಧಿಪತ್ಯವನ್ನು ಸ್ವೀಕರಿಸಬೇಕು. ಅವನು ಸರ್ವೋಚ್ಚ ಶಾಸನಕರ್ತ. ಅವನೇ ವಾಸ್ತವದಲ್ಲಿ ಸರ್ವಸಮರ್ಥ. ತಮ್ಮಿಷ್ಟದಂತೆ ಶಾಸನ, ಕಾನೂನುಗಳನ್ನು ರಚಿಸುವುದನ್ನು ನಿಲ್ಲಿಸಬೇಕು. ಕೇವಲ ಅವನ ಆಜ್ಞಾಧಿಕಾರವನ್ನು ಪಾಲಿಸಬೇಕು. ಇದರಿಂದ ಮನುಷ್ಯ ದೇವನ ಪ್ರತಿನಿಧಿಯಾಗುವ ಅವಕಾಶವನ್ನು ಹೊಂದುತ್ತಾನೆ. ಮನುಷ್ಯನ ಆಧಿಪತ್ಯವು ಅದು ಯಾವುದೇ ರೂಪದಲ್ಲಿದ್ದರೂ ಬೇರು ಸಹಿತ ಕೀಳಲ್ಪಡಬೇಕು. ಆಧಿಪತ್ಯದ ಬಗೆಗಿರುವ ತಪ್ಪುಕಲ್ಪನೆಗಳನ್ನು ನೀಗಿಸಿ ವಾಸ್ತವದಲ್ಲಿ ದೇವ ಶಾಸನವನ್ನು ತನ್ನದಾಗಿಸಿಕೊಳ್ಳುವುದರಿಂದ ಮಾತ್ರ ಈ ಸುಧಾರಣೆಯು ಸಾಧ್ಯವಾಗಬಲ್ಲದು.

ಸಾಮ್ರಾಜ್ಯವಾದದ ಬದಲು ಕಮ್ಯೂನಿಝಮ್ ಬಂದರೂ ಸರ್ವಾಧಿಕಾರ ಹೊರಟು ಪ್ರಜಾಪ್ರಭುತ್ವ ಬಂದರೂ ಬೇರೆಯವರ ಒತ್ತಾಯದ ಆಳ್ವಿಕೆಯ ಬದಲು ಸ್ವಂತ ಆಡಳಿತ ಬಂದರೂ ಕೆಟ್ಟು ಹೋದ ನಿಸ್ಥೆಯನ್ನು ಸರಿಪಡಿಸಲು ಸಾಧ್ಯವಿಲ್ಲ. ಕೇವಲ ದೇವನ ಪ್ರತಿನಿಧಿ ಎಂಬ ನೆಲೆಯಲ್ಲಿ ಮಾತ್ರ ಮನುಷ್ಯನಿಗೆ ಶಾಂತಿ ಸಿಗಬಲ್ಲದು. ಇದುವೇ ಅನ್ಯಾಯದಿಂದ ರಕ್ಷಿಸಬಲ್ಲುದು. ಅಂತಿಮ ದೈವಿಕ ಗ್ರಂಥ ಕುರ್ಆನ್ ಇದೇ ಮೂಲಭೂತ ಸುಧಾರಣೆಯನ್ನು ಮಾಡಲು ಬಂದಿರುತ್ತದೆ.

## ಆರಾಧನೆಗಳು(ಇಬಾದತ್)

ಯಾವ ರೀತಿಯಲ್ಲಿ ದೊಡ್ಡ ವ್ಯಕ್ತಿಗಳನ್ನು ಹೊಗಳುವುದರ ಮೂಲಕ ಅವರ ಪ್ರೀತಿ ಪಾತ್ರರಾಗಲು ಸಾಧ್ಯವೋ ಅವರಿಗೆ ಉಡುಗೊರೆ, ಕಾಣಿಕೆಗಳನ್ನು ಕೊಟ್ಟು ತಮ್ಮ ಕೆಲಸವನ್ನು ಮಾಡಿಸಿಕೊಳ್ಳಬಹುದೋ ಅದೇ ರೀತಿಯಲ್ಲಿ ದೇವನನ್ನು ಪ್ರಶಂಸಿಸಿದರೆ ದೇವನು ಸಂತುಷ್ಟನಾಗುತ್ತಾನೆ ಎಂದು ಜನಸಾಮಾನ್ಯರು ತಿಳಿದುಕೊಳ್ಳುತ್ತಾರೆ. ಆದುದರಿಂದಲೇ ಜನರು ದೇವಿ-

ದೇವತೆಗಳ ಮುಂದೆ ಪ್ರಶಂಸೆ, ಭಜನೆ ಮಾಡುತ್ತಾರೆ. ವಾದ್ಯಗಳನ್ನು ನುಡಿಸುತ್ತಾರೆ ಮತ್ತು ನೃತ್ಯಗಳನ್ನು ಮಾಡುತ್ತಾರೆ. ತನ್ಮೂಲಕ ದೇವಿ-ದೇವತೆಗಳನ್ನು ಸಂಪ್ರೀತಗೊಳಿಸಲು ಪ್ರಯತ್ನಿಸುತ್ತಾರೆ. ದೇವಿ-ದೇವತೆಗಳ ಮುಂದೆ ನೈವೇದ್ಯವನ್ನರ್ಪಿಸುತ್ತಾರೆ. ಇದರಿಂದ ತಮ್ಮ ಕೆಲಸವು ಸುಗಮವಾಗುವುದೆಂದು ನಿರೀಕ್ಷಿಸುತ್ತಾರೆ. ಇದುವೇ ಆರಾಧನೆ ಮತ್ತು ಪೂಜೆಗಳಾಗಿವೆ. ಆದರೆ ಅಂತಿಮ ದೈವಿಕ ಗ್ರಂಥದಲ್ಲಿ ತಿಳಿಸಲಾಗಿರುವ ಆರಾಧನೆಗಳ ಸ್ವರೂಪವು ಇವುಗಳಿಗಿಂತ ತೀರಾ ಭಿನ್ನವಾದುದಾಗಿದೆ.

ಸಕಲ ವಿಶ್ವದಲ್ಲಿ ದೇವನಿಗೆ ಕೇಂದ್ರೀಯ ಸ್ಥಾನವಿದೆ. ಜಗತ್ತಿನ ಸಕಲ ವಸ್ತುಗಳೂ ಅವನ ಆಜ್ಞೆಯನ್ನು ಪಾಲಿಸುತ್ತದೆ. ಅವನೇ ಸರ್ವಶ್ರೇಷ್ಠ ಜೀವಿಯಾದ ಮನುಷ್ಯನನ್ನು ಭೂಮಿಯಲ್ಲಿ ಉಂಟುಮಾಡಿರುವನು. ಅವನಿಗೆ ಯೋಚಿಸುವ, ವಿಚಾರಿಸುವ, ಅರಿಯುವ ಬುದ್ಧಿಶಕ್ತಿಯನ್ನು ನೀಡಿದನು. ಅವನನ್ನು ಪರೀಕ್ಷಿಸಲಿಕ್ಕಾಗಿ ಸ್ವತಂತ್ರಗೊಳಿಸಿದನು.

ಮನುಷ್ಯನ ಜೀವನವನ್ನು 3 ವಿಭಾಗಗಳಾಗಿ ವಿಂಗಡಿಸಬಹುದು:

1) ಲೌಕಿಕ ಜೀವನ: ನಾವು ಇಂದು ಜೀವಿಸುತ್ತಿರುವ ಈ ಜೀವನವೇ ಲೌಕಿಕ ಜೀವನ.

2) ಪಾರಲೌಕಿಕ ಜೀವನ: ಮನುಷ್ಯ ಮರಣ ಹೊಂದಿದಾಗ ಅವನ ಶರೀರವು ಇಲ್ಲಿರುತ್ತದೆ ಮತ್ತು ಮಣ್ಣಿನಲ್ಲಿ ಒಂದುಗೂಡುತ್ತದೆ. ಆದರೆ ಅವನ ಆತ್ಮವು ಒಂದು ಸ್ಥಾನದಲ್ಲಿ ಸುರಕ್ಷಿತವಾಗಿರುತ್ತದೆ. ಇದನ್ನೇ ಪಾರಲೌಕಿಕ ಜೀವನ(ಬರ್ಝಕ್) ಎನ್ನುತ್ತಾರೆ.

3) ಪರಲೋಕ: ಈ ಜಗತ್ತು ಒಂದು ದಿನ ಛಿನ್ನಭಿನ್ನವಾಗಲಿದೆ. ಬಳಿಕ ದೇವನು ಒಂದು ಸಮತಟ್ಟಾದ ಭೂಮಿಯನ್ನು ನಿರ್ಮಿಸುವನು. ಅಲ್ಲಿ ಯಾರೂ ಉಚ್ಚ ನೀಚರಿರಲಾರರು. ಎಲ್ಲ ಮನುಷ್ಯರನ್ನೂ ಪುನಃ ಜೀವಂತಗೊಳಿಸಲಾಗುವುದು. ದೇವನ ಆಸ್ಥಾನದಲ್ಲಿ ಸಕಲರನ್ನೂ ಒಟ್ಟುಗೂಡಿಸಲಾಗುವುದು ಮತ್ತು ವಿಚಾರಣೆ ಆರಂಭಗೊಳ್ಳುವುದು. ಮನುಷ್ಯರ ಕರ್ಮಗಳ ತಪಾಸಣೆ ಹಾಗೂ ಪರೀಕ್ಷೆಯಲ್ಲಿ ಉತ್ತಮ ಮತ್ತು ಕೆಟ್ಟ ಕರ್ಮಗಳನ್ನು ಲೆಕ್ಕ ಮಾಡುವುದಲ್ಲ, ಬದಲಾಗಿ ತೂಗಿ ನೋಡಲಾಗುವುದು. ಏಕೆಂದರೆ ಅನೇಕ ಕೆಲಸಗಳು ಉತ್ತಮ ಕೆಲಸಗಳಾಗಿರುತ್ತವೆ. ಆದರೆ ಅವುಗಳಿಗೆ ಅಷ್ಟು ಮಹತ್ವವಿರುವುದಿಲ್ಲ. ಸಣ್ಣ ಇರುವೆಗೆ ಆಹಾರವನ್ನು ನೀಡುವುದು. ಪಕ್ಷಿಗಳಿಗೆ ನೀರು ಉಣಿಸಲು ಪಾತ್ರೆಯಲ್ಲಿ ನೀರು ಹಾಕಿ ಮರಕ್ಕೆ ನೇತು ಹಾಕುವುದು ಇತ್ಯಾದಿಗಳು ಉತ್ತಮ ಕೆಲಸಗಳಾಗಿರುತ್ತವೆ. ಆದರೆ ಇವುಗಳ ತೂಕವು ತೊಲೆಗಳ ಲೆಕ್ಕದಲ್ಲಿರುತ್ತದೆ. ಅದೇ ರೀತಿ ಪ್ರಪಂಚದಲ್ಲಿ ಮಾನವ ನಿರ್ಮಿತ ಕಾನೂನುಗಳನ್ನು ಕಿತ್ತೊಗೆದು ಅವುಗಳ ಸ್ಥಾನದಲ್ಲಿ ದೇವನ ನಿಯಮಗಳನ್ನು ಸ್ಥಾಪಿಸಲು ಪ್ರಯತ್ನಿಸುವುದು ಮಹತ್ವಪೂರ್ಣವಾದ ಪುಣ್ಯ ಕಾರ್ಯವಾಗಿದೆ. ತಕ್ಕಡಿಯಲ್ಲಿ ಇದು ಕ್ವಿಂಟಾಲ್ ಲೆಕ್ಕದಲ್ಲಿ ತೂಗುವುದು. ಅದೇ ರೀತಿ ಪಾಪಕರ್ಮಗಳನ್ನೂ ತೂಗಲಾಗುವುದು. ಸಣ್ಣ ಪುಟ್ಟ ಪಾಪಕೃತ್ಯಗಳೂ ಇರುವುವು. ಉದಾಹರಣೆಗೆ ಬಾಳೆ ಹಣ್ಣನ್ನು ತಿಂದು ಅದರ ಸಿಪ್ಪೆಯನ್ನು ಮಾರ್ಗದ ಮಧ್ಯೆ ಎಸೆದು ಬಿಡುವುದು. ಇದರಿಂದ ಯಾರಾದರೂ ದಾರಿಹೋಕರು ಅದರ ಮೇಲೆ ಕಾಲಿಟ್ಟು ಜಾರಿಬೀಳುವ ಸಂಭವವಿರುವುದು. ಯಾವುದಾದರೂ ಗಿಡದ

ಹೂವನ್ನು ಮಾಲಿಕನ ಅನುಮತಿಯಿಲ್ಲದೆ ಕೀಳುವುದು. ಇದನ್ನೂ ತಕ್ಕಡಿಯಲ್ಲಿ ತೂಗಲಾಗುವುದು. ಈ ಪಾಪಕೃತ್ಯಗಳ ಭಾರವು ತೊಲೆಗಳ ಲೆಕ್ಕದಲ್ಲಿರುವುದು. ಅದೇ ಸಮಯದಲ್ಲಿ ಮಾನವ ನಿರ್ಮಿತ ಸಿದ್ಧಾಂತವನ್ನು ಜಗತ್ತಿನಲ್ಲಿ ಸ್ಥಾಪಿಸಲು ಪ್ರಯತ್ನಿಸುವವರು ಮತ್ತು ದೇವನ ಕಾನೂನುಗಳನ್ನು ತಡೆಹಿಡಿಯಲು ಪ್ರಯತ್ನಿಸುವವರು ವಾಸ್ತವದಲ್ಲಿ ದೊಡ್ಡ ಕೆಡುಕು ಮಾಡಿದವರು. ಈ ಪಾಪವನ್ನು ತೂಗಿದಾಗ ತೂಕವು ಕ್ವಿಂಟಾಲ್ ಲೆಕ್ಕದಲ್ಲಿರುವುದು.

ಇವು ಮೂರೂ ಮನುಷ್ಯ ಜೀವನದ ವಿವಿಧ ಕ್ಷೇತ್ರಗಳು. ಲೌಕಿಕ ಜೀವನವು ಬಹಳ ಸಣ್ಣದು. ಆದರೆ ಬಹಳ ಮಹತ್ವಪೂರ್ಣವಾದುದಾಗಿದೆ. ಈ ಇಡೀ ಜೀವನವು ಒಂದು ಪರೀಕ್ಷೆಯಾಗಿದೆ. ಇಲ್ಲಿ ದೇವನಿಂದ ನಮಗೆ ಏನೆಲ್ಲಾ ನೀಡಲ್ಪಡುತ್ತದೋ, ಅವೆಲ್ಲವೂ ಪರೀಕ್ಷೆಯಾಗಿದೆ. ಅದೇ ರೀತಿ ಏನೆಲ್ಲಾ ನಮ್ಮಿಂದ ಕಸಿಯಲ್ಪಡುತ್ತದೋ ಅದೂ ಪರೀಕ್ಷೆಯಾಗಿದೆ.

ದೇವನು ಮನುಷ್ಯನಿಗೆ ಒಂದು ಒಳ್ಳೆಯ ಸಂವಿಧಾನವನ್ನು ನೀಡಿದ್ದಾನೆ. ಈ ಜೀವನ ಸಿದ್ಧಾಂತವನ್ನು ನಮ್ಮ ದೇಶಗಳಲ್ಲಿ ಸ್ಥಾಪಿತಗೊಳಿಸಬೇಕು. ಒಂದು ವೇಳೆ ಮೊದಲೇ ಈ ರೀತಿಯ ವ್ಯವಸ್ಥೆ ಇದ್ದರೆ ಅದನ್ನು ಕೆಟ್ಟುಹೋಗುವುದರಿಂದ ರಕ್ಷಿಸಬೇಕು. ಇದುವೇ ಮನುಷ್ಯನ ಪರೀಕ್ಷೆಯಾಗಿದೆ. ಮನುಷ್ಯ ತನ್ನ ವೈಯಕ್ತಿಕ ಮತ್ತು ಸಾಮೂಹಿಕ ಜೀವನವನ್ನು ಈ ಸಂವಿಧಾನಕ್ಕೆ ಬದ್ಧವಾಗಿ ರೂಪಿಸಬೇಕು. ಈ ರೀತಿ ಮಾಡಿದವರೇ ಪರಲೋಕದಲ್ಲಿ ವಿಜಯಿಗಳಾಗುವರು. ಮನುಷ್ಯನಿಗೆ ತನ್ನ ಕಣ್ಣುಗಳಿಂದ ಕಾಣಲಾಗದ್ದು ಹೃದಯ ಮನಸ್ಸುಗಳಲ್ಲಿ ಬಹಳ ಹೊತ್ತು ನಿಲ್ಲುವುದಿಲ್ಲ. ಇದು ಮನುಷ್ಯನ ದೊಡ್ಡ ಕೊರತೆ. ದೇವನ ಸಂವಿಧಾನದಂತೆ ಕಾನೂನು ಮತ್ತು ಶಾಸನವನ್ನು ರಚಿಸಿ, ಅದರಂತೆ ಜೀವಿಸಬೇಕಿದ್ದರೆ ದೇವನ ಬಗ್ಗೆ ಸರಿಯಾದ ಕಲ್ಪನೆ ಮನಸ್ಸಿನಲ್ಲಿರಬೇಕು. ನಾನೆಲ್ಲಿದ್ದೇನೋ ಅಲ್ಲಿ ದೇವನೂ ಇದ್ದಾನೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನನಗೆ ಅವನನ್ನು ನೋಡಲಾಗದಿದ್ದರೂ ಅವನು ನನ್ನನ್ನು ನೋಡುತ್ತಿದ್ದಾನೆ. ನಾನೇನು ಮಾಡುತ್ತಿದ್ದೇನೆ ಎಂಬುದನ್ನೂ ಅವನು ಬಲ್ಲನು. ಹೃದಯಗಳಲ್ಲಿ ಅಡಗಿರುವ ವಿಷಯಗಳನ್ನೂ ಅವನು ಬಲ್ಲನು. ಇಬ್ಬರು ದೇವಚರರು ನಮ್ಮ ಪ್ರತಿಕ್ಷಣದ ನಡವಳಿಕೆಗಳನ್ನು ದಾಖಲಿಸುತ್ತಿರುವರು. ನಾಳೆ ದೇವನ ಮುಂದೆ ಇದೇ ದಾಖಲೆ(Record)ಯನ್ನು ತೋರಿಸಲಾಗುವುದು. ವಿಜಯಿಗಳಾದವರಿಗೆ ಸ್ವರ್ಗವು ಸಿಗುವುದು ಮತ್ತು ಪರಾಜಿತರಾದವರು ನರಕಕ್ಕೆ ತಳ್ಳಲ್ಪಡುವರು. ಅಲ್ಲಿ ಅವರು ಸದಾ ಕಾಲ ಇರುವರು.

ಮನುಷ್ಯನ ಮನಸ್ಸಿನಿಂದ ದೇವನ ಕಲ್ಪನೆ ಒಂದು ಕ್ಷಣಕ್ಕೂ ಮರೆಯಾಗಬಾರದು. ಇದು ಆರಾಧನೆಗಳ ಕೆಲಸವಾಗಿದೆ. ಒಂದು ವೇಳೆ ಪ್ರತಿಕ್ಷಣ ದೇವನನ್ನು ನೆನಪಿಸಿಕೊಳ್ಳಲು ವ್ಯಕ್ತಿಗೆ ಸಾಧ್ಯವಾದರೆ ಅವನು ದೇವನ ಕಾನೂನುಗಳನ್ನು ಶಿರಸಾ ಪಾಲಿಸುತ್ತಾನೆ. ಅವುಗಳನ್ನು ಮುರಿಯುವುದಿಲ್ಲ. ಎಲ್ಲರೂ ಹೀಗೇ ಆದರೆ ಮಾನವ ಸಮಾಜವು ಅದೆಷ್ಟು ಸುಂದರವಾಗಿರಬಹುದು. ಪ್ರತಿಯೊಬ್ಬ ವ್ಯಕ್ತಿಯೂ ಇನ್ನೊಬ್ಬನಿಗೆ ಸಹಾಯ ಮಾಡಲು ಸದಾ ಸಿದ್ಧನಾಗಿರುವನು. ತನ್ಮೂಲಕ ದೇವನ ಸಂಪ್ರೀತಿ ಗಳಿಸುವುದೇ ಅವನ ಉದ್ದೇಶವಾಗಿರುವುದು. ಹೀಗಾದಲ್ಲಿ ಮನುಷ್ಯ ಜೀವನವು ಸುಂದರವೂ ಲೌಕಿಕ ಜೀವನವು ಸ್ವರ್ಗ ಸದೃಶವೂ ಆಗಬಲ್ಲದು.

ಆರಾಧನೆಗಳಲ್ಲಿ ನಮಾಝ್, ಉಪವಾಸ, ಹಜ್ಜ್, ಝಕಾತ್‌ಗೆ ದೇವನು ವಿಶೇಷ ಮಹತ್ವವನ್ನು ನೀಡಿರುವನು. ನಮಾಝ್ ದೇವನನ್ನು ಸ್ಮರಿಸಲಿಕ್ಕಾಗಿದೆ ಎಂಬುದಾಗಿ ಅಂತಿಮ ದೈವಿಕ ಗ್ರಂಥವು ಹೇಳುತ್ತದೆ. ಮನುಷ್ಯ ದಿನದ 24 ಗಂಟೆಗಳಲ್ಲಿ 5 ಬಾರಿ ದೇವನ ಮುಂದೆ ನಮಾಝ್ ನಿರ್ವಹಿಸುವ ಮೂಲಕ ನಾನು ದೇವನ ದಾಸ ಮತ್ತು ಅವನ ಆಜ್ಞೆಯ ಪ್ರಕಾರ ಜೀವಿಸಲು ಸಿದ್ಧನಿದ್ದೇನೆ ಎಂಬುದನ್ನು ಸಾಬೀತುಪಡಿಸುತ್ತಾನೆ. 24 ಗಂಟೆಗಳಲ್ಲಿ 5 ಬಾರಿ ಒಟ್ಟು ಸೇರಿ ನಮಾಝ್ ನಿರ್ವಹಿಸಿದರೆ ಅಂತಹ ಮನಸ್ಸಿನಿಂದ ದೇವ ಧ್ಯಾನವು ಮರೆಯಾಗಲು ಸಾಧ್ಯವಿಲ್ಲ.

ವರ್ಷದಲ್ಲೊಂದು ಉಪವಾಸದ ತಿಂಗಳು. ಈ ತಿಂಗಳಾದ್ಯಂತ ಮನುಷ್ಯ ಕೆಲವು ವಸ್ತುಗಳನ್ನು ಒಂದು ಸೀಮಿತ ಅವಧಿಯ ವರೆಗೆ ತನ್ನ ಮೇಲೆ ನಿಷಿದ್ಧಗೊಳಿಸುತ್ತಾನೆ. ಉದಾಹರಣೆಗೆ ಆಹಾರ, ನೀರು ಇತ್ಯಾದಿ. ಇವುಗಳು ಮಾನವನ ಅತ್ಯಾವಶ್ಯಕತೆಗಳು. ಆದರೆ ದೇವನ ನಿಯಮವನ್ನು ಅವನು ಮೀರುವುದಿಲ್ಲ. ಒಂದು ವೇಳೆ ಮನುಷ್ಯನಿಗೆ ದೇವ ಭಯವಿಲ್ಲದೇ ಹೋದರೆ ಉಪವಾಸವಿರಲು ಸಾಧ್ಯವಿಲ್ಲ. ಕದ್ದು ಮುಚ್ಚಿ ತಿಂದರೂ ದೇವನ ಹೊರತು ಇನ್ನಾರಿಗೂ ತಿಳಿಯದು. ಆದರೆ, ಪ್ರತಿಕ್ಷಣ ದೇವ ಧ್ಯಾನದಲ್ಲಿರುವ ಮನುಷ್ಯ ಇಂತಹ ಕೆಲಸಗಳಿಗೆ ಇಳಿಯುವುದಿಲ್ಲ. ಈ ತಿಂಗಳಾದ್ಯಂತ ಸಿಗುವ ತರಬೇತಿಯಿಂದಾಗಿ ಮುಂದಿನ ಹನ್ನೊಂದು ತಿಂಗಳೂ ದೇವನ ಆದೇಶದಂತೆ ಜೀವಿಸಲು. ಅವನು ಅನುಮತಿ ಸಿದ್ದನ್ನು ಮಾಡಲು ನಿಷೇಧಿಸಿದವುಗಳಿಂದ ದೂರವುಳಿಯಲು ಸಾಕಷ್ಟು ಶಕ್ತಿಯು ಲಭ್ಯ ವಾಗುತ್ತದೆ. ಈ ಕಾರಣದಿಂದಾಗಿಯೇ ನೈಜ ಉಪವಾಸಿಗ ದೇವನ ಇಚ್ಛೆಗೆ ವಿರುದ್ಧವಾದ ಯಾವುದೇ ಕೆಲಸವನ್ನು ಮಾಡುವುದಿಲ್ಲ.

ಏಕದೇವನ ಹೊರತು ಇತರ ದೇವಿ-ದೇವತೆಗಳನ್ನು ನಂಬುವವರ ಧ್ಯಾನವು ಹರಿಹಂಚಿ ಹೋಗುತ್ತದೆ. ಇದರಿಂದಾಗಿ ವಾಸ್ತವಿಕ ದೇವಧ್ಯಾನದಲ್ಲಿ ಕಡಿತ ಉಂಟಾಗುತ್ತದೆ. ಆದ್ದರಿಂದಲೇ ಪವಿತ್ರ ಕುರ್‌ಆನ್ ಆ ಏಕದೇವನ ಹೊರತು ಇತರ ಯಾವುದೇ ದೇವಿ-ದೇವತೆಗಳನ್ನು ನಂಬದಿರಿ ಎಂದು ಆದೇಶಿಸಿದೆ.

ಆರಾಧನೆಗಳ ಉದ್ದೇಶ ಇದುವೇ ಆಗಿದೆ. ಮನುಷ್ಯ ಪ್ರತಿಕ್ಷಣ ದೇವಭಯ ಹೊಂದಿರಬೇಕು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ದೇವಾಜ್ಞೆಗಳನ್ನು ಪಾಲಿಸಬೇಕು. ಇದುವೇ ಆರಾಧನೆ ಮತ್ತು ಉಪಾಸನೆಗಳ ನಿಜವಾದ ಉದ್ದೇಶವಾಗಿದೆ.

ದೇವನು ಮನುಷ್ಯನಿಗೆ ಒಂದು ಉತ್ತಮ ಸಂವಿಧಾನವನ್ನು ನೀಡಿರುವನು. ಆರಾಧನೆಗಳ ಮೂಲಕ ದೇವನ ಧ್ಯಾನವನ್ನು ಸದಾ ಇಟ್ಟು ಕೊಳ್ಳುವ ವ್ಯವಸ್ಥೆ ಮಾಡಿರುವನು. ಆದುದರಿಂದ ಇವುಗಳಿರುವಾಗ ಎಂದೂ ಮನುಷ್ಯ ಕೆಟ್ಟ ಕೆಲಸದಲ್ಲಿ ನಿರತನಾಗಲು ಸಾಧ್ಯವಿಲ್ಲ.

❄ ❄ ❄